# ಸ್ವಾತಂತ್ರ್ಯ ಹೋರಾಟಗಾರ
# ಸೀತಾರಾಮ ಐಯ್ಯಂಗಾರ್ ಮತ್ತು ಪದ್ಮ ಸೀತಾರಾಂ
# ನೀತಿಕಥೆಗಳು ಮತ್ತು ಕವನಗಳು

ಲೇಖಕರು

**ಕುಮಾರ್. ಆರ್.ಎ**

ಪ್ರಕಾಶಕರು

**ತಾರಾ ಪ್ರಿಂಟ್ಸ್**

287/F21, ರಾಮಾನುಜ ರಸ್ತೆ

ಫೋರ್ಟ್ ಮೊಹಲ್ಲಾ, ಮೈಸೂರು–570 004

# Swathanthrya Horatagarara Sitarama Ayangar Mattu Padma Sitaram Neethikathegalu Mattu Kavanagalu

*Written by :*

**Kumar R.A.**

Published by :

**Tara Prints**

# 287/F21, Ramanuja Road

Fort Mohalla

Mysuru-570004

Pages : iv + viii+ 96 = 108

First Edition : 2016

© : Publisher

Copies : 1000 copies

Price : 90/-

ಪುಟಗಳು : iv + viii+ 96 = 108

ಮೊದಲ ಮುದ್ರಣ : 2016

© : ಪ್ರಕಾಶಕರದು

ಪ್ರತಿಗಳು : 1000

ಬೆಲೆ : ರೂ. 90/-

ಮುಖಪುಟ ವಿನ್ಯಾಸ : ಶ್ರೀಮತಿ ಲತಾ ಜಿ.ವಿ. ಮೈಸೂರು.

ಅಕ್ಷರ ಜೋಡಣೆ : ಶ್ರೀಮತಿ ಪವಿತ್ರಶ್ರೀಕಾಂತ್, ಮೈಸೂರು

ಮುದ್ರಣ : ತಾರಾ ಪ್ರಿಂಟ್ಸ್.

ಸಂಗ್ರಾಹಕನ ನುಡಿ

ನನ್ನ ಶ್ರೀಮತಿಯನ್ನು ವರಿಸಿದ ಕಾಲಕ್ಕೆ ನಮ್ಮ ಮಾವ ಮೈಸೂರಿನ ದಿವಾನರ ರಸ್ತೆ ಹಾಗೂ ಡಿ.ಸುಬ್ಬಯ್ಯ ರಸ್ತೆ ಲಿಂಕ್(ಕೂಡು)ರಸ್ತೆಯಲ್ಲಿ 'ಶ್ವೇತಾದ್ರಿ ಪ್ರಿಂಟರ್ಸ್' ಎಂಬ ಒಂದು ಪ್ರಿಂಟಿಂಗ್ ಪ್ರೆಸ್ ಇಟ್ಟುಕೊಂಡಿದ್ದರು. ಆ ಪ್ರೆಸ್ಸಿನಲ್ಲಿ ಮುದ್ರಣವಾಗಿದ್ದ ಹಲವಾರು ಚಿಕ್ಕಚಿಕ್ಕ ಪುಸ್ತಕಗಳ ಕಡೆಗೆ ನನ್ನ ಗಮನ ಹರಿದಿತ್ತು. ನಾನು ಹಾಗೆ ಗಮನಿಸಿದ ಮೊದಲ ಪುಸ್ತಕ 'ಅಣ್ಣ ತಮ್ಮ ಬೆಟ್ಟ'. ಆ ಕಥೆಯನ್ನು ಬರೆದುದು ನನ್ನ ಅತ್ತೆಯವರೇ ಆದರೆ ಅವರ ಮೊಮ್ಮೊಗನ ಹೆಸರು ಪ್ರಕಾಶಕನೆಂದು ಇದ್ದುದು ನೆನಪಿದೆ. ಮತ್ತೊಂದು ಕಥೆ 'ಸ್ವರ್ಗ-ನರಕ'. ಈ ಕಥೆಗಳನ್ನು ಬಿಳಿಗಿರಿಬೆಟ್ಟದಲ್ಲಿದ್ದ ವೇಳೆ ಬರೆದಿದ್ದರೆಂದು ಅವರ ಹಿರಿಮಗಳು ಅರ್ಥಾತ್ ನನ್ನ ಶ್ರೀಮತಿ ಇಂದಿಗೂ ನೆನಪಿಸಿಕೊಳ್ಳುತ್ತಾಳೆ.

ನನ್ನ ಮಾವನವರ ನಿಧನಾನಂತರ, ಅವರ ಬೀರುವನ್ನು ತಡಕಾಡುತ್ತಿದ್ದಾಗ , ಅಕಸ್ಮಾತ್ ಒಂದು ನೋಟ್‌ಪುಸ್ತಕ ಕೈಗೆ ಸಿಕ್ಕಿತು. ಅದರಲ್ಲಿ ನಮ್ಮ ಮಾವನವರ ಸ್ವಹಸ್ತದಲ್ಲಿ ಬರೆದ ಹಲವಾರು ಕಥೆಗಳು ಗೋಚರಿಸಿದವು. ಅವುಗಳಲ್ಲಿ ಕೆಲವಾದರೂ ನಮ್ಮ ಅತ್ತೆಯವರು ಬರೆದಿದ್ದ ಕಥೆಗಳಾಗಿದ್ದವು.

ಆದರೆ ಅವುಗಳಲ್ಲಿ ಯಾವುವು ನಮ್ಮ ಅತ್ತೆಯವರು ಬರೆದವು ಯಾವುವು ನಮ್ಮ ಮಾವ ಬರೆದುದು ಎನ್ನುವ ಬಗೆಗೆ ಸಂಶಯವಿದ್ದ ಕಾರಣ, ಅವುಗಳನ್ನು ಒಟ್ಟಾರೆ 'ಪದ್ಮ ಸೀತಾರಾಂ ನೀತಿಕಥೆಗಳು' ಎನ್ನುವ ಟೈಟಲ್ ಕೊಟ್ಟಿದ್ದೇನೆ.

ಮೊದಲಿಗೆ ಶ್ರೀಮತಿ ಪದ್ಮ ಮತ್ತು ಶ್ರೀ ಸೀತಾರಾಂ ಐಯ್ಯಂಗಾರ್ಯರ ಪರಿಚಯಾತ್ಮಕ ಕೆಲವು ಲೇಖನಗಳನ್ನು ನೀಡಿದ ನಂತರ ಅವರು ಬರೆದ ಕಥೆ, ಕವನಗಳನ್ನು ನೀಡಿದ್ದೇನೆ.

ಕುಮಾರ್.ಆರ್.ಎ

# ಮುನ್ನುಡಿ

ಹಿರಿಯ ಸ್ವಾತಂತ್ರ್ಯ ಹೋರಾಟಗಾರರೂ, ನಿಜವಾದ ಅರ್ಥದಲ್ಲಿ ಗಾಂಧೀವಾದಿಗಳೂ ಆಗಿದ್ದ ದಿ. ಸೀತಾರಾಮ್ ಅಯ್ಯಂಗಾರ್ ಮತ್ತು ಅವರ ಧರ್ಮಪತ್ನಿ ಪದ್ಮಾ ಸೀತಾರಾಮ್ ಅಯ್ಯಂಗಾರ್ ಅವರು ಹೇಳಿದ ಕಥೆಗಳ ಸಂಗ್ರಹಕ್ಕೆ ನಾಲ್ಕು ಮಾತು ಬರೆಯಲು ಧನ್ಯತೆಯೊಂದಿಗೆ ಸಂತಸವೂ ಆಗುತ್ತಿದೆ. ಹಾಗೆಯೇ ಅಂತಹ ಹಿರಿಯರ ಪುಸ್ತಕಕ್ಕೆ ಮುನ್ನುಡಿ ರೂಪದ ಮಾತುಗಳನ್ನು ಬರೆಯಲು ನಾನೆಷ್ಟು ಅರ್ಹ ಎಂಬ ಪ್ರಶ್ನೆಯೂ ಕಾಡುತ್ತಿದೆ.

ದಿ. ಸೀತಾರಾಮ್ ಅಯ್ಯಂಗಾರ್ ಅವರ ಅಳಿಯಂದಿರಾದ ಶ್ರೀ ಕುಮಾರ್ ಅವರು ತಮ್ಮ ಕಂಡಿದ್ದು–ಕಾಡಿದ್ದು, ಚೌಕಟ್ಟಿಲ್ಲದ ಕವನಗಳು, ಆಯುರ್ವೇದಿಕ್ ಇತ್ಯಾದಿ ಅನುಭವಗಳು ಮುಂತಾದ ಕೃತಿಗಳ ಮೂಲಕ ಹಾಗೂ ಅಲ್ಲಲ್ಲಿ ಭಾಗವಹಿಸುವ ಸಾಹಿತ್ಯ ಸಮಾರಂಭಗಳ ಮೂಲಕ ಸಾಹಿತ್ಯಾಸಕ್ತರಿಗೆ ಚಿರಪರಿಚಿತರಾಗಿದ್ದಾರೆ. ವಿಶ್ರಾಂತ ಪ್ರಾಧ್ಯಾಪಕರಾಗಿ ನಿವೃತ್ತಿ ಜೀವನದ ಸುಖ ಅನುಭವಿಸುತ್ತಿದ್ದರೂ ಸದಾ ಚಟುವಟಿಕೆಯ ಚಿಲುಮೆಯಾಗಿ ನನ್ನಂತಹ ಕಿರಿಯರಿಗೆ ಮಾರ್ಗದರ್ಶಕರೂ ಆಗಿದ್ದಾರೆ. ಪ್ರಸ್ತುತ ದಿ. ಸೀತಾರಾಮ್ ಅಯ್ಯಂಗಾರ್ ಹಾಗೂ ಪದ್ಮಾ ದಂಪತಿ ತಮ್ಮ ಬದುಕಿನ ಅವಧಿಯಲ್ಲಿ ಹೇಳಿದ್ದ, ತಾವು ಅವರಿಂದ ಕೇಳಿದ್ದ ನೀತಿಕಥೆಗಳು ಮತ್ತು ಕವನಗಳನ್ನು ಸಂಗ್ರಹಿಸಿ ಒಂದು ಹೊತ್ತಿಗೆ ತರುತ್ತಿರುವುದು ತುಂಬಾ ಸಂತಸಕರ ಸಂಗತಿ.

ಆಧುನಿಕತೆಯ ಬೆನ್ನಟ್ಟಿ ಹೊರಟಿರುವ ಇಂದಿನ ಯುವಪೀಳಿಗೆ ಹಳೆಯ ಆಚರಣೆ, ಸಂಪ್ರದಾಯಗಳನ್ನು ಗೊಡ್ಡು ಸಂಪ್ರದಾಯಗಳೆಂದು ಮೂಗುಮುರಿಯುತ್ತ, ಹಣ, ಐಷರಾಮಿ ಜೀವನದ ಬೆನ್ನ ಹಿಂದೆ ಬಿದ್ದು ಬದುಕಿನ ಮೌಲ್ಯಗಳನ್ನೇ ಕಳೆದುಕೊಳ್ಳುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ಪದ್ಮಾ ಸೀತಾರಾಮ್ ಅಯ್ಯಂಗಾರ್ ದಂಪತಿ ತಮ್ಮ ಬದುಕಿನ ಮೌಲ್ಯಗಳ ಸಾರಸಂಗ್ರಹವನ್ನೆಲ್ಲ ಸಂಗ್ರಹಿಸಿ, ಅವುಗಳನ್ನೂ ಕಥೆ, ಕವನವಾಗಿಸಿ ನೀಡಿದ ಕಥೆಗಳು ನಮ್ಮ ಯುವಪೀಳಿಗೆಗೆ ಮೌಲ್ಯಯುತ ಜೀವನದ ಪಥಕ್ಕೆ ಬೆಳಕು ನೀಡುವ ದಾರಿದೀಪವಾಗಿದೆ.

ಡಿ. ಸೀತಾರಾಮ್ ಅಯ್ಯಂಗಾರ್ ಪದ್ಮಾ ದಂಪತಿಗಳ ಸಾರ್ಥಕ ಬದುಕಿನ ಮೌಲಿಕ ಚಿತ್ರಣದೊಂದಿಗೆ. ಅವರ ಸ್ವಾತಂತ್ರ್ಯದ ಹೋರಾಟ, ಖಾದಿಯತ್ತ ಅವರ ಒಲವು, ಹರಿಜನ, ಗಿರಿಜನ ಸೇವೆಯ ಆದರ್ಶಗಳನ್ನು ಚಿತ್ರಿಸುವ ಜೀವನ ಗಾಥೆಯ ಚಿತ್ರಣದೊಂದಿಗೆ ಕೃತಿ ಆರಂಭಗೊಳ್ಳುತ್ತದೆ. ಪತಿಗೆ ತಕ್ಕ ಸತಿಯಾಗಿ ಶ್ರೀಮತಿ ಪದ್ಮಾರವರು ಆಚಾರ್ಯವಿನೋಬಾಬಾವೆ ಅವರಿಗೆ ತಮ್ಮ ಆಭರಣಗಳನ್ನೇ ದಾನವಾಗಿ ನೀಡಿದ ಘಟನೆ ಮನಸೆಳೆಯುತ್ತದೆ. ವೃದ್ಧರಿಗಾಗಿ ವೃದ್ಧಾಶ್ರಮ ತೆರೆದು ಬದುಕಿನ ಕೊನೆಯ ಘಟ್ಟದವರೆವಿಗೂ ನೊಂದ ಹಿರಿಯಜೀವಿಗಳಿಗೆ ಆಸರೆಯಾದ ಪದ್ಮಾ ಸೀತಾರಾಮ್ ಅಯ್ಯಂಗಾರ್ ದಂಪತಿಗಳ ಬದುಕು ಇಂದಿನ ಸೇವಾಸಕ್ತ ಯುವಪೀಳಿಗೆಗೆ ಸ್ಫೂರ್ತಿಯ ಚಿಲುಮೆ.

ಅದನ್ನು ಬಿಟ್ಟರೆ. ಇಲ್ಲಿರುವ 15 ಕಥೆಗಳು ಮತ್ತು 4 ಸರ್ವೋದಯ ಗೀತೆಗಳು ಮತ್ತು 4 ಕವಿತೆಗಳು ಗಾಂಧೀ ತತ್ವದ ಹಿನ್ನೆಲೆಯಲ್ಲಿ ಸರ್ವೋದಯದ ಮಹತ್ವವನ್ನು. ಸಾರುವ ಜೊತೆಜೊತೆಗೆ ಶ್ರೀಮತಿಯವರ ಕವಿತೆಗಳು ಶ್ವೇತಾದ್ರಿ ರಂಗನ ಮಹಿಮೆ. ಬಣ್ಣದ ಹಕ್ಕಿ. ಆಚಾರ್ಯವಿನೋಬಾಭಾವೆಯವರನ್ನು ಚಿಣ್ಣರಿಗೆ ಪರಿಚಯಿಸಿ ಕಿರುಗೀತೆಗಳು ಸುಂದರವಾಗಿ ಮೂಡಿಬಂದಿವೆ. ಜನಪ್ರಿಯ ಗೀತೆಗಳ ರಾಗವನ್ನು ಅದಕ್ಕೆ ಅಳವಡಿಸಿರುವುದು ಹಾಡಲು ಸುಲಭವಾಗಿದೆ.

ಕಥೆಗಳ ವಿಷಯಕ್ಕೆ ಬರುವುದಾದರೆ ಇಲ್ಲಿರುವ ಬಹುಪಾಲು ಕಥೆಗಳು ಬೆಳಕು ಮಾಸಪತ್ರಿಕೆಯಲ್ಲಿ ಪ್ರಕಟಗೊಂಡಿವೆ. ಎಲ್ಲಾ ಕಥೆಗಳಿಗೂ ಮೂಲಾಧಾರ ಬದುಕಿನ ಮೌಲ್ಯಗಳು ಮತ್ತು ಮರೆಯಾಗುತ್ತಿರುವ ನೈತಿಕತೆ ಮತ್ತು ನೈತಿಕತೆ ತಳಹದಿಯ ಮೇಲೆ ನಿಂತ ಕಥೆಗಳು ಮಕ್ಕಳೊಂದಿಗೆ ದೊಡ್ಡವರನ್ನು ಆಕರ್ಷಿಸುವುದು ವಿಶೇಷ. ದೊಡ್ಡ ದೊಡ್ಡ ಪದಗಳನ್ನು ಬಳಸದೆ. ತೀರ ಸರಳವಾದ ತಿಳಿಗನ್ನಡದಲ್ಲಿ ಇಲ್ಲಿನ ಕಥೆಗಳನ್ನು ಹೇಳಿರುವುದು ಓದುಗರಿಗೆ ಕಥೆ ಓದುವ ಕುತೂಹಲದ ಜೊತೆಗೆ ಒಂದೇ ಬಾರಿಗೆ ಇಡೀ ಪುಸ್ತಕವನ್ನು ಓದುವ ಆಸಕ್ತಿ ಬೆಳೆಸುವುದು ಕುತೂಹಲಕಾರಿ ಸಂಗತಿ.

ಇಲ್ಲಿನ ಪ್ರತಿಯೊಂದು ಕಥೆಗಳಲ್ಲಿ ಒಂದೊಂದು ಮೌಲ್ಯವಿದೆ. ಅಣ್ಣ ತಮ್ಮ ಪೆಟ್ಟು ಕಥೆ ಸಹೋದರ ಪ್ರೀತಿಯನ್ನು ಸಾರಿದರೆ. ದೇವರ ದರ್ಶನ ಕಥೆ ಭಗವಂತ ಪ್ರಾಣಿ. ಪಕ್ಷಿ, ಭಿಕ್ಷುಕ ಯಾವ ರೂಪದಲ್ಲಾದರೂ ಬರಬಹುದು ಆತನನ್ನು ಗುರುತಿಸುವ ಒಳಗಣ್ಣು ಬೇಕು ಎಂಬುದನ್ನು ಪರಿಣಾಮಕಾರಿಯಾಗಿ ಹೇಳುತ್ತದೆ. ಈ ಕಥೆ ಓದುವಾಗ ಕನಕದಾಸರು ತಮ್ಮ [illegible] ಎತ್ತರಿಗೆ ದೇವರ ದರ್ಶನ ಮಾಡಿಸಿದ ಕಥೆ ನೆನಪಿಗೆ ಬರುತ್ತದೆ. ದೈವಭಕ್ತಿ. ರಾಜನಿಷ್ಠೆ ಕಥೆಯು ದೇವರ ಮೇಲಿನ ಭಕ್ತಿಯನ್ನು ಬಿಡಲಾಗದೆ. ರಾಜನ ತೋಟದಲ್ಲಿಯೇ ಹಣ್ಣುಗಳನ್ನು ಕದ್ದವರಿಗೆ ಮನಸ್ಸು ಬಿಚ್ಚಿದಾಗ ರಾಜರ

ಬಳಿ ತೆರಳಿ ಸತ್ಯಸಂಗತಿ ತಿಳಿಸಿದಾಗ ಮಹಾರಾಜರೂ ವಿಶಾಲಮನಸ್ಸಿನಿಂದ ಅದನ್ನು ಕ್ಷಮಿಸುವ ಕಥಾಹಂದರವನ್ನು ಹೊಂದಿದ್ದು ಅಂದಿನ ಅರಸರ ಔದಾರ್ಯ, ಪ್ರಜೆಗಳ ರಾಜನಿಷ್ಠೆಯನ್ನು ತಿಳಿಸಿಕೊಡುತ್ತದೆ. ಗ್ರಾಮನ್ಯಾಯ ಅಂದಿನ ನ್ಯಾಯ ವ್ಯವಸ್ಥೆಯನ್ನು ಚಿತ್ರಿಸುವಲ್ಲಿ ಯಶಸ್ವಿಯಾಗಿದೆ. ಸಿಕ್ಕು ಸಿಕ್ಕಾದ ಪ್ರಕರಣವೊಂದನ್ನು ಹಸುಕರುಗಳ ಸಂದರ್ಭದಲ್ಲಿ ಅಂದಿನ ಅನಕ್ಷರಸ್ಥ ಗ್ರಾಮಸ್ಥರು ಮತ್ತು ಉಪಾಧ್ಯಾಯರು ಸೇರಿ ಹೇಗೆ ಬಿಡಿಸಿದರೆಂಬುದು ಮನನೀಯವಾಗಿದೆ. ಚಿಟ್ಟೆಯ ಬಿಂಬ ಕಥೆ ಸ್ವಲ್ಪಮಟ್ಟಿಗಿನ ಜಾನಪದೀಯ ಹಿನ್ನೆಲೆ ಹೊಂದಿದ್ದರೂ, ಒಳ್ಳೆಯ ಮನಸ್ಸುಗಳ ವ್ಯಕ್ತಿಯ ಮನಸ್ಸತ್ವಕ್ಕೆ ಸದಾ ಜಯ ಸಿಗುವುದೆಂಬ ಸಾರ್ವಕಾಲಿಕ ಸತ್ಯವನ್ನು ತಿಳಿಸುವ ಕಥೆಯಾಗಿದೆ. ರಾಮಯ್ಯನನ್ನು ಕೊಲ್ಲಬಂದ ಭರಮಪ್ಪನ ಕಡೆಯವರು ರಾಮಯ್ಯನ ಒಳ್ಳೆಯತನಕ್ಕೆ ಮನಸೋತು ತಾವು ಬಂದ ಕಾರಣ ತಿಳಿಸಿ ಶರಣಾದ ಘಟನೆ ಮನಸ್ಸಿಗೆ ತಾಕುವಂತಿದೆ. ಮಹಾರಾಜರ ಔದಾರ್ಯವೂ ಕಣ್ಕಟ್ಟುವಂತೆ ಚಿತ್ರಿತವಾಗಿದೆ. ಇನ್ನು 'ಗಾಂಧೀಜಿಯ ಕಥೆ' ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಕುರಿತಾದ ಜೀವನಗಾಥೆಯೊಂದಿಗೆ ಭಾರತ ಸ್ವಾತಂತ್ರ್ಯ ಸಂಗ್ರಾಮದ ಕಿರುಚಿತ್ರಣವನ್ನೂ ನೀಡುವುದರಲ್ಲಿ ಯಶಸ್ವಿಯಾಗಿದೆ. ಯಾರು ಉತ್ತಮ ಮಗ ಎಂಬುದನ್ನು 'ಕಣ್ಮಣಿ' ಕಥೆ ಪರಿಣಾಮಕಾರಿಯಾಗಿ ಹೇಳುತ್ತದೆ. ನಾಲ್ವರು ಹೆಂಗಸರ ಮಕ್ಕಳ ಪೈಕಿ ಮೂವರು ದೈಹಿಕವಾಗಿ ಬಲಿಷ್ಠರಾಗಿದ್ದರೂ ತಾಯಿಗೆ ನೆರವು ನೀಡದೆ ಹಾಗೆಯೇ ಹೋದರೆ ಒಬ್ಬ ಮಾತ್ರ ತನ್ನ ತಾಯಿಯ ನೆರವಿಗೆ ಧಾವಿಸಿಬರುವ, ಇತರರಿಗೂ ಸಹಾಯ ಮಾಡುವ ಗುಣ ಇಂದಿನ ಪೀಳಿಗೆಗೆ ಮಾದರಿಯಾಗಿದೆ.

ಹೀಗೆ ಎಲ್ಲ ಕಥೆಗಳ ಅಂತಸ್ಸತ್ವವನ್ನು ಹೇಳುತ್ತಾ ಹೋದರೆ ಮುನ್ನುಡಿಯೇ ಪುಸ್ತಕದ ಬಹುಪಾಲನ್ನು ಆಕ್ರಮಿಸುವ ಹೆದರಿಕೆಯಿಂದ ಇಲ್ಲಿನ ಮತ್ತಷ್ಟು ಕಥೆಗಳ ಬಗ್ಗೆ ಏನನ್ನೂ ಹೇಳಲು ಹೋಗುವುದಿಲ್ಲ. ಮಾಯದ ಟೋಪಿ, ರುದ್ರಾಚಾರಿಯ ಶಿಲ್ಪಗಳು, ಶ್ರದ್ಧಾವಾನ್ ಲಭತೇ ಸರ್ವಂ, ಸ್ವರ್ಗನರಕ, ಉದ್ಭವಲಿಂಗ ಕಥೆಗಳು ನಿಜಕ್ಕೂ ಮೌಲಿಕವಾಗಿವೆ, ಮಹತ್ವದ್ದಾಗಿವೆ.

ಹಳೆಯ ತಲೆಮಾರಿನ ಹಿರಿಯ ಜೀವಗಳೆರಡೂ ಮಕ್ಕಳ ಮುಂದೆ, ತಮ್ಮದೇ ವೃದ್ಧಾಶ್ರಮದ ವಾಸಿಗಳ ಮುಂದೆ ಹೇಳಬಹುದಾದ ಈ ಕಥೆಗಳು ಸಾಹಿತ್ಯ ಶಾರದೆಗೆ ಸಮರ್ಪಿಸಲೆಂದು ಅಚ್ಚುಕಟ್ಟಾಗಿ ಜೋಡಿಸಿದ 'ಕಥಾಮುತ್ತಿನ ಹಾರ'ವಾಗಿದೆಯೆಂದರೆ ಅತಿಶಯೋಕ್ತಿಯಲ್ಲ. ಪುಸ್ತಕದ ಎರಡು ಪುಟಗಳಲ್ಲಿ ಸೀತಾರಾಮ್ ಅಯ್ಯಂಗಾರ್ ಪದ್ಮಾ ಇವರ ಕಾಯನಿರ್ಮಾಪಕೆಯ ಚಿತ್ರಗಳನ್ನು ನೀಡಿರುವುದು ಪುಸ್ತಕಕ್ಕೆ ಮತ್ತಷ್ಟು ಶೋಭೆ ತಂದಿದೆ.

ಇಂತಹುದೊಂದು ಕೃತಿಯನ್ನು ಶ್ರಮಪಟ್ಟು ಸಂಪಾದಿಸಿ, ಮುದ್ರಿಸಿ ಕನ್ನಡ ಸಾರಸ್ವತ ಲೋಕಕ್ಕೆ ಸಮರ್ಪಿಸುತ್ತಿರುವ ಹಿರಿಯರಾದ ಶ್ರೀ ಆರ್.ಎ.ಕುಮಾರ್ ಅವರನ್ನು ಗೌರವದಿಂದ ಅಭಿವಂದಿಸುತ್ತಾ ಅವರಿಂದ ಮತ್ತಷ್ಟು ಮೌಲಿಕ ಕೃತಿಗಳು ಹೊರಬರಲೆಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

ರಂಗನಾಥ್ ಮೈಸೂರು

ಸಂಪಾದಕ: ಸವಿಗನ್ನಡ ಪತ್ರಿಕೆ

| ಕ್ರ. ಸಂ. | ಶೀರ್ಷಿಕೆ | ಪುಟ ಸಂಖ್ಯೆ |
|---|---|---|
| 1 | ವಾತ್ಸಲ್ಯಧಾಮಕ್ಕೆ ಒದಗಿಬಂದ ಬೆಳಕು | 1–10 |
| 2 | ಅಣ್ಣ ತಮ್ಮ ಬೆಟ್ಟ | 11–19 |
| 3 | ದೇವರ ದರ್ಶನ | 20–25 |
| 4 | ದೈವಭಕ್ತಿ, ರಾಜನಿಷ್ಠೆ | 26–29 |
| 5 | ಗ್ರಾಮನ್ಯಾಯ | 30–32 |
| 6 | ಜಟ್ಟಿಯ ಜಂಬ | 33–42 |
| 7 | ಕಣ್ಮಣಿ | 43–45 |
| 8 | ಮಾಯದ ಟೋಪಿ | 46–55 |
| 9 | ಒಗ್ಗಟ್ಟಿನಲ್ಲಿ ಬಲವಿದೆ | 56–59 |
| 10 | ರುದ್ರಾಚಾರಿಯ ಶಿಲ್ಪಗಳು | 60–62 |
| 11 | ಶ್ರದ್ಧಾವಾನ್ ಲಭತೇ ಸರ್ವಂ ಅರ್ಥಾತ್ ಶ್ರದ್ಧೆಯಿಂದ ಸಾಧಿಸಲಾಗದ್ದು ಯಾವುದೂ ಇಲ್ಲ | 63–67 |
| 12 | ಸ್ವರ್ಗ ನರಕ | 68–72 |
| 13 | ಉದ್ಭವ ಲಿಂಗ | 73–75 |
| 14 | ಗಾಂಧೀಜಿ ಕಥೆ | 76–90 |
| 15 | ಸರ್ವೋದಯ ಗೀತೆಗಳು | 91–39 |
| 16 | ವಿನೋಬಾ ಕುರಿತು ಗೀತೆ | 94 |
| 17 | ಇತರ ಕವನಗಳು | 95–96 |

# ವಾತ್ಸಲ್ಯಧಾಮಕ್ಕೆ ಒದಗಿಬಂದ ಬೆಳಕು

ಅಂದು 2009 ರ ಜನವರಿ 30. ಮಹಾತ್ಮ ಗಾಂಧಿ ಹುತಾತ್ಮರಾದ ದಿವಸ. ಇಡೀ ದೇಶ ಬೆಳಿಗ್ಗೆ 11 ಘಂಟೆಗೆ ಹುತಾತ್ಮರ ನೆನಪಿಗೆ ಒಂದು ನಿಮಿಷ ಮೌನ ಆಚರಿಸುತ್ತದೆ. ಈ ಭಾರಿಯ ಅಂತಹ ಕಾರ್ಯಕ್ರಮಕ್ಕೆ ಮೈಸೂರಿನ ರಂಗಾಚಾರ್ಲು ಪುರಭವನದಲ್ಲಿ ಸಕಲ ಸಿದ್ಧತೆ ನಡೆದಿತ್ತು. ಅಂದೇ ಗಾಂಧಿಚೌಕದಲ್ಲಿ ಸ್ವರ್ಣಲೇಪಿತ ಗಾಂಧಿಪ್ರತಿಮೆ ಅನಾವರಣ ಕಾರ್ಯಕ್ರಮ. ಮೈಸೂರಿನ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀ ಕೆ.ಎಸ್.ಸೀತಾರಾಮ ಐಯ್ಯಂಗಾರ್ ಎರಡೂ ಕಾರ್ಯಕ್ರಮದ ಮುಖ್ಯ ಅತಿಥಿ. ನಿಗದಿತ ಸಮಯಕ್ಕೆ ಸರಿಯಾಗಿ ಪುರಭವನದಲ್ಲಿ ವೇದಿಕೆ ಏರಿದ ಸೀತಾರಾಮ ಐಯ್ಯಂಗಾರ್ "ಇಂದು ಭಾಷಣ ಬೇಡ; ಎಲ್ಲರಿಗೂ ಗಾಂಧಿಯವರು ನಂಬಿದ ತತ್ವಗಳ ಪ್ರತಿಜ್ಞಾವಿಧಿ ಬೋಧಿಸುತ್ತೇನೆ. ದಯಮಾಡಿ ಎಲ್ಲರೂ ಎದ್ದುನಿಲ್ಲಿ" ಎಂದು ಪ್ರತಿಜ್ಞಾವಿಧಿ ಬೋಧಿಸಲು ಎದ್ದುನಿಂತವರೇ ಕುಸಿದುಬಿದ್ದರು. ಏನಾಯಿತು ಎಂದು ತಿಳಿಯುವುದರೊಳಗೆ ಅವರ ಪ್ರಾಣಪಕ್ಷಿ ಹಾರಿಹೋಗಿತ್ತು. ಸಭೆಯಲ್ಲಿ ಕೋಲಾಹಲದ ಜೊತೆಗೆ ಎಲ್ಲರೂ."ಎಂತಹ ಸಾವು! ಬಯಸಿದರೂ ಬಾರದ ಸಾವು ಅದೂ ಇಂತಹ ಸಂದರ್ಭದಲ್ಲಿ" ಎನ್ನುವವರೇ! ಔಪಚಾರಿಕವಾಗಿ ಆಸ್ಪತ್ರೆಗೆ ಸಾಗಿಸಿ, ನಂತರ ಆಂಬ್ಯುಲೆನ್ಸ್‌ನಲ್ಲಿ ಅವರ ದೇಹವನ್ನು ಅವರು ನಡೆಸುತ್ತಿದ್ದ ವೃದ್ಧಾಶ್ರಮದ ಮುಂದೆ ಕ್ಷಣಕಾಲ ನಿಲ್ಲಿಸಿ, ನಂತರ ಅವರ ಹಿರಿಮಗನ ಮನೆಗೆ ತರಲಾಯಿತು.

ಮಹಾನಗರಪಾಲಿಕೆಯ ಮೇಯರ್, ವಿಶ್ವವಿದ್ಯಾನಿಲಯದ ಕುಲಪತಿ, ಜಿಲ್ಲಾಧಿಕಾರಿ, ಗಾಂಧಿ ವೇದಿಕೆಯ ಸದಸ್ಯರು, ಹೀಗೆ ನೂರಾರು ಮಂದಿ ಬಂದು ತಮ್ಮ ಅಂತಿಮ ನಮನ ಸಲ್ಲಿಸಿದರು. ಅಂದು ಸಂಜೆ ಅವರ ಅಂತ್ಯಕ್ರಿಯೆಯನ್ನು ಅವರ ಇಬ್ಬರು ಗಂಡುಮಕ್ಕಳು ನೆರವೇರಿಸಿದರು. 13ನೇ ದಿನದ ಕ್ರಿಯಾಕರ್ಮಗಳವರೆಗೆ ಎಲ್ಲ ಅಚ್ಚುಕಟ್ಟಾಗಿ ನಡೆಯಿತು. ಬೆಂಗಳೂರಿಂದ ಪಶ್ಚಿಮವಾಹಿನಿ ಸಮ್ಮೇಳನಕ್ಕೆ ಬಂದಿದ್ದ ಹೆಚ್.ಎಸ್.ದೊರೆಸ್ವಾಮಿ, ಸತ್ಯವ್ರತ, ಅವರ ಪತ್ನಿ ಲಕ್ಷ್ಮಿ , ಮೇಲುಕೋಟೆ ಜನಪದ ಸೇವಾ ಟ್ರಸ್ಟಿನ ಕೌಲಗಿ ಮುಂತಾದವರು 13ನೇ ದಿನದ ವೈಕುಂಠ ಸಮಾರಾಧನೆಗೆ ಬಂದುಹೋದರು. ಅವರ ನೆನಪಿನಲ್ಲಿ ಜೆ.ಎಸ್.ಎಸ್. ಕಾನೂನು ಕಾಲೇಜಿನಲ್ಲಿ ಒಂದು ವಿಚಾರ ಸಂಕಿರಣವೇ ಏರ್ಪಾಡಾಯಿತು.

ಶ್ರೀ ಕೆ.ಎಸ್. ಸೀತಾರಾಮ ಐಯ್ಯಂಗಾರ್ ವಿದ್ಯಾರ್ಥಿದೆಸೆಯಿಂದಲೇ ಸಮಾಜಕ್ಕಾಗಿ/ ದೇಶಕ್ಕಾಗಿ ಏನನ್ನಾದರೂ ಮಾಡಬೇಕೆಂಬ ಆಸೆಹೊತ್ತ ಯುವಕ. ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಇಂಟರ್‌ಮೀಡಿಯಟ್ ಓದುವಾಗ ನಡೆದ ವಿದ್ಯಾರ್ಥಿ ಚಳುವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು, ಇಂದಿನ ರಾಮಸ್ವಾಮಿ ಸರ್ಕಲ್ ಗೋಲೀಬಾರ್‌ಗೆ ಪ್ರತ್ಯಕ್ಷ ಸಾಕ್ಷಿಯಾಗಿದ್ದವರು. ಮುಂದೆ ಎಂ.ಎನ್. ಜೋಯಿಸರೊಡಗೂಡಿ ಬ್ರಿಟೀಷರೇ ಭಾರತ ಬಿಟ್ಟು ತೊಲಗಿ (ಕ್ವಿಟ್ ಇಂಡಿಯಾ ಮೂವ್‌ಮೆಂಟ್) ನಲ್ಲಿ ಹಾಗೂ ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡು, ಸೆಪ್ಟೆಂಬರ್ 1942 ರಿಂದ ನವಂಬರ್‌ವರೆಗೆ ಮೂರು ತಿಂಗಳ ಕಾಲ ಸೆರೆಮನೆವಾಸ ಅನುಭವಿಸಿದವರು. ತಮ್ಮ ಕೊನೆ ಉಸಿರಿರುವವರೆಗೂ ಪ್ರತಿ ಸಂಜೆ ತಾವು ಹುಟ್ಟುಹಾಕಿದ ವೃದ್ಧಾಶ್ರಮದಲ್ಲಿ ಚರಕದಿಂದ ನೂಲುತೆಗೆದು, ಅದನ್ನು ಖಾದಿ ಮಂಡಳಿಗೆ ನೀಡಿ, ಖಾದಿ ಬಟ್ಟೆ ಪಡೆದು ಅದನ್ನೇ ಉಟ್ಟು ಸರಳ ಜೀವನ ನಡೆಸಿದವರು ಈ ಸೀತಾರಾಮ ಐಯ್ಯಂಗಾರ್. ನಂತರ ಗಾಂಧಿನಿಧಿ ಕಾರ್ಯಕರ್ತರಾಗಿ, ವಿನೋಬಾ ಭಾವೆಯವರೊಡನೆ, ಭೂಸ್ವಾಧೀನ ಚಳುವಳಿಯಲ್ಲಿ ತೊಡಗಿಸಿಕೊಂಡು, ಪ್ರವಾಸ ಮಾಡಿದರು. ಕೈ ಹಿಡಿದ ಪದ್ಮ ಕೂಡಾ ಇದೇ ರೀತಿ ಕಾರ್ಯಕರ್ತೆ. ಮಹಾತ್ಮಗಾಂಧಿಯವರ ಸ್ವಹಸ್ಥ ತಮ್ಮ ಹಿಂದಿ ಕೋರ್ಸ್ ಸರ್ಟಿಫಿಕೇಟ್ ಪಡೆದಿದ್ದವರು. ಇವರ ಅಲೆಮಾರಿ ಬದುಕು, ಇವರ ಮಕ್ಕಳನ್ನೂ ಬೇರೆ ಬೇರೆ ಕಡೆ ಬೆಳೆಯುವಂತೆ ಮಾಡಿತು. ಕೆಲವೊಮ್ಮೆ ತಮ್ಮ ಮಕ್ಕಳನ್ನೂ ಪಾದಯಾತ್ರೆಯಲ್ಲಿ ತೊಡಗಿಸಿಕೊಂಡಿದ್ದವರು ಈ ದಂಪತಿಗಳು. ಒಂದು ಸಂದರ್ಭದಲ್ಲಂತೂ, ಇವರ ಹೆಣ್ಣುಮಕ್ಕಳು ಇತರರಂತೆ ತಾವೂ ತಮ್ಮ ಕಿವಿ, ಕತ್ತಿನಲ್ಲಿದ್ದ ಆಭರಣಗಳನ್ನು ತೆಗೆದು ವಿನೋಬಾರವರಿಗೆ ದಾನನೀಡಿದ್ದನ್ನು ನೋಡಿದವರ ಕಣ್ತುಂಬಿ ಬಂದುದನ್ನು ಇಂದಿಗೂ ಆ ಮಕ್ಕಳು ನೆನಪಿಸಿಕೊಳ್ಳುತ್ತಾರೆ.

ಇಂದು ಡಾ. ಸುದರ್ಶನ್‌ರವರು ಬಿಳಿಗಿರಿರಂಗನ ಬೆಟ್ಟದಲ್ಲಿ ಸೋಲಿಗರ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದರೆ, ಅವರಿಗಿಂತ ಮುಂಚೆ, ಗಾಂಧಿ ಸ್ಮಾರಕನಿಧಿಯ ಕಾರ್ಯಕರ್ತರಾಗಿ ಬೆಟ್ಟಕ್ಕೆ ನೇಮಿಸಲ್ಪಟ್ಟವರು ಸೀತಾರಾಂ ದಂಪತಿಗಳು ಆ ಅರಣ್ಯ ಪ್ರದೇಶದಲ್ಲಿ, ನಾಗರೀಕತೆ ಸೋಂಕಿಲ್ಲದೆ ಬದುಕು ಸವೆಸುತ್ತಿದ್ದ ಸೋಲಿಗರನ್ನು ಹಿಡಿದುತಂದು, ಅವರಿಗೆ ಹೇರ್‌ಕಟ್ ಮಾಡಿ, ಅ, ಆ, ಇ, ಈ ಹೇಳಿಕೊಡುವಲ್ಲಿ ಈ ದಂಪತಿಗಳ ಪಾತ್ರ ಅವರ್ಣನೀಯ, ಪ್ರಶಂಸನೀಯ. ಸುಮಾರು 12 ವರ್ಷಗಳ ಇವರ ಅವಿರತ ಪರಿಶ್ರಮದ ಫಲ, ಇಡೀ ಸೋಲಿಗ ಸಮುದಾಯದ ಒಬ್ಬ ಯುವಕ, ಪದವೀಧರನಾಗಿ, ನಮ್ಮ ಅಂಚೆ ಮತ್ತು ತಂತಿ ಇಲಾಖೆಯಲ್ಲಿ ಒಂದು ಉದ್ಯೋಗ ಗಿಟ್ಟಿಸಿಕೊಂಡದ್ದು ಎಂದು ಆಗಾಗ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದವರು, ಈ ಕೆ.ಎಸ್. ಸೀತಾರಾಮ ಐಯ್ಯಂಗಾರ್ ದಂಪತಿಗಳು. ಅದೇನೋ ಮೊದಲಿನಿಂದಲೂ, ಮಕ್ಕಳ ಜೊತೆ ಬಾಳಬೇಕೆಂಬ ಹಂಬಲ ಈ ದಂಪತಿಗಳಿಗೆ ಇರಲಿಲ್ಲವೋ, ಅಥವಾ ತಾವು ಅವರನ್ನು ಆಶ್ರಯಿಸಬಾರದೆನ್ನುವ ಛಲವೋ, ಶ್ರೀ ಕೆ.ಎಸ್. ಸೀತಾರಾಮ ಐಯ್ಯಂಗಾರ್ ಯಾವ ಮಕ್ಕಳ ಮನೆಯಲ್ಲೂ ಖಾಯಂ ಆಶ್ರಯಪಡೆಯಲಿಲ್ಲ. ಆದರೆ ಯಾವ ಮಕ್ಕಳನ್ನೂ ಕಡೆಗಣಿಸಲಿಲ್ಲ. ಎಲ್ಲರಿಗೂ ಅತ್ಯವಶ್ಯವಾದ ವಿದ್ಯೆ ಕೊಡಿಸಿದರು. ಅವರ ನಾಲ್ಕು ಮಕ್ಕಳಲ್ಲಿ ಮೂವರು ಡಬ್ಬಲ್ ಗ್ರಾಜ್ಯುಯೇಟ್‌ಗಳು. ಬೆಟ್ಟದ ಜೀವನ ಇನ್ನು ಮುಂದೆ!

(ಇದು ತಮ್ಮ ತಂದೆತಾಯಿ ಬಿಳಿಗಿರಿಬೆಟ್ಟದಲ್ಲಿ ಪಟ್ಟಪಾಡನ್ನು ಅವರ ಹಿರಿಮಗಳು ಅರ್ಥಾತ್ ನನ್ನ ಶ್ರೀಮತಿ ದೃಷ್ಟಿಯಿಂದ ನಾ ಕಂಡಂತೆ)

ಜೀವನೋಪಾಯಕ್ಕಾಗಿ ನಾಲ್ಕು ಮಕ್ಕಳನ್ನೂ ಕಟ್ಟಿಕೊಂಡು ಅತಿ ದುರ್ಗಮ ಪಾದ, ನಾಗರೀಕತೆಯ ಅರಿವಿಲ್ಲದ ಸೋಲಿಗರಿರುವ ಬಿಳಿಗಿರಿರಂಗನ ಬೆಟ್ಟಕ್ಕೆ ಆ ದಂಪತಿಗಳ ಸಂಸಾರ ಕಾಲಿಟ್ಟಿತು. ಅದು ಎಂತಹ ಸೌಕರ್ಯವಂಚಿತ ನಾಡೆಂದರೆ, ಬೆಂಕಿಪೆಟ್ಟಿಗೆ ಮುಗಿದರೆ 2-3 ಕಿ.ಮೀ.ದೂರದ ಬೆಟ್ಟದ ಮೇಲೆ ಇರುವ 1-2 ಗೂಡಂಗಡಿಗಳಿಂದ ತಂದು ಒಲೆ ಉರಿಸಬೇಕು. ಇಲ್ಲದೇ ಇದ್ದರೆ ನಿಮ್ಮ ಮನೆಯ ಒಲೆಯೇ ಆರದಂತೆ ಜಾಗ್ರತೆವಹಿಸಬೇಕು. ಆದುದರಿಂದಲೇ ಸೋಲಿಗರು ಮರದ ಕೊಂಟುಗಳಿಗೇ ಬೆಂಕಿ ಹಚ್ಚಿ ಉರಿಸುತ್ತಿದ್ದರು. ಇದರಿಂದ ಎರಡು ವಿಧದ ಉಪಯೋಗ ಆಗುತ್ತಿತ್ತು. ಮೊದಲನೆಯದು ಆನೆಗಳನ್ನು ಮನೆಗಳ ಆವರಣದಿಂದ ದೂರ ಇರಿಸುವುದು; ಮತ್ತೊಂದು ಮನೆಗಳ ಒಲೆ ಉರಿಸಲು ಬೆಂಕಿ ಹೊಂದಿಸುವುದು. ಅದರಿಂದಲೇ ಮನೆಗಳಿಗೆ ಒಲೆಹತ್ತಿಸಲು ಬೆಂಕಿ ಕೊಂಡೊಯ್ಯುತ್ತಿದ್ದರು. ತಿಂಗಳಿಗೆ ಆಗುವ ಉಪ್ಪು ಖಾರ, ಬೇಳೆ, ಅಕ್ಕಿ, ಮೊದಲೇ ಹೊಂದಿಸಿಟ್ಟುಕೊಳ್ಳಬೇಕು. ಮರೆತರೆ ಬೀಸುಕಲ್ಲಿನಿಂದ ಬೀಸಿಕೊಂಡ ರಾಗಿಹಿಟ್ಟನ್ನೇ ಉಪಯೋಗಿಸಬೇಕು. ಅಂದಿನ ಆಹಾರಕ್ಕೆ ಸಪ್ಪೆಸಾರೇ

ಗತಿ! ಹೆಪ್ಪು ಹಾಕಲು ಮೊಸರೆಲ್ಲಿಂದ ಬರಬೇಕು? ಅದಕ್ಕೂ ಪರದಾಡಬೇಕಾದ್ದೇ ಗತಿ. ಬಿಳಿಗಿರಿರಂಗನಬೆಟ್ಟ ಒಂದು ಯಾತ್ರಾಸ್ಥಳ. ವಾರಕ್ಕೊಂದು ಸಲ ಬಸ್ಸು ಬರುತ್ತಿತ್ತು ಮೈಸೂರು ಕಡೆಯಿಂದ ಚಾಮರಾಜನಗರ ಮಾರ್ಗವಾಗಿ ಬರುತ್ತಿತ್ತು. ಹೀಗಾಗಿ ತಿಂಗಳಿಗೊಂದಾವರ್ತಿ ಚಾಮರಾಜನಗರದಿಂದ ದಿನಸಿ ಸಾಮಾನುಗಳನ್ನು ತಂದಿಟ್ಟುಕೊಳ್ಳಬೇಕಾಗುತ್ತಿತ್ತು. ಮರೆತರೆ ಬೆಟ್ಟಕ್ಕೇರುವ ವಾಹನಕ್ಕೆ ಕಾಯಬೇಕಾಗುತ್ತಿತ್ತು. ಈ ವಾಮನಮೂರ್ತಿ ದೂರಾಲೋಚನೆಯ ಬುದ್ಧಿವಂತ. ತನ್ನ ಕಷ್ಟ ಪರಿಹಾರಕ್ಕಾಗಿ ಒಂದೊಂದೇ ಉಪಾಯಗಳನ್ನು ಕಂಡುಕೊಳ್ಳತೊಡಗಿದರು. ನಾಗರಿಕತೆ ಸೋಂಕೇ ಇಲ್ಲದ ಅವರ ಮಧ್ಯೆ ಛಲದಂಕಮಲ್ಲನಂತೆ ಬದುಕಬೇಕಾಯಿತು. ಬ್ರಾಹ್ಮಣರ ಭೋಜನದಲ್ಲಿ ಮಜ್ಜಿಗೆ ಮೊಸರಿಗೆ ಪ್ರಮುಖ ಸ್ಥಾನ. ಅವಿಲ್ಲದೆ ಅವರ ಊಟ ಮುಗಿಯುವುದಿಲ್ಲ. ಇದಕ್ಕಾಗಿ ಬೆಟ್ಟದ ಮೇಲೆ ಹೋಗಿ ಅಲ್ಲಿಂದ ಹಾಲು, ಮೊಸರು ತರಬೇಕಾಗಿತ್ತು. ಮನೆಗೆ ಬೇಕಾದ ಹಾಲು, ಮೊಸರಿಗೋಸ್ಕರ ತಾವೇ ಒಂದು ಹಸುವನ್ನು ಎಳಂದೂರಿನಿಂದ ಕೊಂಡುತಂದರು. ಆ ಹಸು ಕುಳ್ಳಗಿದ್ದುದರಿಂದ ಅದಕ್ಕೆ "ಕುಳ್ಳಿ" ಎಂದೇ ನಾಮಕರಣವಾಯಿತು. ಕೆಲವು ವರ್ಷಗಳನಂತರ "[illegible]" ಮತ್ತು "[illegible]" ಎಂಬ ಮತ್ತೆರಡು ಹಸುಗಳು ಬಂದವು. ಅವುಗಳ ಕರುಗಳೆಲ್ಲ ಸೇರಿ ಕೊನೆಗೆ 5–6 ಹಸುಗಳಾದವು. ಹೆಚ್ಚಾದ ಹಾಲನ್ನು ಬೆಟ್ಟದ ಮೇಲೆ ವಾಸಿಸುತ್ತಿದ್ದ ಕೆಲಮನೆಗಳವರಿಗೆ ಮಾರಿ ನಾಲ್ಕುಕಾಸು ಸಂಪಾದಿಸುತ್ತಿದ್ದರು. ನಾಲ್ಕು ಮಕ್ಕಳನ್ನು ಸಾಕುವ ಜವಾಬ್ದಾರಿ ತಲೆಯಮೇಲಿತ್ತಲ್ಲವೇ! ಶಾಲೆಯಲ್ಲಿ ವಸತಿಯೂ ಇರಬೇಕೆಂಬುದರಿಂದ ತಮ್ಮ ವಾಸದ ಮನೆಯ ಜೊತೆಗೆ ಹುಡುಗರಿಗೆ ಮಲಗಲು ಒಂದು ಮನೆ, ಅಡುಗೆ ಊಟಕ್ಕಾಗಿ ಮತ್ತೊಂದು ಮನೆ, ಓದಲಿಕ್ಕೆಂದೇ ಒಂದು ಮನೆ ಎಂದು ಮೂರು ಮನೆಗಳು ಕಟ್ಟಲ್ಪಟ್ಟವು. ಅಲ್ಲಿದ್ದ ಸೋಲಿಗರೆಲ್ಲ ಅಲ್ಲಿ ಯಥೇಚ್ಛವಾಗಿ ಸಿಗುತ್ತಿದ್ದ ಬಿದಿರಿನಿಂದ ತಡಿಕೆಗೋಡೆ ಕಟ್ಟಿಮೇಲೆ ಬಾಣೆಹುಲ್ಲಿನ ಮಾಡು ಹೊದಿಸಿಕೊಳ್ಳುತ್ತಿದ್ದರು. ಆಹಾರಕ್ಕಾಗಿ ಗೆಡ್ಡೆಗೆಣಸು ತಿಂದು ಬದುಕು ಸಾಗಿಸುತ್ತಿದ್ದರು ಆ ಕಾಡುಮನುಷ್ಯರು. ನಾವಾದರೋ ಹಾಗೆ ಅವರಂತೆ ಬದುಕು ಸಾಗಿಸಲು ಸಾಧ್ಯವಾಗದುದರಿಂದ ಆಳುಗಳ ಸಹಾಯದಿಂದ ಮಣ್ಣು ಮತ್ತು ಬೊಂಬುಗಳನ್ನು ತರಿಸಿದರು.ಅಲ್ಲಿಯೇ ಸಿಕ್ಕ ಕಲ್ಲುಗಳ ಅಡಿಪಾಯ ಹಾಕಿ ಬೊಂಬು– ಗಳನ್ನು ಸೀಳಿ ತಟ್ಟಿಮಾಡಿಕೊಂಡರು. ಮನೆಗಳಿಗೆ ಮಧ್ಯೆ [illegible] ತಟ್ಟಿಗಳನ್ನು ಗೋಡೆಗಳಾಗಿ ನಿಲ್ಲಿಸಿದರು. ಅವುಗಳ ಮಧ್ಯೆ ಸಣ್ಣಕಲ್ಲುಗಳನ್ನು ಮತ್ತು ಮಣ್ಣುಕಲಸಿ ತುಂಬಿಸಿದರು. ಭಕ್ತಕುಂಬಾರನಂತೆ ಮಣ್ಣುತುಳಿದು ಹದಗೊಳಿಸಿದರು. ನಂತರ ಜೇಡಿಮಣ್ಣಿನಿಂದ ಗೋಡೆಸಾರಿಸಿದರು. ಕಿಟಕಿಗಳಿಗೆ ಮರದ ಸರಳುಗಳನ್ನು ನಿಲ್ಲಿಸಿದರು. ಬಾಗಿಲಿಗೆ ಮರದಹಲಗೆಗಳನ್ನು ನಿಲ್ಲಿಸಿ ಜಾಗಬಿಟ್ಟರು. ಇದಾದನಂತರ

ಗತಿ! ಹಸು ಹಾಕಲು ಮೊಸರೆಲ್ಲಿಂದ ಬರಬೇಕು: ಅದಕ್ಕೆ ಹುಣಸೋಹಳ್ಳಿ ಗತಿ. ಬಿಳಿಗಿರಿರಂಗನಬೆಟ್ಟ ಒಂದು ಯಾತ್ರಾಸ್ಥಳ, ವಾರಕ್ಕೊಂದು ಕೆಂಪು ಬಸ್ಸು ಬುಸುಗುಟ್ಟುತ್ತಾ ಮೈಸೂರು ಕಡೆಯಿಂದ ಚಾಮರಾಜನಗರ ಮಾರ್ಗವಾಗಿ ಬರುತ್ತಿತ್ತು. ಹೀಗಾಗಿ ತಿಂಗಳಿಗೊಂದಾವರ್ತಿ ಚಾಮರಾಜನಗರದಿಂದ ನೆನಪಿರುವಷ್ಟು ಮನೆಸಾಮಾನುಗಳನ್ನು ತಂದಿಟ್ಟುಕೊಳ್ಳಬೇಕಾಗುತ್ತಿತ್ತು. ಮರೆತರೆ ಬೆಟ್ಟಕ್ಕೇರುವಸಾಹಸಕ್ಕೆ ಕೈಹಾಕಬೇಕಾಗುತ್ತಿತ್ತು. ಈ ವಾಮನಮೂರ್ತಿ ದೂರಾಲೋಚನೆಯ ಬುದ್ಧಿವಂತ. ತನ್ನ ಕಷ್ಟ ಪರಿಹಾರಕ್ಕಾಗಿ ಒಂದೊಂದೇ ಉಪಾಯಗಳನ್ನು ಕಂಡುಕೊಳ್ಳತೊಡಗಿದರು. ನಾಗರೀಕತೆ ಸೋಂಕೆ ಇಲ್ಲದ ಇವರ ಮಧ್ಯೆ ಛಲದಂಕಮಲ್ಲನಂತೆ ಬದುಕುವ ಛಲತೊಟ್ಟರು. ಬ್ರಾಹ್ಮಣರ ಭೋಜನದಲ್ಲಿ ಮಜ್ಜಿಗೆ ಮೊಸರಿಗೆ ಪ್ರಮುಖ ಸ್ಥಾನ. ಅದಿಲ್ಲದೆ ಅವರ ಊಟ ಮುಗಿಯುವುದಿಲ್ಲ. ಇದಕ್ಕಾಗಿ ಬೆಟ್ಟದ ಮೇಲೆ ಹೋಗಿ ಅಲ್ಲಿಂದ ಹಾಲು, ಮೊಸರು ತರಬೇಕಾಗಿತ್ತು. ಮನೆಗೆ ಬೇಕಾದ ಹಾಲು, ಮೊಸರಿಗೋಸ್ಕರ ತಾವೇ ಒಂದು ಹಸುವನ್ನು ಎಳಂದೂರಿನಿಂದ ಕೊಂಡುತಂದರು. ಆ ಹಸು ಕುಳ್ಳಗಿದ್ದುದರಿಂದ ಅದಕ್ಕೆ "ಕುಳ್ಳಿ" ಎಂದೇ ನಾಮಕರಣವಾಯಿತು. ಕೆಲವು ವರ್ಷಗಳನಂತರ "ಸೀತೆ" ಮತ್ತು "ಗೌರಿ" ಎಂಬ ಮತ್ತೆರಡು ಹಸುಗಳು ಬಂದವು. ಅವುಗಳ ಕರುಗಳೆಲ್ಲ ಸೇರಿ ಕೊನೆಗೆ 5–6 ಹಸುಗಳಾದವು. ಹೆಚ್ಚಾದ ಹಾಲನ್ನು ಬೆಟ್ಟದ ಮೇಲೆ ವಾಸಿಸುತ್ತಿದ್ದ ಕೆಲಮನೆಗಳವರಿಗೆ ಮಾರಿ ನಾಲ್ಕುಕಾಸು ಸಂಪಾದಿಸುತ್ತಿದ್ದರು. ನಾಲ್ಕು ಮಕ್ಕಳನ್ನು ಸಾಕುವ ಜವಾಬ್ದಾರಿ ತಲೆಯಮೇಲಿತ್ತಲ್ಲವೇ! ಶಾಲೆಯಲ್ಲಿ ವಸತಿಯೂ ಇರಬೇಕೆಂಬುದರಿಂದ ತಮ್ಮ ವಾಸದ ಮನೆಯ ಜೊತೆಗೆ ಹುಡುಗರಿಗೆ ಮಲಗಲು ಒಂದು ಮನೆ, ಅಡುಗೆ ಊಟಕ್ಕಾಗಿ ಮತ್ತೊಂದು ಮನೆ, ಓದಲಿಕ್ಕೆಂದೇ ಒಂದು ಮನೆ ಎಂದು ಮೂರು ಮನೆಗಳು ಕಟ್ಟಲ್ಪಟ್ಟವು. ಅಲ್ಲಿದ್ದ ಸೋಲಿಗರೆಲ್ಲ ಅಲ್ಲಿ ಯಥೇಚ್ಛವಾಗಿ ಸಿಗುತ್ತಿದ್ದ ಬೊಂಬಿನಿಂದ ತಡಿಕೆಗೋಡೆ ಕಟ್ಟಿಮೇಲೆ ಬಾಣೆಹುಲ್ಲಿನ ಮಾಡು ಹೊದಿಸಿಕೊಳ್ಳುತ್ತಿದ್ದರು. ಆಹಾರಕ್ಕಾಗಿ ಗೆಡ್ಡೆಗೆಣಸು ತಿಂದು ಬದುಕು ಸಾಗಿಸುತ್ತಿದ್ದರು ಆ ಕಾಡುಮನುಷ್ಯರು. ನಾವಾದರೋ ಹಾಗೆ ಅವರಂತೆ ಬದುಕು ಸಾಗಿಸಲು ಸಾಧ್ಯವಾಗದುದರಿಂದ ಆಳುಗಳ ಸಹಾಯದಿಂದ ಮಣ್ಣು ಮತ್ತು ಬೊಂಬುಗಳನ್ನು ತರಿಸಿದರು.ಅಲ್ಲಿಯೇ ಸಿಕ್ಕ ಕಲ್ಲುಗಳ ಅಡಿಪಾಯ ಹಾಕಿ ಬೊಂಬು– ಗಳನ್ನು ಸೀಳಿ ಪಟ್ಟಿಮಾಡಿಕೊಂಡರು. ಮನೆಗಳಿಗೆ ಮಧ್ಯೆ ಜಾಗಬಿಟ್ಟು ಪಟ್ಟಿಗಳನ್ನು ಗೋಡೆಗಳಾಗಿ ನಿಲ್ಲಿಸಿದರು. ಅವುಗಳ ಮಧ್ಯೆ ಸಣ್ಣಕಲ್ಲುಗಳನ್ನು ಮತ್ತು ಮಣ್ಣುಕಲಸಿ ತುಂಬಿಸಿದರು. ಭಕ್ತಕುಂಬಾರನಂತೆ ಮಣ್ಣುತುಳಿದು ಹದಗೊಳಿಸಿದರು. ನಂತರ ಜೇಡಿಮಣ್ಣಿನಿಂದ ಗೋಡೆಸಾರಿಸಿದರು. ಕಿಟಕಿಗಳಿಗೆ ಮರದ ಪಟ್ಟಿಗಳನ್ನು ನಿಲ್ಲಿಸಿದರು. ಬಾಗಿಲಿಗೆ ಮರದಹಲಗೆಗಳನ್ನು ನಿಲ್ಲಿಸಿ ಜಾಗಬಿಟ್ಟರು. ಒಣಗಿದನಂತರ

ಗೋಡೆಗಳಿಗೆ ಚಾಮರಾಜನಗರದಿಂದ ಸುಣ್ಣತಂದುಬಳಿಯುವುದು ಬೆಳಗಿಸುವುದು.

ಈ ಮೊದಲು ಹೇಳಿದ ಮನೆಗಳೆಲ್ಲಕ್ಕಿಂತ ಪ್ರಮುಖವಾದುದು ಪ್ರಾರ್ಥನಾ ಮಂದಿರ ಅಥವಾ ಗಾಂಧಿಮನೆ. ಅದರ ತುಂಬಾ ಎಲ್ಲೆಲ್ಲಿಂದಲೋ ಸಂಗ್ರಹಿಸಿ ಚಾಮರಾಜ ನಗರದಲ್ಲಿ ಕಟ್ಟುಹಾಕಿಸಿ ತಂದ ಸುಮಾರು 150 ಗಾಂಧಿ ಜೀವನದ ಫೋಟೋಗಳು. ಗಾಂಧೀಜಿಯವರ ಜೀವನಚರಿತ್ರೆಯ 13 ಸಂಪುಟಗಳೂ ಸೇರಿದಂತೆ ವಿಫುಲ ಗಾಂಧೀ ಸಾಹಿತ್ಯವನ್ನು ಕಲೆಹಾಕಿದ್ದರು. ಅದೊಂದು ಪೂಜನೀಯ ಸ್ಥಳವಾಗಿತ್ತು. ಗಾಂಧಿ ಸಾಹಿತ್ಯವನ್ನು ಅರಿತುಕೊಳ್ಳುವಷ್ಟು ಬುದ್ಧಿವಂತರಲ್ಲ ಆ ಸೋಲಿಗರ ಮಕ್ಕಳು. ಅವರಿಗಾಗಿ ಕಥೆಪುಸ್ತಕಗಳು, ಹಾಡಿನ ಪುಸ್ತಕಗಳ ಸಂಗ್ರಹವೂ ಇತ್ತು. ಅವುಗಳಲ್ಲಿ ಹೆಸರಿಸಬಹುದಾದವು ಎ.ಆರ್.ಕೃಷ್ಣಶಾಸ್ತ್ರಿಗಳ ಮಹಾಭಾರತ, ರಾಮಾಯಣ, ಜಿ.ಪಿ.ರಾಜರತ್ನಂ ರವರ ಬಣ್ಣದ ತಗಡಿನ ತುತ್ತೂರಿ, ಮಡಮ್ಮನ ಸಂಸಾರ, ಪಾತಾಳದಲ್ಲಿ ಪಾಪಚ್ಚಿ ಮುಂತಾದವು. ಮಕ್ಕಳಲ್ಲಿ ಓದುವ ಹುಚ್ಚನ್ನು ಹತ್ತಿಸಿದರು. ಪ್ರತಿ ಬೆಳಗ್ಗೆ ಮತ್ತು ಸಂಜೆ ಸರ್ವಧರ್ಮ ಪ್ರಾರ್ಥನೆ ನಡೆಯುತ್ತಿತ್ತು. ಶ್ರೀಮತಿ ಪದ್ಮರವರು ವಿನೋಬಾಜೀಯವರ ತತ್ವಗಳನ್ನು ಜನಪ್ರಿಯ ಸಿನಿಮಾಗೀತೆಗಳ ರಾಗ ಅಳವಡಿಸಿ ಹಾಡಿ ಮಕ್ಕಳಲ್ಲಿ ದೇಶಪ್ರೇಮ ಬಿತ್ತುತ್ತಿದ್ದರು. ನಂತರ ತಾವೇ ತಯಾರಿಸಿದ ಬಿದಿರಿನ ಚರಕದಿಂದ ಎಲ್ಲರೂ ನೂಲುತೆಗೆಯಬೇಕು. ಅದಕ್ಕಾಗಿ ಪತ್ತರಿ, ಸುತ್ತಿಗೆ, ಉಳಿ ಮುಂತಾದ ಮರಗೆಲಸದ ಸಕಲ ಸಲಕರಣೆಗಳನ್ನೂ ಹೊಂದಿಸಿಕೊಂಡಿದ್ದರು. ಅವಶ್ಯಕತೆಯನ್ನು ಅನುಸರಿಸಿ ಮಂಚ, ಕಿಟಕಿ, ಬಾಗಿಲು ಮುಂತಾದವುಗಳನ್ನು ತಾವೇ ಮಾಡಿಕೊಂಡರು. ಮಣ್ಣಿನ ಗೋಡೆ ಮತ್ತು ನೆಲಗಳನ್ನು ಧಂಸದಿಂದ ಗಟ್ಟಿಗೊಳಿಸಿ ಸಗಣಿಯಿಂದ ಸಾರಿಸಿದರೆ. ಸುಂದರವಾದ ನೆಲ ತಯಾರಾಗುತ್ತಲಿತ್ತು. ವಾರಕ್ಕೊಮ್ಮೆ ಸಗಣಿಯಿಂದ ಸಾರಿಸಿದರಾಯಿತು. ಈ ತೊಂದರೆಗಳ ನಡುವೆಯೇ ತಮ್ಮ ಮಕ್ಕಳಿಗೆ ಪರೋಪಕಾರದ ಬುದ್ಧಿ ಹೇಳಿಕೊಡುವ ಪ್ರಯತ್ನದ ಅಂಗವಾಗಿ ಒಂದು ಸರ್ವೋದಯ ಪಾತ್ರೆ ಇಟ್ಟಿದ್ದರು. ಅದರಲ್ಲಿ ಪ್ರತಿದಿನ ಒಬ್ಬೊಬ್ಬರೂ ಒಂದು ಹಿಡಿ ಅಕ್ಕಿ ಹಾಕಬೇಕಿತ್ತು. ಅಕ್ಕಿಯನ್ನು, ಯಾರಾದರೂ ಬಡವರು ಬಂದು ಬೇಡಿದರೆ ಅವರಿಗೆ ಕೊಡಬೇಕಿತ್ತು. ಈ ಕ್ರಮ ಮುಂದೆ ಅತಿಥಿಗಳು ಬಂದಾಗ ಅವರು ನೀಡುವ ನಗದು ಹಾಕಲು ಒಂದು ಪೆಟ್ಟಿಗೆ ರೂಪಕ್ಕೆ ಬದಲಾಯಿತು. ಆ ಹಣವನ್ನು ತಮಗಿಂತಲೂ ತೊಂದರೆಯಲ್ಲಿರುವ ಇತರೇ ಸಂಸ್ಥೆ/ವ್ಯಕ್ತಿಗಳಿಗೆ ಧನ ಸಹಾಯ ಮಾಡಲು ಬಳಸಲಾಗುತ್ತಿತ್ತು. ಅವರ ಹಿರಿಮಗಳು ಹೇಳಿದ್ದು "ಶಾಲೆಯ ಹುಡುಗರು ಮತ್ತು ನಾವು ಸರತಿಯಂತೆ ಎಲ್ಲ ಕೆಲಸಗಳನ್ನು ಮಾಡಬೇಕಿತ್ತು. ನಾವೂ ಖುಷಿಯಿಂದ ಇಂತಹ ಕೆಲಸಗಳಲ್ಲಿ ಭಾಗವಹಿಸುತ್ತಿದ್ದೆವು. ನಮ್ಮ ಶಾಲೆ ಬೆಟ್ಟಕ್ಕೆ ಅಭಿಮುಖವಾಗಿತ್ತು. ಉತ್ತರಕ್ಕೆ ವಸತಿ ಮತ್ತು ದಕ್ಷಿಣಕ್ಕೆ ಊಟದ ಮನೆ ಒಟ್ಟಾರೆ ಈ ಮನೆಗಳ ಮಧ್ಯೆ ಸುಂದರವಾದ ಹೂ ತೋಟ. ಚಾಮರಾಜನಗರದಿಂದ ಹಲವಾರು ಬಗೆಯ

ಹೂಗಿಡಗಳನ್ನು ತಂದು ಇಲ್ಲಿ ನೆಟ್ಟಿದ್ದರು. ಮಲ್ಲಿಗೆ, ಜಾಜಿ, ಸೇವಂತಿಗೆ, ಆಸ್ಟರ್, ಗುಲಾಬಿ, ಡೇರಾ, ಮರುಗ, ಪಚ್ಚೆತೆನೆ, ಕಾಮಕಸ್ತೂರಿ ಮುಂತಾದವನ್ನು ಯಥೇಚ್ಛವಾಗಿ ಬೆಳೆದು ಹಾರಕಟ್ಟಿ ಬಿಳಿಗಿರಿರಂಗನಿಗೆ ಪೂಜೆಗಾಗಿ ಕಳುಹಿಸುತ್ತಿದ್ದರು. ನಾವೂ ಹಾರಕಟ್ಟುತ್ತಿದ್ದೆವಾದರೂ, ಸೋಲಿಗರ ಸಿದ್ಧಿ ನಮ್ಮನ್ನೆಲ್ಲ ಈ ಹಾರಕಟ್ಟುವ ಸ್ಪರ್ಧೆಯಲ್ಲಿ ಸೋಲಿಸುತ್ತಿದ್ದಳು. ಸೋಲಿಗರ ವಿದ್ಯಾಭ್ಯಾಸ ಮಾತ್ರ ಇವರ ಹೊಣೆಯಾಗಿರಲಿಲ್ಲ. ಅವರಿಗೆ ಬೇಕಾದ ಸಕಲ ಸೌಕರ್ಯಗಳನ್ನೂ ಒದಗಿಸಬೇಕಾಗಿತ್ತು. ಆ ಮಕ್ಕಳಿಗೆ ಕ್ಷೌರಿಕನಾಗಿ, ಸಿಂಪಿಗನಾಗಿ, ಅಡುಗೆಯವನಾಗಿ ಕಾರ್ಯ ನಿರ್ವಹಿಸ ತೊಡಗಿದರು ಈ ದಂಪತಿಗಳು. ಮೊದಲೇ ತಿಳಿಸಿದಂತೆ ಬಡಗಿ, ಗಾರೆಯವ, ಗೋಪಾಲಕ, ವ್ಯವಸಾಯಿ ಹೀಗೆ ಬೆಟ್ಟದಜೀವನದ ವೇಳೆ ನಿಭಾಯಿಸದ ಪಾತ್ರಗಳಿಲ್ಲ. ಸೋಲಿಗ ಮಕ್ಕಳ ವಿದ್ಯಾಭ್ಯಾಸದ ಜೊತೆಗೆ ಅವರ ಆಹಾರಕ್ಕಾಗಿ ರಾಗಿ, ಬೇಳೆಕೊಳ್ಳಲು ಸ್ವಲ್ಪ ಹಣ ಬರುತ್ತಿತ್ತು. ತಿಂಗಳಿಗೆ ಒಮ್ಮೆ, ಕೊಂಡ ರಾಗಿಯನ್ನು ಚಾಮರಾಜನಗರದಲ್ಲೇ ಬೀಸಿಸಿ ಹಿಟ್ಟನ್ನು ಇತರ ಸಾಮಾನುಗಳ ಜೊತೆಗೆ ಕತ್ತೆಗಳ ಮೇಲೋ, ಬಸ್ಸಿನ ಟಾಪಿನಲ್ಲೋ ಹಾಕಿಕೊಂಡು ಶಾಲೆಗೆ ತರಬೇಕಾಗುತ್ತಿತ್ತು. ಆದರೆ ತರಕಾರಿ, ಹಾಲು, ಮೊಸರು ಇವುಗಳನ್ನು ಹೊಂದಿಸಿ ಕೊಳ್ಳಬೇಕಾಗಿತ್ತು. ತರಕಾರಿ ಬೆಳೆಸದಿದ್ದರೆ ಬೆಟ್ಟಕ್ಕೆ ಹೋಗಲೇಬೇಕು. ಇಲ್ಲವೇ ಚಾಮರಾಜನಗರಕ್ಕೆ ಇಳಿಯಬೇಕಾಗಿತ್ತು. ಏಕೆಂದರೆ ಅವರ ವಾಸ ಪರ್ವತದ ಮಧ್ಯ ಭಾಗದಲ್ಲಿ. ಹುಡುಗರ ಸಹಾಯದಿಂದ ಜಮೀನು ಹದಗೊಳಿಸಿ ಹುರುಳೀಕಾಯಿ, ಮೂಲಂಗಿ, ಬದನೆ, ಸೀಮೆಬದನೆ, ಸಿಹಿ ಮತ್ತು ಬೂದುಕುಂಬಳ, ಹೊಟ್ಟಿನಕಡಲೆ, ಅಲಸಂದೆ, ಧನಿಯಾ, ಮೆಂತ್ಯ, ಸೀಮೆಹೊನಗೊನೆ, ದಂಟು, ಸಾಲುಸಾಲು ತರಕಾರಿ, ಸೊಪ್ಪುಗಳನ್ನು ಬೆಳೆಸುತ್ತಿದ್ದರು. ಚಾಮರಾಜ ನಗರದಿಂದ ಬೀಜತಂದು ಬಿತ್ತಿ ಮಕ್ಕಳಿಂದ ಬೆಳೆಸಿದ ತರಕಾರಿಗಳು ಅವರ ಊಟಕ್ಕೆ ಬಳಸಲ್ಪಡುತ್ತಿದ್ದವು. ಒಂದೊಂದು ಬದನೆಯೂ ಸೋರೇಕಾಯಿಯಂತೆ ಕಾಣುತ್ತಿತ್ತು. ಗುಂಡು ಬದನೆಯಂತೂ ಸಿಹಿ ಕುಂಬಳದ ಸೈಜಿನವು. ಇವುಗಳ ಜೊತೆಗೆ ಪರಂಗಿ, ಬಾಳೆ, ಕಿತ್ತಳೆ, ಸಪೋಟ, ಸೀಬೆ, ಮಾವು, ಹಲಸು ಹಣ್ಣಿನ ತೋಟಗಳೂ ಸೇರಿಕೊಂಡವು. ಬಾಳೆಯಲ್ಲೂ ದುರ್ಗದಬಾಳೆ, ಪುಟ್ಟಬಾಳೆ ಅಂದರೆ ರಸಬಾಳೆ ಬೆಳೆಯುತ್ತಿದ್ದರು. ದುರ್ಗದ ಬಾಳೆಯಂತೂ ಮನೆಯಲ್ಲಿ ಇದ್ದರೆ, ಅಂಗಳಕ್ಕೆಲ್ಲ ಅದರ ವಾಸನೆ ಬಡಿಯುತ್ತಿತ್ತು. ಬರೀ ಗೆಡ್ಡೆ-ಗೆಣಸು ತಿನ್ನುತ್ತಿದ್ದ ಮಕ್ಕಳಿಗೆ ಈ ಹಣ್ಣುಗಳ ಆರೈಕೆಯಿಂದ ಆರೋಗ್ಯ ಸುಧಾರಿಸತೊಡಗಿತು ಹಣ್ಣು ತರಕಾರಿಗಳ ಆಸೆಯಿಂದ ಸೋಲಿಗ ಮಕ್ಕಳೂ ಶಾಲೆಯಲ್ಲಿ ಉಳಿಯಲು ಹಾತೊರೆಯುತ್ತಿದ್ದರು. ಇನ್ನು, ತಮ್ಮ ಮಕ್ಕಳನ್ನು ಮೈಸೂರಿನಲ್ಲಿ ವ್ಯಾಸಂಗಕ್ಕಾಗಿ ಬಿಟ್ಟಿದ್ದವೇಳೆ, ತಿಂಗಳಿಗೊಮ್ಮೆ ಮೈಸೂರಿಗೆ ಹೋಗುವ ವೇಳೆ, ಅವರಿಗಾಗಿ ದೊಡ್ಡದೊಡ್ಡ ಡಬ್ಬಗಳ ತುಂಬಾ ಗುಳಪಾವಟೆ (ಬೆಲ್ಲಹಾಕಿದ ರವೆಉಂಡೆ ರೀತಿಯ ತಿನಿಸು), ಹಾಲುಕೋವ, ಹುರಿಉಂಡೆಗಳನ್ನು ತುಂಬಿಕೊಂಡು ಬರುತ್ತಿದ್ದರಂತೆ. ಮಕ್ಕಳಾದರೋ ತಿಂದುತಿಂದು ಸುಸ್ತಾಗಿಬಿಡುತ್ತಿದ್ದರಂತೆ.

ಕೆಲವುವೇಳೆ ಅವು ಮುಗ್ಗಿಹೋಗುತ್ತಿದ್ದು, ಅವುಗಳನ್ನು ಆಚೆಗೆ ಚೆಲ್ಲುತ್ತಲೂ ಇದ್ದರಂತೆ. ಸೀತಾರಾಮ ಐಯ್ಯಂಗಾರ‍್ಯರ ಮಡದಿ ಪದ್ಮ ಒಮ್ಮೊಮ್ಮೆ ಮೈಸೂರಿಗೆ ಬಂದರೆ, ಹೆಣ್ಣುಮಕ್ಕಳಿಗೆ ಖುಷಿಯೋಖುಷಿ. ಅಮ್ಮನಿಗೆ ಒತ್ತಿಕೊಂಡೇ ಇರುತ್ತಿದ್ದರು. ಅವರಮ್ಮ ಈ ಹೆಣ್ಣು ಮಕ್ಕಳಿಗೆ ಜಡೆಹಾಕಿ ಊರಿಗೆ ವಾಪಸಾದ ಸಂದರ್ಭಗಳಲ್ಲಿ, "ಇದು ಅಮ್ಮ ಹಾಕಿದ ಜಡೆ" ಎಂದುಕೊಂಡು, ಅದನ್ನು ವಾರಗಟ್ಟಲೇ ಬಿಚ್ಚುತ್ತಲೇ ಇರುತ್ತಿರಲಿಲ್ಲವಂತೆ. ಅಕಸ್ಮಾತ್ ಆ ಜಡೆ ಬಿಚ್ಚಿಹೋದರೆ, ಅದನ್ನು ನೆನೆನೆನೆದು ಅಳುತ್ತಿದ್ದರಂತೆ. ಬಿಳಿಗಿರಿರಂಗನ ದರ್ಶನಕ್ಕೆಂದು ಬೆಟ್ಟಕ್ಕೆ ಬರುತ್ತಿದ್ದ ಹಲವರು, ಅದು ಹೇಗೋ ನಮ್ಮ ಶಾಲೆಯ ಬಗ್ಗೆ ತಿಳಿದುಕೊಂಡು, ಇಲ್ಲಿಗೂ ಬರುತ್ತಿದ್ದರು. ದ.ರಾ.ಬೇಂದ್ರೆ, ತ್ರಿವೇಣಿ ಸಹೋದರಿಯರು, ಆಲನಹಳ್ಳಿ ಕೃಷ್ಣ, ಕೆ.ರಾಮದಾಸ್, ಲಾಯರ್ ವೆಂಕಟರಂಗ ಅಯ್ಯಂಗಾರ್, ಮತಿನ ಮಗಳು ಅಲಮೇಲು, ರಾಮಕೃಷ್ಣಾಶ್ರಮದ ಸ್ವಾಮಿಗಳು ಮುಂತಾದವರು ನೆನಪಿನಲ್ಲಿ ಉಳಿದಿದ್ದಾರೆ. ಇಲ್ಲಿನ ಬೆಳವಣಿಗೆಗಳನ್ನು ಕಣ್ತುಂಬಿಕೊಳ್ಳುವುದರ ಜೊತೆಗೆ ತಮ್ಮ ಕ್ಯಾಮರಾಗಳಲ್ಲಿಯೂ ತುಂಬಿಕೊಳ್ಳುತ್ತಿದ್ದರು. ಬೆಟ್ಟದಲ್ಲಿರುವಾಗಲೇ ಮೈಸೂರಿನ ರಾಮಾನುಜ ರಸ್ತೆಯಲ್ಲಿ ಸೋರಟ್ ಅಶ್ವತ್ ಇದ್ದಂತಹ ಮನೆಯ ಬಳಿ, ಒಂದು ಮನೆಯನ್ನು ಕೊಂಡರು. ಅಲ್ಲಿ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲಮಾಡಿಕೊಟ್ಟರು. ಗಾಂಧಿ ಸ್ಮಾರಕನಿಧಿಯವರು ತಮ್ಮ ಸೇವಾಕೇಂದ್ರಗಳನ್ನು ಮುಚ್ಚಿದಾಗ 1969ರಲ್ಲಿ ಮೈಸೂರಿಗೆ ಬಂದು ಆ ನಂತರ ಆ ಮನೆಮಾರಿ, ದಿವಾನರ ರಸ್ತೆಯಲ್ಲಿ ಮನೆಮಾಡಿ ಅಲ್ಲಿಯೇ ಒಂದು ಮುದ್ರಣಾಲಯ ಸ್ಥಾಪಿಸಿದರು. ಮಕ್ಕಳಿಗೆ ಸಾಹಿತಿಗಳ ಪರಿಚಯ ಉಂಟಾಗುವುದಕ್ಕೆ ನೆರವಾದರು. ಇದರಿಂದ ಹಲವಾರು ಸಾಹಿತಿಗಳಾದ ರಾಗೌ, ಸಿ.ಪಿ.ಕೆ, ಪ್ರಭುಶಂಕರ್, ಪಿ.ಕೆ.ರಾಜಶೇಖರ್ ಮುಂತಾದವರ ಪರಿಚಯವಾಯಿತು. ಈ ಕೆಲಸದ ನಡುವೆಯೇ ಜೆ.ಪಿಯವರ ಸಂಪೂರ್ಣ ಕ್ರಾಂತಿಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅವರ ಕರೆಯಮೇರೆಗೆ ಬಿಹಾರಕ್ಕೆ ಹೋಗಿ ಅಲ್ಲಿ 6 ತಿಂಗಳಕಾಲ ಅವರೊಡನೆ ಕೆಲಸಮಾಡಿ ಬಂದರು. ಕೌಟುಂಬಿಕ ಆಘಾತದ ಪರಿಣಾಮವಾಗಿ 1981 ರಲ್ಲಿ ಮುದ್ರಣಾಲಯವನ್ನು ಮುಚ್ಚಿ ಬೆಂಗಳೂರಿಗೆ ಹೋಗಿ ನೆಲೆಸಬೇಕಾಯಿತು. ಅಲ್ಲಿಯೂ ಸರ್ವೋದಯ ಸಾಹಿತ್ಯ ಸಮಿತಿಯ ಕಾರ್ಯದರ್ಶಿಯಾಗಿ ಹಲವಾರು ಕೃತಿಗಳ ಪ್ರಕಟಣೆಗೆ ಕಾರಣಕರ್ತರಾದರು. ಖಾದಿ ಸಂಸ್ಥೆಯ ಸದಸ್ಯರಾಗಿ ಕಾರ್ಯನಿರ್ವಹಿಸಿದರು. ಕೆಲಕಾಲಾನಂತರ ಅಲ್ಲಿಯೇ ಒಂದು ವೃದ್ಧಾಶ್ರಮದ ಕನಸುಕಂಡು 1991ರಲ್ಲಿ, "ಹಿರಿಯರಿಗೆ ನೆರವು" ಸಂಸ್ಥೆಯನ್ನು ಹುಟ್ಟುಹಾಕಿದರು. ತಮ್ಮ ಮಕ್ಕಳ ಹಂಗಿನಲ್ಲಿ ಇರುವುದಕ್ಕೆ ಬದಲಾಗಿ, ತಮ್ಮಂತಹ ಇತರ ವೃದ್ಧರಿಗೆ, ಮಕ್ಕಳಿಂದ ಪರಿತ್ಯಕ್ತರಾದ ತಾಯಂದಿರಿಗೆ ನೆರವಾಗುವುದರೊಟ್ಟಿಗೆ, ತಮಗೇ ಒಂದು ಆಶ್ರಯತಾಣವನ್ನು ನಿರ್ಮಿಸಿಕೊಂಡರು. ವೃದ್ಧಾಶ್ರಮವನ್ನು ಮೈಸೂರಿಗೆ ವರ್ಗಾಯಿಸಿ, ರಾಮಕೃಷ್ಣನಗರದಲ್ಲಿ ಒಂದು ಮನೆಯನ್ನು ಗುತ್ತಿಗೆಗೆ ಹಿಡಿದರು. ಸುಮಾರು 12 ಮಂದಿ ವೃದ್ಧರಿಗೆ ಆಶ್ರಯ

ನೀಡಿದ್ದರು. ದೇಣಿಗೆಗಳನ್ನು ಸಂಗ್ರಹಿಸಿ, ಅದೇ ರಾಮಕೃಷ್ಣನಗರದಲ್ಲಿ ಒಂದು ಮಹಡಿಯ ಸ್ವಂತ ಕಟ್ಟಡ ನಿರ್ಮಿಸಿದರು, ಅದಕ್ಕೆ "ವಾತ್ಸಲ್ಯಧಾಮ" ಎಂದು ಹೆಸರಿಟ್ಟರು. ಅದರಲ್ಲಿ ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ, ತಮಗೆ ಬರುತ್ತಿದ್ದ ಪಿಂಚಣಿಯನ್ನು ಹಾಕಿ, ಆಶ್ರಮವಾಸಿಗಳಿಂದ ಅವರ ಕೈಲಾದಷ್ಟು ಹಣ ಪಡೆದು, ಅವರ ಯೋಗಕ್ಷೇಮ ನೋಡಿಕೊಳ್ಳುತ್ತಿದ್ದರು. ಕೆಲವರು ಕಾಸುಕೊಡಲಿಕ್ಕೆ ಕೈಲಾಗದವರು. ಮೈಕಸಟ್ಟಿಯಾಗಿ ಅಡುಗೆ ಮುಂತಾದ ಸಹಾಯ ಮಾಡಿಕೊಂಡು ಇದ್ದರು. ಇಂದು ನಡೆಯುತ್ತಿರುವ ಬಹುಪಾಲು ವೃದ್ಧಾಶ್ರಮಗಳಿಗೆ ಹೋಲಿಸಿದರೆ, ಅತ್ಯಲ್ಪ ತಿಂಗಳವಂತಿಗೆ ಪಡೆದು ಆಶ್ರಮ ನಡೆಸುತ್ತಿದ್ದುದು, ಈ ವಾತ್ಸಲ್ಯಧಾಮ ಎಂಬುದು ಈಗ ನಮಗೆ ತಿಳಿಯುತ್ತದೆ.

ಮೈಸೂರಿನಲ್ಲಿ ಯಾವುದೇ ಸಾಮಾಜಿಕ ಹೋರಾಟವಾಗಲಿ ಸೀತಾರಾಮ ಐಯ್ಯಂಗಾರ್, ಅವರೊಂದಿಗೆ ಕೈಜೋಡಿಸುತ್ತಿದ್ದರು. ಅದು ಚಾಮಲಾಪುರದ ಚಳುವಳಿಯಾಗಿರಲಿ, ಬಹುರಾಷ್ಟ್ರೀಯ ಕಂಪನಿ ವಿರುದ್ಧದ ಹೋರಾಟವಾಗಿರಲಿ, ಕನ್ನಡ/ಗಡಿ ವಿವಾದವಾಗಿರಲಿ, ಭ್ರಷ್ಟಾಚಾರ ವಿರೋಧಿ ಹೋರಾಟವಾಗಿರಲಿ ಸೀತಾರಾಮ ಐಯ್ಯಂಗಾರ್ ಅಲ್ಲಿರಲೇಬೇಕು. ಇಂದು ಆಡಳಿತದಲ್ಲಿರುವ, ರಾಜಕೀಯದಲ್ಲಿರುವವರ ಭ್ರಷ್ಟಾಚಾರಕಂಡರೆ ಸೀತಾರಾಮ ಐಯ್ಯಂಗಾರ್‌ರವರಂತಹವರ ಮಾರ್ಗದರ್ಶನದ ಅವಶ್ಯಕತೆ ಎದ್ದುಕಾಣುತ್ತದೆ. ಬರೀ ಆಗಸ್ಟ್ 15ರಂದು, ಗಾಂಧಿ ಜಯಂತಿಯಂದು ಮಹಾತ್ಮ ಗಾಂಧಿಯವರ ನೆನಪಿನಲ್ಲಿ ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿರುವ ಇಂದಿನ ಪುಢಾರಿಗಳಿಗೆ, ನಿಜವಾಗಿ ಗಾಂಧೀಜಿಯವರ ಆದರ್ಶಗಳನ್ನು ಮೈಗೂಡಿಸಿಕೊಂಡು ಜೀವನಕಳೆದ ಸೀತಾರಾಮ ಐಯ್ಯಂಗಾರ್‌ರಂತಹವರ ಅವಶ್ಯಕತೆ ಇದೆ ಎನ್ನಿಸುವುದಿಲ್ಲವೇ?

## ಸೇವಾನಿಷ್ಠ ರಚನಾತ್ಮಕ ಕಾರ್ಯಕರ್ತೆ ಕೆ.ಎಸ್.ಪದ್ಮ

17-10-1927ರಲ್ಲಿ ದಕ್ಷಿಣ ಕನ್ನಡದ ಸುಳ್ಯದಲ್ಲಿ ಒಂದು ಮಧ್ಯಮ ಕುಟುಂಬದಲ್ಲಿ ಜನಿಸಿದ ಕೆ.ಎಸ್.ಪದ್ಮ ಮತ್ತು ಅವರಪತಿ ಸೀತಾರಾಮ ಐಯ್ಯಂಗಾರ್ ಅವರದು ಅನುರೂಪ ಜೋಡಿ. ಪ್ರಾಥಮಿಕ, ಪ್ರೌಢ ಶಿಕ್ಷಣವನ್ನು ಅಲ್ಲಿಯೇ ಮುಗಿಸಿದರು. ಮುಂದೆ ಹಿಂದಿ ಪರೀಕ್ಷೆಯಲ್ಲಿ ವಿಶಾರದ ಮುಗಿಸಿ, ವಾರ್ಧಾದಲ್ಲಿ ಅದರ ಪ್ರಮಾಣಪತ್ರವನ್ನು ಮಹಾತ್ಮಗಾಂಧಿಯವರ ಹಸ್ತ ಪಡೆದ ಅದೃಷ್ಟವಂತೆ ಈಕೆ. ನಾಲ್ಕಾರು ವರ್ಷ ಹಿಂದಿ ಪ್ರಚಾರಕಿಯಾಗಿ ಸೇವೆ ಸಲ್ಲಿಸಿದ ನಂತರ ಕಸ್ತೂರಬಾ ಸ್ಮಾರಕ ನಿಧಿಯಲ್ಲಿ ಗ್ರಾಮಸೇವಿಕ ಶಿಕ್ಷಣ ಪಡೆಯಲು ಸೇರಿ ಉತ್ತಮ ಶಿಕ್ಷಣಾರ್ಥಿ ಎನಿಸಿಕೊಂಡರು. ಕಿಂಗೇರಿಯಲ್ಲಿನ ಜೀವನಶಿಕ್ಷಣತರಬೇತಿ ಕೇಂದ್ರಕ್ಕೆ ಬಂದು ಪ್ರವೇಶಿಸಿದರು. ಅಲ್ಲಿ ಒಂದು ವರ್ಷ ತರಬೇತಿ ಪಡೆದು ಗಾಂಧಿ ಪ್ರಣೀತ ರಚನಾತ್ಮಕ ಕಾರ್ಯಗಳಿಗೆ ತಮ್ಮ ಜೀವನವನ್ನು ಮೀಸಲಾಗಿಟ್ಟರು. ಆ ಉದ್ದೇಶಕ್ಕೆ ಸಹಾಯವಾಗಲೆಂದು ಅದೇ ಊರಲ್ಲಿದ್ದ

ಕೆ.ಎಸ್.ಸೀತಾರಾಮ ಐಯ್ಯಂಗಾರ್ ಅವರನ್ನೇ ವಿವಾಹವಾದರು. ಈ ಕಾರಣ ಇಬ್ಬರ ಹಿರಿಯರ ಮನೆಯವರಿಂದಲೂ ಪ್ರತಿರೋಧ ಎದುರಾಯಿತು. ಆದರೂ ಇವರ ನಿರ್ಧಾರ ಅಚಲವಾಗಿಯೇ ಉಳಿಯಿತು. ತರಬೇತಿ ಮುಗಿಸಿದ ದಂಪತಿಗಳಿಗೆ ತಕ್ಷಣ ಸೇವಾಕ್ಷೇತ್ರ ದೊರಕದೆ ತುಂಬಾ ಕಷ್ಟ ಅನುಭವಿಸಬೇಕಾಯಿತು. 1948 ರಲ್ಲಿ ಬೆಂಗಳೂರಿನ ಸುಬ್ರಮ್ಹಣ್ಯಪುರದ ಸರ್ವೋದಯ ವಿದ್ಯಾಶಾಲೆಯಲ್ಲಿ ಜೀವನ ಶಿಕ್ಷಣ ಪ್ರಯೋಗ ನಡೆಸಲು ಅವಕಾಶ ದೊರಕಿತು. ಕರ್ನಾಟಕ ಸರ್ಕಾರವೂ ಜೀವನ ಶಿಕ್ಷಣ ಕಲಿಕೆಗೆ ಒತ್ತುನೀಡಿತು. ಈ ಶಾಲೆ ಜಿಲ್ಲೆಗೆ ಮಾತ್ರವಲ್ಲದೇ ಕರ್ನಾಟಕದಲ್ಲಿಯೇ ಉತ್ತಮ ಶಾಲೆ ಎಂದು ಹೆಸರುಮಾಡಿತು. .

ಮುಂದೆ 1953ರಲ್ಲಿ ಬನ್ನೇರುಘಟ್ಟ ಬಳಿಯಿರುವ ಆನಂದಾಶ್ರಮ ಎಂಬ ಹರಿಜನ ವಿದ್ಯಾರ್ಥಿನಿಲಯದ ಜವಾಬ್ದಾರಿವಹಿಸಿಕೊಂಡರು. 2 ವರ್ಷಗಳ ಕಾಲ ಅದರ ಕಾರ್ಯ ನಿರ್ವಹಿಸಿ, ಅದನ್ನು ಒಂದು ಉತ್ತಮಸಂಸ್ಥೆ ಎಂಬ ಹೆಸರಿಗೆ ಪಾತ್ರವಾಗಿಸಿದರು. ನಂತರ ದಂಪತಿಗಳು ಮೈಸೂರು ಜಿಲ್ಲೆಯ ಕಣಗಾಲ್ ಗ್ರಾಮದಲ್ಲಿ ವ್ಯವಸಾಯ ಆಧಾರಿತ ಸಮಗ್ರ ಗ್ರಾಮಸೇವೆಯಲ್ಲಿ ಸ್ವಂತ ಶಕ್ತಿಯ ಮೇಲೆ ದುಡಿಯತೊಡಗಿದರು. ಇದನ್ನು ಗಮನಿಸಿದ ಗಾಂಧಿ ಸ್ಮಾರಕನಿಧಿಯವರು ಬೆಂಗಳೂರು ಜಿಲ್ಲೆಯ ಬಗಿನಗೆರೆಯಲ್ಲಿನ ಸಮಗ್ರ ಗ್ರಾಮಸೇವಾ ಕೇಂದ್ರದ ಹೊಣೆಯನ್ನು ಇವರಿಗೆ ಒಪ್ಪಿಸಿದರು. ಅಲ್ಲಿದ್ದ 3 ವರ್ಷಗಳಲ್ಲಿ ಸುತ್ತಮುತ್ತಲಿನ ಮುಸಲ್ಮಾನ, ಹರಿಜನ ಬಡವರ ಏಳಿಗೆಗಾಗಿ 300 ಚರಕಗಳನ್ನು ಹಂಚಿ, ನೂಲುತೆಗೆಯುವ ಉದ್ಯಮವನ್ನು ಅಭಿವೃದ್ಧಿಪಡಿಸಿದರು. ಸೇವಾನಿರತರಾಗಿದ್ದಾಗಲೇ ಆಚಾರ್ಯ ವಿನೋಬಾ ಭಾವೆಯವರು ಕರ್ನಾಟಕದಲ್ಲಿ ಪಾದಯಾತ್ರೆ ಮಾಡುತ್ತ ಬಂದು ಆ ಸೇವಾಕೇಂದ್ರದಲ್ಲಿ ತಂಗಿದ್ದರು. ಅಲ್ಲಿ 300 ಜನ ಮಹಿಳೆಯರು ಸಾಮೂಹಿಕವಾಗಿ ಸೂತ್ರಯಜ್ಞ ನಡಸಿದ್ದನ್ನು ಕಂಡು ಮುಕ್ತಕಂಠದಿಂದ ಶ್ಲಾಘಿಸಿದರು. ಮುಂದೆ ವಿನೋಬಾರವರ ಭೂದಾನಯಜ್ಞ ಅಂದೋಲನದಲ್ಲಿ ಈ ದಂಪತಿಗಳು ತಮ್ಮ ಮಕ್ಕಳೊಡನೆ ಒಂದು ವರ್ಷಕ್ಕೂ ಹೆಚ್ಚುಕಾಲ ಪಾಲ್ಗೊಂಡರು.ಆ ವೇಳೆ ಪದ್ಮರವರು ತಮ್ಮ ಮೈಮೇಲಿದ್ದ ಒಡವೆಗಳನ್ನು ವಿನೋಬಾರವರಿಗೆ ದಾನವಾಗಿ ನೀಡಿದ್ದು ಅವಿಸ್ಮರಣೀಯ ಘಟನೆ. ನಂತರ ಧಾರವಾಡ ಜಿಲ್ಲೆಯ ಮಿತ್ರರ ಆಗ್ರಹಪೂರ್ವಕ ಆಮಂತ್ರಣದ ಮೇಲೆ ಗ್ರಾಮದಾನವಾಗಿದ್ದ ಸಂಗೂರು ಗ್ರಾಮದಲ್ಲಿ ಗ್ರಾಮಾಭಿವೃದ್ಧಿ ಕಾರ್ಯದಲ್ಲಿ ತೊಡಗಿಸಿಕೊಂಡರು. ಅಲ್ಲಿ 2 ವರ್ಷ ಕೆಲಸಮಾಡಿದ ನಂತರ ಮೈಸೂರು ಜಿಲ್ಲೆಯ ಬಿಳಿಗಿರಿರಂಗನಬೆಟ್ಟದ ಆದಿವಾಸಿ ಸೇವಾಕೇಂದ್ರಕ್ಕೆ ಬಂದರು. ಕಾರಣಾಂತರ ದಿಂದ ಮುಚ್ಚಿಹೋಗಿದ್ದ ಈ ಸೇವಾಕೇಂದ್ರವನ್ನು ಪುನಶ್ಚೇತನಗೊಳಿಸಿ ಮುಂದು ವರೆಸಿದ ಕೀರ್ತಿ ಈ ದಂಪತಿಗಳದಾಯಿತು. ರಸ್ತೆ, ಬಸ್ಸು, ಅಂಚೆ, ಅಂಗಡಿ, ವೈದ್ಯಕೀಯ ನೆರವು ಇವಾವುದೂ ಇಲ್ಲದ ವನ್ಯಜೀವಿಗಳಿಂದ ತುಂಬಿದ್ದ ಘೋಂಡಾರಣ್ಯವಾಗಿದ್ದ

ಬಿಳಿಗಿರಿರಂಗನಬೆಟ್ಟದಲ್ಲಿದ್ದ ಆದಿವಾಸಿಸೋಲಿಗರನ್ನು ಕಷ್ಟಪಟ್ಟು ಅವರ ಮನವೊಲಿಸಿ ಕರೆತಂದು ಅವರ ಹೇರ್‌ಕಟ್ ಮಾಡಿ, ಅವರನ್ನು ಸಾಕ್ಷರರನ್ನಾಗಿಸಿದ್ದು ಈ ದಂಪತಿಗಳ ಒಂದು ಸಾಹಸವೇ ಸರಿ. 13ವರ್ಷಗಳಷ್ಟು ಕಾಲ (1958 ರಿಂದ 1971 ರವರೆಗೆ) ತಮ್ಮ ಮಕ್ಕಳ ವಿದ್ಯಾಭ್ಯಾಸವನ್ನೂ ಲೆಕ್ಕಿಸದೆ ಗಿರಿಜನ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು ಇವರ ಅವಿಶ್ರಾಂತ ಹಾಗೂ ನಿಸ್ವಾರ್ಥ ದುಡಿಮೆಯ ಫಲ ಎಂದರೆ, ಆ ಗಿರಿಜನರಲ್ಲಿ ಒಬ್ಬನೇ ಒಬ್ಬ ಡಬ್ಬಲ್ ಗ್ರಾಜುಯೇಟ್ ಆಗಿದ್ದು, ಅವನಿಗೆ ಅಂಚೆ ತಂತಿ ಇಲಾಖೆಯಲ್ಲಿ ನೌಕರಿ ಸಿಕ್ಕಿದ್ದು. ಈ ಕಾಡಿನ ಜೀವನದಲ್ಲಿ ಅವರು ಎದುರಿಸಿದ ಕಾಡುಪ್ರಾಣಿಗಳೆಷ್ಟೋ, ಮನುಷ್ಯಮೃಗಗಳ, ಸಂಘಸಂಸ್ಥೆಗಳ ವಿರೋಧಗಳೆಷ್ಟೋ? ಇವೆಲ್ಲವುಗಳನ್ನೂ ಧೈರ್ಯವಾಗಿ ಎದುರಿಸಿ ನಿಂತು ಗಿರಿಜನರ ಏಳ್ಗೆಗೆ ಭದ್ರಬುನಾದಿ ಹಾಕಿದ ಕೀರ್ತಿ ಈ ದಂಪತಿಗಳದು. 1971ರ ನಂತರ ಬಂಧುಮಿತ್ರರ ಮನೆಗಳಲ್ಲಿ ಓದಿಕೊಂಡಿದ್ದ ಇವರ ಮಕ್ಕಳು ಕಾಲೇಜಿಗೆ ಸೇರುವ ವೇಳೆಗೆ ಅವರನ್ನು ಗಮನಿಸುವ ಜವಾಬ್ದಾರಿಯಿಂದ, ಮೈಸೂರಿಗೆ ಬಂದು, ಜೀವನೋಪಾಯಕ್ಕಾಗಿ ಒಂದು ಮುದ್ರಣಾಲಯವನ್ನು ತೆರೆದರು. ಬದುಕಿರುವವರೆಗೂ ದಂಪತಿಗಳು ಒಂದಲ್ಲೊಂದು ಸಮಾಜಸೇವಾ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು, ಸಲಹೆಸೂಚನೆಗಳನ್ನು ನೀಡುತ್ತಾ ಮಾರ್ಗದರ್ಶನ ಮಾಡುತ್ತಿದ್ದರು. ಮಕ್ಕಳ ನೈತಿಕ ಏಳ್ಗೆಗಾಗಿ, ನಾಲ್ಕಾರು ನೀತಿ ಕಥೆಗಳನ್ನು ಅದರಲ್ಲಿ ಕೆಲವನ್ನು ಮೊಮ್ಮೊಕ್ಕಳ ಹೆಸರಿನಲ್ಲಿಯೂ ಬರೆದಿದ್ದಾರೆ.

# ಅಣ್ಣ-ತಮ್ಮ ಬೆಟ್ಟ

ಮೈಸೂರು ಜಿಲ್ಲೆಯ ಚಾಮರಾಜನಗರದ ಹತ್ತಿರ ಸಂಜೆವಾಡಿ ಎಂಬ ಚಿಕ್ಕ ಹಳ್ಳಿ ಇತ್ತು. 30 –40 ಕುಟುಂಬಗಳ ಚಿಕ್ಕ ಹಳ್ಳಿ; ಎಲ್ಲರೂ ವ್ಯವಸಾಯ ಮಾಡಿ ಜೀವಿಸುತ್ತಿದ್ದರು. ಎಲ್ಲರೂ ಕಷ್ಟಪಟ್ಟು ದುಡಿಯುತ್ತಿದ್ದರು. ಆದುದರಿಂದ ಚೆನ್ನಾಗಿ ಬೆಳೆ ಬೆಳೆಯುತ್ತಿತ್ತು. ಇಡೀ ಹಳ್ಳಿಜನ ಒಂದು ಕುಟುಂಬದಂತೆ ಅನ್ಯೋನ್ಯತೆಯಿಂದ ಸುಖವಾಗಿ ಇದ್ದರು. ಆ ಹಳ್ಳಿಯಲ್ಲಿ ಮಲ್ಲೇಗೌಡನೆಂಬ ಒಬ್ಬ ಮುದುಕನಿದ್ದನು. ಅವನನ್ನು ಕಂಡರೆ ಊರಿನವರಿಗೆಲ್ಲಾ ಪ್ರೀತಿ, ಗೌರವ. ಜನರು ಅವನನ್ನು ಪ್ರೀತಿಯಿಂದ "ಮಲ್ಲಜ್ಜ" ಎಂದೇ ಕರೆಯುತ್ತಿದ್ದರು. ಮಲ್ಲಜ್ಜ ಎಲ್ಲರಿಗೂ ಬೇಕಾದವನಾಗಿದ್ದನು. ಹಳ್ಳಿಯಲ್ಲಿ ಯಾರಿಗಾದರೂ ಸಣ್ಣಪುಟ್ಟ ಖಾಯಿಲೆ ಆದರೆ ತಕ್ಷಣ ಮಲ್ಲಜ್ಜನ ಬಳಿಗೆ ಓಡುತ್ತಿದ್ದರು. ಮಲ್ಲಜ್ಜ ಒಡನೆ ಅವರೊಡನೆ ಖಾಯಿಲೆಯವರನ್ನು ಕಾಣಲು ಅವರಿದ್ದಲ್ಲಿಗೆ ಹೋಗುವನು. ಅವನ ಕೈಲಿ ಒಂದು ಹಸಿರುಚೀಲ ಸದಾ ಇರುತ್ತಿತ್ತು. ಅದರಲ್ಲಿ ಅವನ ಎಲೆ ಅಡಿಕೆ ಸುಣ್ಣದ ಜೊತೆಗೆ ಸಣ್ಣಪುಟ್ಟ ಖಾಯಿಲೆಗಳಿಗೆ ಬೇಕಾಗುವ ಔಷಧಿಗಳು ಇರುತ್ತಿದ್ದವು. ತಲೆನೋವಿಗೆ ಎಂತಹುದೋ ಒಂದು ಹಸಿರು ಪುಡಿಯನ್ನು ನೀರಿನಲ್ಲಿ ಕದರಿ ಕುಡಿಸುವನು. ಸ್ವಲ್ಪ ಹೊತ್ತಿಗೆ ತಲೆನೋವು ಮಾಯವಾಗುತ್ತಿತ್ತು. ನೆಗಡಿಯಾಗಿ ಕಫ ಕಟ್ಟಿಕೊಂಡು ಒಂಸೆ ಆಗಿದ್ದರೆ ಎಂತಹುದೋ ಹಸಿರೆಲೆ ತಂದು ಅದರ ನಾಲ್ಕು ತೊಟ್ಟು ರಸವನ್ನು ಮೂಗಿಗೆ ಹಿಂಡುವನು. ಸೀನಿನೊಂದಿಗೆ ಕಫ ಕತ್ತರಿಸಿ ಉಸಿರಾಟ ಸರಳವಾಗುತ್ತಿತ್ತು. ಜ್ವರ,

ಕೆಮ್ಮಲು, ಹೊಟ್ಟೆನೋವುಗಳಿಗೂ ಔಷಧಿ ಸಿದ್ಧವಾಗಿರುತ್ತಿತ್ತು. ಇಕ್ಕು ಮದ್ದು ಹಾಕಿದ್ದರ ಕಾರಣದಿಂದ ಊಟ ಸೇರದೇ ಬಡಕಲಾಗಿದ್ದವರಿಗಂತೂ ಮಲ್ಲಜ್ಜ ಕೊಡುತ್ತಿದ್ದ ಔಷಧಿ ಸಂಜೀವಿನಿ. ಸುತ್ತ ಹತ್ತಾರು ಮೈಲಿಗಳಿಂದಲೂ ಆ ಔಷಧಿಗಾಗಿ ಜನ ಬರುತ್ತಿದ್ದರು. ಈ ರೀತಿ ಮಲ್ಲಜ್ಜ ಅವನ ಮನೆಯವರಿಗೆ ಮಾತ್ರವಲ್ಲ, ಊರಿನವರಿಗಷ್ಟೇ ಅಲ್ಲ, ಸುತ್ತಮುತ್ತಲ ಬಹುಜನರಿಗೆ ಸಹಾಯಕನಾಗಿದ್ದ. ಆದ್ದರಿಂದ ಮಲ್ಲಜ್ಜ ಎಂದರೆ ಎಲ್ಲರಿಗೂ ಪ್ರೀತಿ.

ಹಳ್ಳಿಯಲ್ಲಿ ಚಿಕ್ಕಮಕ್ಕಳು ಜಗಳ ಆಡಲಿ, ತಂದೆ ಮಕ್ಕಳು, ಅಣ್ಣ ತಮ್ಮಂದಿರು, ಓರಗಿತ್ತಿಯರು, ಅತ್ತೆಸೊಸೆಯರು, ನೆರೆಹೊರೆಯವರು ಯಾರೇ ಜಗಳ ಆಡಿಕೊಂಡರೂ ಸಮಾಧಾನದ ತೀರ್ಮಾನಮಾಡುವ ಹೊಣೆ ಮಲ್ಲೇಗೌಡನದೇ. 'ಮಕ್ಕಳೇ, ಜಗಳ ಆಡಬೇಡಿ, ಒಬ್ಬರನ್ನೊಬ್ಬರು ಪ್ರೀತಿಸಿರಿ, ಕಷ್ಟದಲ್ಲಿರುವವರಿಗೆ ಸಹಾಯಮಾಡಿ, ಮಾತೇ ಮುತ್ತು, ಮಾತೇ ಮಿತ್ತು. ಆದ್ದರಿಂದ ಒಳ್ಳೆಯ ಮಾತನ್ನೇ ಆಡಿ. ಒಳ್ಳೆಯ ಮಾತಾಡಿ ಕೆಟ್ಟವರಿಲ್ಲ, ಕೆಟ್ಟ ಮಾತಾಡಿ ಉದ್ಧಾರವಾದವರಿಲ್ಲ. ನಮ್ಮೂರಿನ ಜನರೆಲ್ಲ ಒಂದೇ ತಾಯಿಯ ಮಕ್ಕಳಂತೆ ಬದುಕಬೇಕು. ಇವೇ ಮುಂತಾದ ತಿಳುವಳಿಕೆ ಹೇಳುತ್ತಿದ್ದ. ಒಟ್ಟಿನಲ್ಲಿ ಮಲ್ಲೇಗೌಡ ಅಜಾತ ಶತ್ರುವಾಗಿದ್ದ.ಮಲ್ಲಜ್ಜನಿಗೆ ಇಬ್ಬರು ಗಂಡುಮಕ್ಕಳು ಇದ್ದರು. ದೊಡ್ಡವನು ಮಾದ, ಚಿಕ್ಕವನು ನಂಜ. ನೋಡಲು ಇಬ್ಬರೂ ಸುಂದರವಾಗಿ ಒಂದೇ ತೆರನಾಗಿದ್ದರು. ಒಬ್ಬರನ್ನೊಬ್ಬರು ತುಂಬಾ ಪ್ರೀತಿಸುತ್ತಿದ್ದರು. ಇಬ್ಬರೂ ಚಿಕ್ಕಂದಿನಲ್ಲಿ ಜಗಳ ಮಾಡಿದುದೇ ಇಲ್ಲ. ಆಟವಾಡುವಾಗ ಇಬ್ಬರೂ ಜೊತೆ, ಊಟಕ್ಕೂ ಅಕ್ಕಪಕ್ಕದಲ್ಲೇ ಕುಳಿತು ಕೊಳ್ಳಬೇಕು. ಮಲಗುವುದಂತೂ ಒಂದೇ ಹಾಸಿಗೆಯಲ್ಲಿ. ಮಲ್ಲಜ್ಜ ಇಬ್ಬರಿಗೂ ಒಂದೇ ತರದ ಅಂಗಿ ಹೊಲಿಸುತ್ತಿದ್ದ. ಹೀಗೆ ಅಣ್ಣತಮ್ಮಂದಿರು, ಪ್ರೇಮವೆಂಬ ಹಾಲನ್ನುಂಡು ಚೆನ್ನಾಗಿ ಬೆಳೆದು ದೊಡ್ಡವರಾದರು. ಎಲ್ಲರೂ ಮಲ್ಲಜ್ಜನ ಮಕ್ಕಳು ರಾಮಲಕ್ಷ್ಮಣರಿದ್ದಂತೆ ಎಂದು ಹೊಗಳುತ್ತಿದ್ದರು.

ದೊಡ್ಡವರಾದಂತೆ ಇಬ್ಬರೂ ತಮ್ಮ ಹೊಲದಲ್ಲಿ ಕಷ್ಟಪಟ್ಟು ದುಡಿಯುತ್ತಿದ್ದರು. ಹೊಲದಲ್ಲಿ ರಾಗಿ, ಜೋಳ, ಅವರೆ, ಕಡಲೆ, ತೊಗರಿ, ಸಾಸಿವೆ, ಮುಂತಾಗಿ ಕಾಳುಕಡಿಗಳನ್ನು ಬೆಳೆದು ಸುಖವಾಗಿದ್ದರು. ಮಕ್ಕಳು ಶ್ರದ್ಧೆಯಿಂದ ಕೆಲಸ ಮಾಡುವುದನ್ನು ಕಂಡು ಮಲ್ಲಜ್ಜನಿಗೆ ತುಂಬಾ ಹಿಗ್ಗು. ಒಂದು ವರ್ಷ ಕಣಜದ ತುಂಬಾ ದವಸ ಧಾನ್ಯ ತುಂಬಿತ್ತು, ಹೊಲದಲ್ಲಿ ಒಳ್ಳೆ ಬೆಳೆ ಬೆಳೆದುನಿಂತಿತ್ತು. ಆ ವರ್ಷ ಮಲ್ಲಜ್ಜ ಇಬ್ಬರಿಗೂ ಹೆಣ್ಣುನೋಡಿ ಸಂಭ್ರಮದಿಂದ ಮದುವೆಮಾಡಿದ. ಮಲ್ಲಜ್ಜನ ಸಂಸಾರ ಬೆಳೆದಂತೆ ಅವನ ಸಂತೋಷವೂ ಹೆಚ್ಚಿತು. ಹಿರಿಯಮಗ ಮಾದಪ್ಪನಿಗೆ ನಾಲ್ಕು ಮಕ್ಕಳಾದವು. ಎರಡು ಗಂಡು ಎರಡು ಹೆಣ್ಣು ಮಕ್ಕಳು ಮುದ್ದಾಗಿದ್ದವು. ಅಪ್ಪ, ಅಮ್ಮ, ತಾತ, ತಂದೆ, ಚಿಕ್ಕಪ್ಪ, ಚಿಕ್ಕಮ್ಮ ಇವರ ಮಮತೆಯ ಮಕ್ಕಳು ಬೆಳೆದವು. ಮಲ್ಲಜ್ಜ ದಿನಾ ರಾತ್ರಿ

ಮಕ್ಕಳಿಗೆ ಪುಣ್ಯಕೋಟಿಯ ಕಥೆ ಹೇಳುವನು. ರಾಮಾಯಣ, ಮಹಾಭಾರತದ ಕಥೆಗಳು, ಕಾಡಿನ ಪ್ರಾಣಿಗಳ ಕಥೆಗಳು, ಕೋಲಾಟದ ಪದಗಳನ್ನು ಹೇಳಿಕೊಡುವನು. ಹೀಗೆ ಮಕ್ಕಳೊಂದಿಗೆ ಮಗುವಾಗಿ ಸಂತೋಷವಾಗಿದ್ದನು. ಹೀಗೇ 8 ವರ್ಷಗಳು ಕಳೆದವು.

ಕಿರಿಮಗ ನಂಜೇಗೌಡನಿಗೆ ಮಾತ್ರ ಮಕ್ಕಳಾಗಲೇ ಇಲ್ಲ. ಆದರೂ ಅದನ್ನು ಮನಸ್ಸಿಗೆ ಹಚ್ಚಿಕೊಳ್ಳದೇ ಅಣ್ಣನ ಮಕ್ಕಳನ್ನು ತುಂಬಾ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದನು. ಮಕ್ಕಳಿಗೆ ಬುಗುರಿ, ಎಳೆದಾಡುವ ಗಾಡಿ, ಚಿಣ್ಣಿಕೋಲು ಮುಂತಾದ ಆಟಿಕೆಗಳನ್ನು ಮಾಡಿಕೊಡುವನು. ಮಕ್ಕಳ ಆಟಪಾಠಗಳನ್ನು ನೋಡಿ ನಕ್ಕುನಲಿಯುವನು. ತನಗೆ ಮಕ್ಕಳಾಗಲಿಲ್ಲವೆಂಬ ನೆನಪೇ ಅವನಿಗಾಗುತ್ತಿರಲಿಲ್ಲ. ನಂಜೇಗೌಡನ ಹೆಂಡತಿಗೆ ಮಾತ್ರ ಈ ಮಕ್ಕಳನ್ನು ಕಂಡರೆ ಹೊಟ್ಟೆಕಿಚ್ಚು. ತನಗೆ ಮಕ್ಕಳಾಗಲಿಲ್ಲವಲ್ಲ ಎಂಬ ಕೊರಗು. ಈ ಮಕ್ಕಳನ್ನು ಗಂಡ ಪ್ರೀತಿಸಿದಷ್ಟೂ ಇವಳು ದ್ವೇಷಿಸುತ್ತಿದ್ದಳು. ಗಂಡ ಮಕ್ಕಳೊಡನೆ ನಕ್ಕು ನಲಿಯುವುದನ್ನು ಕಂಡಾಗಲೆಲ್ಲಾ ಅವನ ಮೇಲೆ ಸಿಡುಕುವಳು "ಕೆಲಸ ಮಾಡಲಾರದೇ ಮಕ್ಕಳೊಡನೆ ಕಾಲ ಕಳೆಯುತ್ತೀರಾ" ಎಂದು ಕೂಗಾಡುವಳು. ಆಗ ನಂಜೇಗೌಡ "ಲೇ ಗಂಗೆ, ಮಕ್ಕಳು ದೇವರ ಸಮಾನ. ಅವರ ಮಾತು, ಆಟಗಳನ್ನು ನೋಡಿ ಸಂತೋಷಪಡು. ನಿನಗಂತೂ ಮಕ್ಕಳಾಗಲಿಲ್ಲ. ಇವೇ ನಿನ್ನ ಮಕ್ಕಳೆಂದು ತಿಳಿದುಕೋ. ನೀನೂ ಅವನ್ನು ಪ್ರೀತಿಸಿದರೆ, ಅವರೂ ನಿನ್ನನ್ನು ಪ್ರೀತಿಸುತ್ತಾರೆ" ಎಂದು ಸಮಾಧಾನ ಹೇಳುವನು. ಆದರೆ ಅವನ ಈ ಮಾತುಗಳು ಅವಳ ಮನಸ್ಸಿಗೆ ರುಚಿಸುವುದೇ ಇಲ್ಲ. ನಂಜೇಗೌಡ ಸಂಜೆ ಹೊಲದಿಂದ ಬಂದೊಡನೆ ಮಕ್ಕಳೊಡನೆ ಅಲ್ಲೆ ಹೊಡೆಯುವನು. ಇದನ್ನು ಕಂಡು ಗಂಗೆ ಗಂಡನ ಮೇಲೆ ಕೂಗಾಡಿ ರೇಗುವಳು. "ನಿಮಗೆ ಊಟಗೀಟ ಏನೂ ಬೇಡ. ಚಿಕ್ಕಮಕ್ಕಳ ಹಾಗೆ ಅವರೊಡನೆ ಆಡುತ್ತೀರಿ. ಎಷ್ಟಾದರೂ ಅವರು ಕಂಡವರ ಮಕ್ಕಳು. ಅವು ನಿಮ್ಮ ಮಕ್ಕಳೆಂದು ಯಾರೂ ಕರೆಯುವುದಿಲ್ಲ. ನಿಮ್ಮ ಆಟ ನಿಲ್ಲಿಸಿ" ಎಂದು ಮೂತಿ ಸೊಟ್ಟಗೆ ಮಾಡುವಳು. ಗಂಗೆಗೆ ದಿನದಿನಕ್ಕೆ ಮಕ್ಕಳ ಮೇಲಿನ ದ್ವೇಷ ಹೆಚ್ಚಾಯಿತು. ಏನಾದರೂ ನೆಪದಿಂದ ಮಕ್ಕಳನ್ನು ಬಯ್ಯುವಳು. ನಿಮ್ಮಿಂದ ಚಿಕ್ಕಪ್ಪ ಹಾಳಾದ ಎಂದು ಹೇಳುವಳು. ಬರುಬರುತ್ತಾ ಮಕ್ಕಳು ಗಂಗೆಯನ್ನು ಕಂಡರೆ ಹೆದರುತ್ತಿದ್ದರು. ಅವಳ ಜೊತೆ ಮಾತೇ ಆಡುತ್ತಿರಲಿಲ್ಲ. ಆದರೂ ಮಕ್ಕಳಿಗೆ ಗಂಗೆಯ ಬೈಗುಳ ತಪ್ಪುತ್ತಿರಲಿಲ್ಲ.

ಒಂದು ದಿನ ರಾಗಿಯ ಕಾಸಕ್ಕಿ ತರುವುದಕ್ಕೆ ಮಲ್ಲಜ್ಜ ಹೊಲಕ್ಕೆ ಹೋಗಿದ್ದ, ಮಕ್ಕಳೂ ತಾತನ ಜೊತೆ ಹೋಗಿದ್ದರು. ಕಾಸಕ್ಕಿಯನ್ನು ಬೆಂಕಿಯಲ್ಲಿ ಸುಟ್ಟು ಉಜ್ಜಿ ತಿನ್ನುವುದೆಂದರೆ ಮಕ್ಕಳಿಗೆ ತುಂಬಾ ಇಷ್ಟ. ಮಾವ ನಂಜಿರೂ ಹೊಲದಲ್ಲೇ ಕೆಲಸ ಮಾಡುತ್ತಿದ್ದರು. ಕಾಸಕ್ಕಿಯ ಕಂತೆಗಳನ್ನು ಕೈಗಳಲ್ಲಿ ಹಿಡಿದುಕೊಂಡು ಮಕ್ಕಳು ಹಾಡುತ್ತಾ, ನಲಿಯುತ್ತಾ ಓಡೋಡಿ ಮನೆಗೆ ಬಂದರು. ಮಲ್ಲಜ್ಜನೂ ಅವರ ಹಿಂದೆಯೇ ಬರುತ್ತಿದ್ದ.

ಮಕ್ಕಳು ಮನೆ ಬಾಗಿಲಬಳಿ ಬಂದವರೆ ಒಳಗೆ ಹೋಗದೆ ಬೆಪ್ಪಾಗಿ ನಿಂತುಬಿಟ್ಟವು. ಒಳಗಡೆ ಗಂಗೆಗೂ ಮಾದನ ಹೆಂಡತಿ ರಂಗಿಗೂ ದೊಡ್ಡ ಜಗಳ ನಡೆಯುತ್ತಿತ್ತು. ರಂಗಿಯ ಜುಟ್ಟು ಗಂಗೆಯ ಕೈಯಲ್ಲಿತ್ತು. ಗಂಗೆಯ ಜುಟ್ಟು ರಂಗಿಯ ಕೈಯಲ್ಲಿ. ಇಬ್ಬರೂ ಜುಟ್ಟುಗಳನ್ನು ಎಳೆದಾಡುತ್ತಾ ಬೈದಾಡುತ್ತಿದ್ದರು. ಅಷ್ಟರಲ್ಲಿ ಮಲ್ಲಜ್ಜನೂ ಬಂದು ಇವರ ಜಗಳ ನೋಡಿದ. ಅವನಿಗೆ ಕೋಪ ನೆತ್ತಿಗೇರಿತು. ಒಂದೇ ನೆಗೆತಕ್ಕೆ ಒಳಕ್ಕೆ ಹಾರಿ ಇಬ್ಬರಿಗೂ ಒಂದೊಂದು ಗುದ್ದುಕೊಟ್ಟ, ಹೆಂಗಸರಿಬ್ಬರೂ ಹಿಡಿದಿದ್ದ ಕೂದಲನ್ನು ಕೈಬಿಟ್ಟು ಅಳುತ್ತಾ ನಿಂತುಬಿಟ್ಟರು. ಮಲ್ಲಜ್ಜನ ಕಣ್ಣು ಕೆಂಪಾಗಿತ್ತು. ಏದುಸಿರು ಬಿಡುತ್ತಿದ್ದ, ಅವನ ಸಿಟ್ಟು ಇನ್ನೂ ಇಳಿದಿರಲಿಲ್ಲ. "ಏನಿದು, ಮಲ್ಲಜ್ಜನ ಮನೆಯಲ್ಲಿ ಜಗಳವೇ?" ಎಂದು ಗುಡುಗಿದ. "ನಾಚಿಕೆ ಆಗುವುದಿಲ್ಲವೇ ನಿಮಗೆ? ಊರಲ್ಲಿ ಎಲ್ಲರ ಮನೆಯ ಜಗಳವನ್ನೂ ನ್ಯಾಯಮಾಡಿ ತೀರಿಸುವವನು ನಾನು. ಇಡೀ ಹಳ್ಳಿಯ ಜನವೆಲ್ಲ ನ್ಯಾಯಕ್ಕೆ ನನ್ನ ಬಳಿಗೇ ಬರುತ್ತಾರೆ. ಆದರೆ ಈ ದಿನ ನನ್ನ ಮನೆಯಲ್ಲಿಯೇ ಜಗಳವೇ? ಅದೂ ಹೊಡೆದಾಟ! ಇನ್ನೆಂದೆಂದೂ ಈ ಮನೆಯಲ್ಲಿ ಜಗಳ ಆಡಕೂಡದು ತಿಳಿಯಿತೇನ್ರೇ!" ಎಂದು ಅರಚಿದ. ಹೆಂಗಸರಿಬ್ಬರೂ ಅಳುತ್ತಾ ತಲೆ ಬಗ್ಗಿಸಿಕೊಂಡು ಒಳಕ್ಕೆ ನಡೆದರು.

ನಂಜನ ಹೆಂಡತಿ ಗಂಗೆ ತುಂಬಾ ಹಠಮಾರಿ. ಅವಳು ರಾತ್ರಿಯೆಲ್ಲಾ ಗಂಡನೊಡನೆ ಚರ್ಚೆಮಾಡಿದಳು, ಕೂಗಾಡಿದಳು, ಕಡೆಗೆ ಅಳುತ್ತಾ ಆ ಮನೆಯಲ್ಲಿ ತಾನಿರುವುದಿಲ್ಲವೆಂದು ಹಠಹಿಡಿದಳು. ನಂಜ ಸಮಾಧಾನ ಹೇಳಿದ, ಬೈದ, ಹೊಡೆದ. ಆದರೂ ಗಂಗೆ ಹಿಡಿದ ಪಟ್ಟು ಬಿಡಲಿಲ್ಲ. ಬೆಳಗ್ಗೆ ಮಲ್ಲಜ್ಜ ಬೇಗನೆ ಎದ್ದ. ಅವನಿಗೆ ರಾತ್ರಿಯೆಲ್ಲ ಸರಿಯಾಗಿ ನಿದ್ದೆಯೇ ಬರಲಿಲ್ಲ. ಅವನ ಸೊಸೆಯರು ಇಬ್ಬರೂ ಜಗಳ ಆಡಿದ್ದು ಅವನ ಮನಸ್ಸಿಗೆ ತುಂಬಾ ನೋವಾಗಿತ್ತು. ಹೆಂಗಸರ ಮನಸ್ಸಿನ ಅಸೂಯೆ ಬೇಗ ಹೋಗುವುದಿಲ್ಲ ಎಂಬುದು ಅವನಿಗೆ ಚೆನ್ನಾಗಿ ಗೊತ್ತಿತ್ತು. ಮುಂದೆ ತನ್ನ ಮನೆಯಲ್ಲಿ ಜಗಳ ಆಗಬಾರದೆಂದು ಅವನ ಇಷ್ಟ. ಅದಕ್ಕಾಗಿ ಅಣ್ಣತಮ್ಮಂದಿರು ಒಂದೇ ಮನೆಯಲ್ಲಿ ಇರುವುದು ಬೇಡ ಎಂದು ತೀರ್ಮಾನಿಸಿದ. ನಂಜೇಗೌಡನಿಗೂ ರಾತ್ರಿ ನಿದ್ದೆ ಬರಲಿಲ್ಲ. ಬೆಳಕಾದರೂ ಏಳಲು ಮನಸ್ಸಾಗಲಿಲ್ಲ. ಬೇಸರದಿಂದ ಹೊರಳಾಡುತ್ತಾ ಹಾಸಿಗೆಯಲ್ಲೇ ಬಿದ್ದಿದ್ದ. ಅವನ ತಲೆಯಲ್ಲಿ ಏನೇನೋ ಯೋಚನೆ. ಹೆಂಡತಿಯ ಹಠಮಾರಿತನ ಒಂದು ಕಡೆ, ಮಕ್ಕಳ ಮೇಲಿನ ಪ್ರೀತಿ ಇನ್ನೊಂದು ಕಡೆ. ತಂದೆ, ಅಣ್ಣ ಅತ್ತಿಗೆಯರ ಮೇಲಿನ ಗೌರವ ಒಂದು ಕಡೆ, ಹೀಗಾಗಿ ಅವನ ಮನಸ್ಸೆಲ್ಲ ಗೊಂದಲಮಯವಾಗಿತ್ತು. ಅಷ್ಟರಲ್ಲಿ ಮಲ್ಲಜ್ಜ ಮಗನನ್ನು ಕರೆದ. ನಂಜೇಗೌಡ ಅಪ್ಪ ಕರೆದದ್ದು ಕೇಳಿದರೂ ತಕ್ಷಣ ಎದ್ದುಬರಲಿಲ್ಲ. ಹಾಗೇ ಬಿದ್ದಿದ್ದ. "ಮಗಾ ನಂಜಾ, ಕರೆದದ್ದು ಕೇಳಲಿಲ್ಲವೇ? ಎದ್ದು ಬಾ ಇಲ್ಲಿ" ಎಂದು ಗುಡುಗಿದ ಮಲ್ಲಜ್ಜ. ನಂಜೇಗೌಡ ತಕ್ಷಣ ಎದ್ದು ಬಂದು ತಂದೆಯ

ಕಾಲಮೇಲೆ ಉರುಳಿದ. ಕಣ್ಣೀರಿನಿಂದ ಅಪ್ಪನ ಕಾಲು ಒದ್ದೆಯಾಯಿತು. ಆಗ ಮಲ್ಲಪ್ಪನೇ ಮಗನನ್ನು ಎಬ್ಬಿಸಿ ತಲೆನೇವರಿಸಿ "ಅಳಬೇಡ ಮಗಾ, ಆದದ್ದು ಆಯಿತು. ಚಿಂತಿಸಿಫಲವಿಲ್ಲ. ನಿನ್ನ ಹೆಂಡತಿ ಹಠಗಾರ್ತಿ, ಅವಳ ಹಠವೇ ಗೆಲ್ಲಲಿ. ನೀವಿಬ್ಬರೂ ಇಂದಿನಿಂದ ಆಚೆ ಹಟ್ಟೀಲಿ ಬೇರೆ ಇರಿ. ಅವಳಿಗೆ ಏನೇನು ಪಾತ್ರೆ ಬೇಕೋ ತೆಗೆದುಕೊಳ್ಳಲಿ. ಹಸು ಗಂಗೆಯನ್ನು ಅದರ ಕರುವನ್ನೂ ಹೊಡೆದುಕೊಂಡು ಹೋಗಿ, ಹಾಲಿಗಾಗುತ್ತದೆ. ಏನೇ ಆದರೂ ನಮ್ಮ ಮನೆಯಲ್ಲಿ ಜಗಳ ಬೇಡ" ಎಂದನು.

"ಅಪ್ಪಾ, ನನ್ನನ್ನು ಕ್ಷಮಿಸಿ. ನಾನು ಬೇರೆ ಹೋಗಲಾರೆ. ಹೇಗೆ ಬೇರೆ ಊಟ ಮಾಡಲಿ" ಎಂದು ಬಿಕ್ಕಳಿಸಿದ, ನಂಜೇಗೌಡ. ಮಲ್ಲಪ್ಪ ಮಗನತಲೆಯನ್ನು ಪ್ರೀತಿಯಿಂದ ತಡವಿದ. "ನಂಜಾ, ನೀನು ಬೇರೆ ಹೋದರೂ ನನ್ನ ಮಗನೇ ಅಲ್ಲವೇ? ಮಾದ, ನೀನು ನನ್ನ ಎರಡು ಕಣ್ಣುಗಳಿದ್ದಂತೆ. ನಿಮ್ಮೊಳಗಿನ ಪ್ರೀತಿ ಎಂದೂ ಕಡಿಮೆ ಆಗುವುದಿಲ್ಲ. ಅದನ್ನು ಯಾರೂ ಕಸಿದುಕೊಳ್ಳಲಾಗುವುದಿಲ್ಲ. ಆದರೆ ನಮ್ಮ ಮನೆಯಲ್ಲಿ ಜಗಳ ಆಗಬಾರದು, ಜಗಳದಿಂದ ನಮ್ಮ ಹಿರಿಯರ ಹೆಸರೆಲ್ಲಾ ಹಾಳಾಗುತ್ತದೆ. ಆದ್ದರಿಂದ ಈ ಹೆಂಗಸರಿಗೆ ಬುದ್ಧಿ ಬರುವವರೆಗೆ ಬೇರೆಯೇ ಇರೋಣ. ಈ ಬಾರಿ ಹೊಲದ ಕೆಲಸವೆಲ್ಲಾ ಮುಗಿದಿದೆ. ಇನ್ನು 10–15 ದಿನಕ್ಕೆ ರಾಗಿ ಕುಯ್ಲು ಒಕ್ಕಣೆಮಾಡಬೇಕು. ಆಗ ರಾಗಿಯನ್ನು ಸಮನಾಗಿ ಹಂಚಿಕೊಳ್ಳಿ, ಮುಂದಿನ ವರ್ಷ ಆರಂಭವನ್ನೂ ಬೇರೆ ಮಾಡುವಿರಂತೆ. ಆದರೂ ನೀವಿಬ್ಬರೂ ರಾಮಲಕ್ಷ್ಮಣರಂತೆಯೇ ಇದ್ದುಕೊಂಡು ನನ್ನನ್ನೂ ಮಕ್ಕಳನ್ನೂ ಕಾಪಾಡಿ" ಎಂದನು. ನಂಜೇಗೌಡ ಮತ್ತು ಗಂಗೆ ಬೇರೆಮನೆಗೆ ಹೋದರು. ಗಂಗೆಗೆ ಈಗ ತುಂಬಾ ಆನಂದ. ರಂಗಿಯ ಮಕ್ಕಳ ಕಾಟ ಇಲ್ಲಿಲ್ಲ. ತನ್ನ ಮನೆಗೆ ಮಕ್ಕಳನ್ನು ಸೇರಿಸುವುದೂ ಇಲ್ಲ ಎಂದು ನಿರ್ಧರಿಸಿಕೊಂಡಳು. ಬೇರೆ ಮನೆಗೆ ಬಂದ ದಿನ ಗಂಗೆ ಎಳ್ಳುಹುರಿದು ಬೆಲ್ಲಹಾಕಿಕುಟ್ಟಿ ಉಂಡೆಮಾಡಿದಳು. ರಂಗಕ್ಕನ ಮಕ್ಕಳಿಗೆ ಎಳ್ಳುಂಡೆ ತುಂಬಾ ಇಷ್ಟ. ಇಂದು ಅವಕ್ಕೆ ಒಂದು ಚೂರೂ ಕೊಡುವುದಿಲ್ಲ ಎಂದು ಗೊಣಗಿಕೊಂಡು ಹಿಗ್ಗಿದಳು. ಮಧ್ಯಾಹ್ನ ನಂಜ ಹೊಲದಿಂದ ಆ ಮನೆಗೆ ಬಂದ. ಅವನ ಮುಖ ಬಾಡಿತ್ತು. ಅತ್ತು ಅತ್ತು ಕಣ್ಣು ಕೆಂಪಾಗಿತ್ತು. ಹೆಗಲ ಮೇಲಿನ ಚೌಕವನ್ನು ನೆಲದಮೇಲೆ ಹಾಕಿ ಹಾಗೆಯೇ ಉರುಳಿಕೊಂಡ. ಗಂಗೆ ನಗುತ್ತಾ ಗಂಡನ ಬಳಿ ಬಂದಳು. "ಊಟಕ್ಕೆ ಏಳಿ, ಹಸಿದು ಬಂದು ನೆಲದ ಮೇಲೇಕೆ ಬಿದ್ದುಕೊಂಡಿರಿ" ಎಂದಳು. ನಂಜ ಏನೂ ಮಾತನಾಡದೆ ಕೈಕಾಲು ತೊಳೆದುಕೊಂಡು ಅಡುಗೆಮನೆಗೆ ಹೋಗಿ ತಟ್ಟೆಯ ಮುಂದೆ ಕುಳಿತನು. ಗಂಗೆ ಮೊದಲು ಎರಡು ಎಳ್ಳುಂಡೆಗಳನ್ನು ಬಡಿಸಿದಳು. ಒಡನೆ ನಂಜ "ಯಾರೇ ಕೊಟ್ಟಿದ್ದು ಎಳ್ಳುಂಡೆ! ಅತ್ತಿಗೆ ಕಳಿಸಿದಳಾ?" ಎಂದು ಕೇಳಿದ. ಗಂಗೆ ಕೋಪದಿಂದ "ಅತ್ತಿಗೆ ಯಾಕೆ ಕೊಟ್ಟಾಳು? ನಾನೇ ಮಾಡಿದೆ; ಹೊಸ ಮನೆಗೆ ಬಂದುದಕ್ಕೆ ಸಿಹಿ ಮಾಡಬೇಡವಾ?" ಎಂದು ಅರಚಿದಳು. ಅಣ್ಣನ

ಮಕ್ಕಳಿಗೆ ಎಳ್ಳುಂಡೆ ಬಲು ಇಷ್ಟ ಎಂಬುದು ನಂಜನಿಗೆ ನೆನಪಾಯಿತು. ಅವರಿಗಿಲ್ಲದ ಉಂಡೆತಿನ್ನಲು ಮನಸ್ಸು ಒಪ್ಪಲಿಲ್ಲ. "ನಾನು ಮಕ್ಕಳನ್ನು ಬಿಟ್ಟು ಈ ಉಂಡೆ ತಿನ್ನುವುದಿಲ್ಲ. ನೀನೇ ಎಲ್ಲಾ ಮುಕ್ಕು" ಎಂದು ಹೇಳಿ ಎದ್ದೇಬಿಟ್ಟ, ಮನೆಯಿಂದಲೂ ನಡೆದುಬಿಟ್ಟ.

ಅಂದು ಬೆಳಗಿನಿಂದಲೂ ಮಕ್ಕಳನ್ನು ನೋಡಿರಲಿಲ್ಲ, ನಂಜ. ಅವನಿಗೆ ತುಂಬಾ ಬೇಸರವಾಗಿತ್ತು. ನೆಟ್ಟಗೆ ತನ್ನ ಅಪ್ಪ, ಅಣ್ಣನ ಮನೆಗೆ ನಡೆದ. ಬಾಗಿಲ ಹೊರಗೆ ನಿಂತು ಕ್ಷಣ ನಿಂತುಕೊಂಡ. ಒಳಗೆ ಮಕ್ಕಳ ಅಳು ಕೇಳಿಸಿತು. "ನಮಗೆ ಚಿಕ್ಕಪ್ಪ ಬೇಕು" ಎಂದು ಮಕ್ಕಳು ಬಿಕ್ಕಿ ಬಿಕ್ಕಿ ಅಳುತ್ತಿದ್ದರು. "ಬೇಡ, ನೀವು ಅಲ್ಲಿಗೆ ಹೋಗಕೂಡದು. ಅಲ್ಲಿಗೆ ಹೋದರೆ ನಿಮ್ಮ ಕಾಲುಗಳನ್ನು ಮುರಿಯುತ್ತೇನೆ" ಎಂದು ಮಕ್ಕಳನ್ನು ಗದರಿಸುತ್ತಿದ್ದಳು ರಂಗಿ. "ಯಾಕೆ ಹೋಗಬಾರದು? ಚಿಕ್ಕಪ್ಪ ಇಲ್ಲೇ ನಮ್ಮ ಜೊತೆಯಲ್ಲೇ ಇರಲಿ" ಎಂದು ಒಬ್ಬ ಹುಡುಗ ಹೇಳಿದ. "ಚಿಕ್ಕಪ್ಪ ಬರದೇ ಇದ್ದರೆ ನಾನು ಊಟಾನೇ ಮಾಡೊಲ್ಲ" ಇನ್ನೊಬ್ಬನ ಹಠ. ಬಾಗಿಲಲ್ಲಿ ನಿಂತು ಇದನ್ನೆಲ್ಲ ಕೇಳಿಸಿಕೊಂಡ ನಂಜನಿಗೆ ಇನ್ನು ತಡೆಯಲಾಗಲಿಲ್ಲ. "ನಿಮ್ಮ ಚಿಕ್ಕಪ್ಪ ಇಲ್ಲೇ ಇದ್ದೇನಪ್ಪಾ, ತಂಟೆ ಮಾಡದೇ ಜಾಣರಾಗಿ ಊಟಮಾಡಿ" ಎಂದು ಹೇಳುತ್ತಾ ಒಳಕ್ಕೆ ಬಂದ. ಎಲ್ಲ ಹುಡುಗರೂ "ಚಿಕ್ಕಪ್ಪ ಬಂದ, ಚಿಕ್ಕಪ್ಪ ಬಂದ" ಎಂದು ನಂಜನನ್ನು ಮುತ್ತಿಕೊಂಡು ಕುಣಿದಾಡಿದರು. ನಂಜ ಎರಡೂ ಕೈಗಳಿಂದ ನಾಲ್ಕೂ ಮಕ್ಕಳನ್ನೂ ಬಾಚಿ ತಬ್ಬಿಕೊಂಡನು. ಅವನ ಕಣ್ಣುಗಳಿಂದ ನೀರು ಸುರಿಯುತ್ತಿತ್ತು. "ಚಿಕ್ಕಪ್ಪ, ಅಳಬೇಡ, ನೀನು ಎಲ್ಲೂ ಹೋಗಬೇಡ, ಇಲ್ಲೇ ನಮ್ಮೊಟ್ಟಿಗೆ ಇರು" ಎಂದು ಮಕ್ಕಳೆಲ್ಲರೂ ಒಮ್ಮೆಗೇ ಅರಚಿದರು. ನಂಜ ತನ್ನ ದುಃಖ, ಸಂತೋಷ ಎರಡನ್ನೂ ಸಮಾಧಾನ ಮಾಡಿಕೊಂಡ. "ಬನ್ನಿ ಮಕ್ಕಳೇ, ಆಚೆ ಹಟ್ಟಿಗೆ ಹೋಗೋಣ. ಅಲ್ಲಿ ಚಿಕ್ಕಮ್ಮ ಎಳ್ಳುಂಡೆಮಾಡಿದ್ದಾಳೆ. ತಿನ್ನೋಣ" ಎಂದು ಕರೆದ. ತಕ್ಷಣ ಮಗಳೊಬ್ಬಳು 'ಬೇಡಪ್ಪಾ, ನಾವು ಅಲ್ಲಿಗೆ ಬರುವುದಿಲ್ಲ. ಚಿಕ್ಕಮ್ಮ ಹೊಡೀತಾಳೆ' ಎಂದಳು. "ಬೆಳಿಗ್ಗೆ ನಾವಿಬ್ಬರೂ ಅಲ್ಲಿ ಹೋಗಿದ್ದೆವು. ಚಿಕ್ಕಮ್ಮ ಗದರಿಸಿ ಇಲ್ಲಿಗೆ ಬರಬೇಡಿ ಎಂದಿದ್ದಾಳೆ. ನಾವು ಬರೊಲ್ಲ ಚಿಕ್ಕಪ್ಪ" ಎಂದು ಇನ್ನೊಂದು ಹೆಣ್ಣುಮಗು ರಾಗ ಎಳೆಯಿತು. ನಂಜ ನಾಲ್ಕು ಮಕ್ಕಳನ್ನೂ ತೊಡೆಯ ಮೇಲೆ ಕೂರಿಸಿಕೊಂಡೇ ಇದ್ದ. ಅವನ ಕಣ್ಣುಗಳು ಮಾತ್ರ ಮುಚ್ಚೇ ಇದ್ದವು. ಕಣ್ಣಿಂದ ನೀರು ಮಾತ್ರ ಕೆನ್ನೆ ಮೇಲೆ ಹರಿಯುತ್ತಿತ್ತು. ರಂಗಿ ಏನೂ ಮಾತನಾಡದೇ ಅಡಿಗೆಯ ಮನೆಯಲ್ಲೇ ಇದ್ದಳು. ಅಷ್ಟರಲ್ಲಿ ಹೊಲದಿಂದ ಮಲ್ಲಪ್ಪ ಮಾದ ಇಬ್ಬರೂ ಮನೆಗೆ ಬಂದರು. ಮಕ್ಕಳು "ಅಜ್ಜಾ, ಅಪ್ಪಾ, ಚಿಕ್ಕಪ್ಪ!" ಎಂದು ಕೂಗಿಕೊಂಡವು. ನಂಜ ನಾಲ್ಕೂ ಮಕ್ಕಳನ್ನು ತೊಡೆಯಮೇಲೆ ಕೂರಿಸಿಕೊಂಡು ಕುಳಿತಿದ್ದ ರೀತಿಯನ್ನು, ಅವನ ನೀರುತುಂಬಿದ ಕಣ್ಣುಗಳನ್ನು ನೋಡಿ ಮಲ್ಲಪ್ಪನ ಕಣ್ಣಲ್ಲೂ ನೀರು ತುಂಬಿತು. ಮಾದ ಮೂಕನಾಗಿ ನಿಂತೇ ಇದ್ದ. ಮಲ್ಲಪ್ಪ ನಂಜನ ಹೆಗಲ ಮೇಲೆ ಕೈಹಾಕಿ ತಬ್ಬಿಕೊಂಡ. "ಮಗಾ, ನಂಜ,

ಅಳಬೇಡ. ನಾವ್ಯಾರೂ ನಿನಗೆ ದೂರವಾಗಿಲ್ಲ. ನೋಡು ಮಕ್ಕಳು ನಿನ್ನನ್ನು ಎಷ್ಟು ನೆನಸಿಕೊಳ್ಳುತ್ತವೆ" ಎಂದ. ನಂಜ ಕೊಂಚ ಸಮಾಧಾನಮಾಡಿಕೊಂಡು " ಅಪ್ಪಾ ಈ ಮಕ್ಕಳನ್ನು ಬಿಟ್ಟು ಆ ಮನೆಯಲ್ಲಿ ನಾನು ಒಬ್ಬನೇ ಉಣ್ಣಲಾರೆ, ಅದಕ್ಕೇ ಬಂದುಬಿಟ್ಟೆ" ಎಂದನು. ಮಗನ ಮಾತು ಕೇಳಿ ಮಲ್ಲಜ್ಜನ ಕಣ್ಣಲ್ಲೂ ನೀರು ತೊಟ್ಟಿಕ್ಕಿತು. "ನಂಜಾ, ನಾಲ್ಕು ಹೆಜ್ಜೆ ಹಾಕಿದರೆ ನಿನ್ನ ಮನೆ, ಮಕ್ಕಳಂತೂ ಸದಾ ನಿನ್ನ ಮನೆಕಡೇಗೇ ಮುಖಮಾಡಿಕೊಂಡಿರುತ್ತಾರೆ, ಸಮಯ ಸಿಕ್ಕಾಗಲೆಲ್ಲಾ ಬಂದು ಮಕ್ಕಳೊಡನೆ ಲಲ್ಲೆಹೊಡಿ, ಆಟ ಆಡು, ಆ ಮುಕ್ಕನಿಗಂತೂ ಆ ಪುಣ್ಯವಿಲ್ಲ, ಎದ್ದೇಳು ಊಟಮಾಡು" ಅಂದನು. ಊಟ ಮಾಡಿ ಸ್ವಲ್ಪಹೊತ್ತು ಅಪ್ಪಮಕ್ಕಳು ಜಗಲಿಯ ಮೇಲೆ ಕುಳಿತು ಮಾತನಾಡುತ್ತಿದ್ದರು. ಮಕ್ಕಳೂ ಸಂತೋಷದಿಂದ ಆಡುತ್ತಿದ್ದರು, ರಂಗಿಯೂ ಬಾಗಿಲಬಳಿ ನಿಂತು ಮಕ್ಕಳಾಟವನ್ನು ನೋಡುತ್ತಿದ್ದಳು. "ಇನ್ನೇನು 3–4 ದಿನಗಳಲ್ಲಿ ರಾಗಿ ಬಡಿಯಬೇಕು. ಇಂದು ನಾಳೆಯೇ ಕಣವನ್ನು ಸಾರಿಸಬೇಕು" ಎಂದ ಮಾದ. "ಹೌದು, ಈ ಸಲ ರಾಗಿ ಹೋದ ವರ್ಷಕ್ಕಿಂತ ಕಡಿಮೆ ಬೀಳಬಹುದು" ಎಂದ ನಂಜ. "ಶಿವ ಕೊಟ್ಟಷ್ಟು ಆಯ್ತದೆ, ಅದಕ್ಯಾಕೆ ಚಿಂತೆ. ಕಣಜದಲ್ಲಿ ಹೋದವರ್ಷದ ರಾಗಿ ಇನ್ನೂ ಅರ್ಧ ಇದೆ" ಎಂದು ಸಮಾಧಾನ ಹೇಳಿದ ಮಲ್ಲಜ್ಜ, "ಅಣ್ಣ ನಡಿ ಕಣ ಸಾರಿಸಿ ಬಂದುಬಿಡೋಣ" ಎಂದ ನಂಜ. ರಂಗಿ ಸಗಣಿ ಮಂಕರಿ ಹೊತ್ತು ಹೊಲದ ಕಡೆ ನಡೆದೇಬಿಟ್ಟಳು. ಮಲ್ಲಜ್ಜ ಮಕ್ಕಳೊಂದಿಗೆ ಮನೆಯಲ್ಲೇ ಉಳಿದ. ಅಣ್ಣತಮ್ಮ ಇಬ್ಬರೂ ಬಿಂದಿಗೆ ಸಗಣಿ ತೆಗೆದುಕೊಂಡು ಹೊಲದ ಕಡೆ ನಡೆದರು.ಗಂಗೆ ಸಂಜೆ ತನಕ ಗಂಡನಿಗಾಗಿ ಕಾದೇ ಕುಳಿತಿದ್ದಳು. ಗಂಡನನ್ನು ತನಗೆ ತೃಪ್ತಿಯಾಗುವಷ್ಟು ಬೈದುಕೊಂಡಳು "ಬರದೇ ಇದ್ದರೆ ಅಲ್ಲೇ ಬಿದ್ದಿರಲಿ, ಎಷ್ಟಾದರೂ ಅಪ್ಪಮಕ್ಕಳು ಒಂದು, ನಾನೊಬ್ಬಳೇ ಈ ಮನೆಯಲ್ಲಿ ಬಿದ್ದಿರಬೇಕು" ಎಂದು ಗೋಳಾಡಿದಳು. ಏನೂ ಅರಿಯದ ಮಕ್ಕಳಿಗೆ ಶಾಪ ಹಾಕುವುದನ್ನು ಮಾತ್ರ ಮರೆಯಲಿಲ್ಲ. "ನನ್ನ ಹೊಟ್ಟೆ ಉರಿ ಅವಕ್ಕೂ ಅವರಪ್ಪನಿಗೂ ತಟ್ಟಲಿ" ಎಂದು ಬಯ್ದಳು. ಸಂಜೆತನಕ ಎಲ್ಲರೂ ಸೇರಿ ರಾಗಿ ಬಡಿದು ತೂರಿದರು. ಕತ್ತಲಾಗುತ್ತಾಬಂತು.ಅಣ್ಣತಮ್ಮಂದಿರು ತುಂಬಾ ಹುರುಪಿನಿಂದ ಕೆಲಸಮಾಡುತ್ತಿದ್ದರು. ಒಂದು ವಾರ ಈ ರಾಗಿಬಡಿಯುವ ಕೆಲಸಸಾಗಿತು. ಅಂತೂ ರಾಗಿಬಡಿದು ತೂರುವ ಕೆಲಸ ಮುಗಿಯಿತು. ಪ್ರತಿವರ್ಷವೂ ಕಣದಲ್ಲಿ ದೊಡ್ಡದಾದ ಒಂದೇ ರಾಶಿ ಇರುತ್ತಿತ್ತು. ಈ ವರ್ಷ ಎರಡು ರಾಶಿ ಹಾಕಿದ್ದರು. ಸಣ್ಣ ಹವಳದ ರಾಶಿಗಳಂತೆ ರಾಗಿಯ ರಾಶಿಗಳು ಹೊಳೆಯುತ್ತಿದ್ದವು. ರಾತ್ರಿ ಮಲ್ಲಜ್ಜ, ನಂಜ, ಮಾದ ಮೂವರೂ ಕಣದಲ್ಲೇ ಮಲಗಿದರು. ನಂಜನಿಗೆ ನಿದ್ದೆಯೇ ಬರಲಿಲ್ಲ. "ಅಪ್ಪ, ಅಣ್ಣ ಸೇರಿ ರಾಗಿಯನ್ನು ಸಮನಾಗಿ ಹಂಚಿ ರಾಶಿ ಹಾಕಿದ್ದಾರೆ. ನಾವು ಇರುವವರು ಇಬ್ಬರೇ. ಅಣ್ಣನ ಸಂಸಾರ ದೊಡ್ಡದು. ನಾಲ್ಕು ಮಕ್ಕಳು, ಅಪ್ಪ, ಅಣ್ಣ, ಅತ್ತಿಗೆ ಒಟ್ಟು ಏಳು ಜನ ಇದ್ದಾರೆ.

ನಾವಾದರೋ ಪರದೇಶಿಗಳಂತೆ ಇಬ್ಬರೇ ಇಬ್ಬರು. ಕೈಯಿಂದ ಕಿತ್ತು ತಿನ್ನುವ ಮಕ್ಕಳು, ಬಂದುಹೋಗುವ ಬಳಗದವರು ಅಣ್ಣನಿಗೆ ಇದ್ದೇ ಇರುತ್ತಾರೆ. ಆದ್ದರಿಂದ ನನಗೆ ಅವನಷ್ಟು ರಾಗಿ ಬೇಕಿಲ್ಲ ಎಂದು ಲೆಕ್ಕ ಹಾಕಿದ. ಮಾದ ನಿದ್ದೆ ಮಾಡುತ್ತಲೇ ಇದ್ದ, ಇದೇ ತಕ್ಕ ಸಮಯವೆಂದು ನಂಜ ಮೆಲ್ಲಗೆ ಎದ್ದ, ತನ್ನ ಪಾಲಿನ ರಾಗಿಗುಡ್ಡೆಯ ಬಳಿ ನಡೆದ. ಸರಸರನೆ 20 ಹಿಡಿಗೆ ರಾಗಿತುಂಬಿ ಅಣ್ಣನ ಗುಡ್ಡೆಗೆ ಸುರಿದ. ಗುಡ್ಡೆಗಳನ್ನು ಸವರಿದ. ಸದ್ದಿಲ್ಲದೆ ಬಂದು ಮಲಗಿದ. ಮನಸ್ಸಿಗೆ ಸಮಾಧಾನವಾಯಿತು, ನಿಶ್ಚಿಂತೆಯಿಂದ ನಿದ್ದೆಮಾಡಿದ.

ಸ್ವಲ್ಪ ಹೊತ್ತಿಗೆ ಮಾದನಿಗೆ ಎಚ್ಚರವಾಯ್ತು. ತಲೆ ತುಂಬಾ ಯೋಚನೆ, ಪಾಪ ನಂಜನದು ಹೊಸ ಸಂಸಾರ, ಸಂಸಾರದ ಹೊರೆಯ ಅನುಭವ ಅವನಿಗಾಗಲೀ, ಗಂಗೆಗಾಗಲೀ ಏನೇನೂ ಇಲ್ಲ. ಇಲ್ಲಿಯ ತನಕ ಮಕ್ಕಳಂತೆ ಹೇಳಿದ ಕೆಲಸ ಮಾಡಿಕೊಂಡು ಇದ್ದುಬಿಟ್ಟರು. ನಂಜನಿಗೆ ದುಡಿಯುವುದು ಬಿಟ್ಟು ಮತ್ತೇನೂ ಗೊತ್ತಿಲ್ಲ. ಗಂಗೆಯಂತೂ ಸೋಮಾರಿ. ಅವಳಿಗೆ ಬಾಯಿಚಪಲ. ರಾಗಿ ಮಾರಿ ವಡೆ, ಚಕ್ಕುಲಿ, ಕೋಡುಬಳೆ ತೆಗೆದುಕೊಂಡು ತಿನ್ನುವವಳು. ಮೊದಲಸಲ ಸಂಸಾರ ಹೂಡಿದ್ದಾರೆ, ಸಿಕ್ಕಾಪಟ್ಟೆ ಖರ್ಚುಮಾಡಿ ಕಷ್ಟಕ್ಕೆ ಸಿಕ್ಕಿಹಾಕಿಕೊಳ್ಳಬಹುದು. ಆದ್ದರಿಂದ ಅವನಿಗೆ ಕೊಂಚ ರಾಗಿಯಾದರೂ ಹೆಚ್ಚಾಗಿ ಇರಲಿ ಎಂದುಕೊಂಡು ಮೆಲ್ಲಗೆ ಎದ್ದ, ತನ್ನ ಪಾಲಿನ ಗುಡ್ಡದ ಬಳಿ ಹೋದ. ಅದರಿಂದ 20 ಹಿಡಿಗೆ ರಾಗಿ ತೆಗೆದು ತಮ್ಮನ ರಾಶಿಗೆ ಸುರಿದು ಗುಡ್ಡೆ ಸರಿಪಡಿಸಿದ. ನಂತರ ಸಮಾಧಾನದಿಂದ ಮಲಗಿ ನಿದ್ದೆ ಮಾಡಿದ.ಬೆಳಕು ಹರಿಯಿತು. ಎಲ್ಲರೂ ಎದ್ದರು. ಅಣ್ಣತಮ್ಮಂದಿರೂ ಗುಡ್ಡೆಗಳನ್ನು ನೋಡಿದರು, ಎರಡೂ ಒಂದೇ ಸಮನಾಗಿಯೇ ಕಾಣಿಸುತ್ತಿತ್ತು. ಇಬ್ಬರಿಗೂ ಆಶ್ಚರ್ಯ. ಒಬ್ಬರ ಮುಖವನ್ನೊಬ್ಬರು ನೋಡಿಕೊಂಡರು, ಯಾರೂ ಮಾತಾಡಲಿಲ್ಲ. ತಮ್ಮ ತಮ್ಮ ಮನೆಗೆ ರಾಗಿಯನ್ನು ಹೇರಿಕೊಂಡು ಹೋದರು. ಚೀಲಗಳ ಲೆಕ್ಕ ಮಾಡಿದಾಗ ಇಬ್ಬರ ಪಾಲೂ ಒಂದೇ ಸಮನಾಗಿತ್ತು. ಇಬ್ಬರಿಗೂ ತುಂಬಾ ಆಶ್ಚರ್ಯವಾಯಿತು. ಮಕ್ಕಳಿಬ್ಬರೂ ತಾವು ಮಾಡಿದ ಕೆಲಸವನ್ನು ಮಲ್ಲಜ್ಜನೊಂದಿಗೆ ಗುಟ್ಟಾಗಿ ಹೇಳಿದರು. ರಾಶಿ ಸರಿಸಮವಾಗಲು ಕಾರಣವೇನೆಂದು ಕೇಳಿದರು. ಮಲ್ಲಜ್ಜನ ಹೃದಯ ತುಂಬಿಬಂತು. ಕಣ್ಣೀರು ಧಾರಾಳವಾಗಿ ಹರಿದಿತ್ತು, ಮಕ್ಕಳಿಬ್ಬರನ್ನೂ ತಬ್ಬಿಕೊಂಡು "ಮಕ್ಕಳೇ ನಿಮ್ಮ ಅಪಾರ ಪ್ರೇಮವೇ ಇದಕ್ಕೆ ಕಾರಣ" ನಿಮ್ಮ ಹೆಂಡಂದಿರು ಜಗಳವಾಡಿಕೊಂಡು ದೂರ ಇರಲು ಯತ್ನಿಸಿದರು. ಆದರೆ ನಿಮ್ಮಿಬ್ಬರ ಶುದ್ಧ ಪ್ರೇಮವೇ ಒಬ್ಬರ ಕಷ್ಟವನ್ನೊಬ್ಬರು ಅರಿತು ನಡೆಯುವಂತೆ ಮಾಡಿತು. ಮುಂದೆಯೂ ಹೀಗೆಯೇ ಅನ್ಯೋನ್ಯವಾಗಿರಿ. "ನಿಮ್ಮಿಬ್ಬರ ಪ್ರೇಮ ನಾಡಿನ ಜನರಿಗೆಲ್ಲಾ ಆದರ್ಶಪ್ರಾಯವಾಗಿರಲಿ, ಶಾಶ್ವತವಾಗಿರಲಿ. ಎಲ್ಲರ ಕಣ್ಣಿಗೂ ಕಾಣುತ್ತಿರಲಿ" ಎಂದು ಹರಸಿದ.

ಇಂದಿಗೂ ಆ ಪ್ರಾಂತದಲ್ಲಿ ಒಂದೇ ಸಮನಾದ ಎರಡು ಬೆಟ್ಟಗಳಿವೆ. ಅವನ್ನು "ಅಣ್ಣ ತಮ್ಮ ಬೆಟ್ಟ" ಎಂದು ಕರೆಯುತ್ತಾರೆ. ಈ ಬೆಟ್ಟಗಳು ಚಾಮರಾಜನಗರದಿಂದ ಬಿಳಿಗಿರಿರಂಗನಬೆಟ್ಟಕ್ಕೆ ಹೋಗುವಾಗ ಕಾಡಿನ ಅಂಚಿನಲ್ಲಿ ಇಂದಿಗೂ ಕಾಣುತ್ತವೆ. ಮಲ್ಲಜ್ಜನ "ನಿಮ್ಮ ಪ್ರೇಮ ಎಲ್ಲರಿಗೂ ಕಾಣುವಂತೆ ಶಾಶ್ವತವಾಗಿರಲಿ" ಎಂಬ ಹರಕೆ ಫಲಿಸಿ ಇಂದಿಗೂ ಜನರ ಕಣ್ಸೆಳೆಯುತ್ತಿವೆ.

ವಿ.ಸೂ: ಆ ಬೆಟ್ಟಗಳು ಗಣಿಗಾರಿಕೆಯ ಪಾಶಕ್ಕೆ ಸಿಕ್ಕಿಲ್ಲದಿದ್ದಲ್ಲಿ ನೀವು ಇಂದಿಗೂ ಕಾಣಬಹುದೇನೋ

# ದೇವರ ದರ್ಶನ

ಕಾವೇರಿ ನದೀ ತೀರದಲ್ಲಿ ರಂಗನಾಥಪುರ ಎಂಬ ಗ್ರಾಮ. ಸುಮಾರು ನಾಲ್ಕುಸಾವಿರ ಜನಸಂಖ್ಯೆಯುಳ್ಳ ಗ್ರಾಮ. ಆ ಊರಿನಲ್ಲಿ ಎಲ್ಲ ಕಸುಬಿನ ಜನರೂ ಇದ್ದರು. ಊರ ಮಧ್ಯೆ ಒಂದು ಸುಂದರವಾದ ಗುಡಿ. ಶ್ರೀ ರಂಗನಾಥ ಮುಖ್ಯ ದೈವ. ಆ ಕಾರಣದಿಂದಲೇ ಆ ಊರಿಗೆ ರಂಗನಾಥಪುರ ಎಂಬ ಹೆಸರು ಬಂದಿರಬಹುದು. ಆ ಊರಲ್ಲಿ ರಾಮಶರ್ಮ ಎಂಬ ಒಬ್ಬ ಸದಾಚಾರ ವಿದ್ವಾಂಸರಿದ್ದರು. ಅವರ ಮನೆತನ ಅನೇಕ ತಲೆಮಾರುಗಳಿಂದ ಊರಿನ ವಿದ್ವಾಂಸರ, ಗುಣವಂತರ, ಸಜ್ಜನ ಮನೆತನ ಎಂಬ ಹೆಸರು ಪಡೆದಿತ್ತು, ರಾಮಶರ್ಮರೂ ಆ ರೀತಿಯ ಎಲ್ಲ ಸದ್ಗುಣಗಳನ್ನೂ ಹೊಂದಿದ್ದರು. ಅವರ ದಿನಚರಿ ಹೀಗಿತ್ತು.

ಬೆಳಿಗ್ಗೆ ಎದ್ದು ನದಿಗೆ ಹೋಗಿ ಬಟ್ಟೆ ಒಗೆದು, ಸ್ನಾನಮಾಡಿ, ನದಿಯ ಬಳಿ ತಾವೇ ಬೆಳೆಸಿದ್ದ ತೋಟದಿಂದ ಮನೆಗೆ ತರಕಾರಿ, ಪೂಜೆಗೆ ಹೂವು, ಪತ್ರೆ, ತುಳಸಿಯನ್ನು ಬಿಡಿಸಿಕೊಂಡು, ಸ್ತೋತ್ರ ಪಾರಾಯಣ ಮಾಡುತ್ತ ಮನೆಗೆ ಬರುವರು. ಮನೆಯಲ್ಲಿ ಮನೆದೇವರಾದ ಲಕ್ಷ್ಮೀನಾರಾಯಣ ಸ್ವಾಮಿಗೆ ಶ್ರದ್ಧಾಭಕ್ತಿಗಳಿಂದ ಪೂಜೆನಡೆಸುವರು. ನಂತರ ವಾಲ್ಮೀಕಿ ರಾಮಾಯಣ, ಭಗವದ್ಗೀತೆ, ಪಾರಾಯಣ ಮಾಡುವರು. ಇಷ್ಟಾದ ಮೇಲೆ ಊರಗುಡಿಗೆ ಹೋಗಿ ಪೂಜೆಯಲ್ಲಿ ಪಾಲ್ಗೊಳ್ಳುವರು. ದೇವಸ್ಥಾನದಲ್ಲಿ ವೇದಪಾರಾಯಣ ಅವರ ಮನೆಯವರ ಸೇವೆ. ಪೂಜಾಕಾಲದಲ್ಲಿ ಶ್ರದ್ಧೆಯಿಂದ ಮಾಡುವರು. ರಾಮಶರ್ಮರ ಬಾಯಿಂದ ವೇದಪಾರಾಯಣ ಕೇಳುವುದಕ್ಕೆ ಪುಣ್ಯ ಮಾಡಿರಬೇಕು. ಸ್ವರಬದ್ಧವಾಗಿ, ಸ್ಪಷ್ಟ

ಉಚ್ಚಾರಣೆಯಿಂದ ಉಚ್ಚಕಂಠದಲ್ಲಿ ಭಕ್ತಿಪೂರ್ವಕವಾಗಿ ವೇದಘೋಷ ಆರಂಭಿಸಿದರೆ ಎಲ್ಲರ ಗಮನವೂ ಅತ್ತಲೇ ಇರುತ್ತಿತ್ತು. ಗುಡಿಯಲ್ಲಿ ಪೂಜೆ ಮುಗಿದಮೇಲೆ ತೀರ್ಥ ಸ್ವೀಕರಿಸಿ ಮನೆಗೆ ಹಿಂತಿರುಗುವರು. ಮಧ್ಯಾಹ್ನಿಕ ಮುಗಿದಮೇಲೆ ಮನೆ ಬಾಗಿಲಿಗೆ ಬಂದು ರಸ್ತೆಯಲ್ಲಿ ಎಡಬಲ ಬದಿಗಳಲ್ಲಿ ಯಾರಾದರೂ ಅಭ್ಯಾಗತರು ಪರಸ್ಥಳದವರು ಊಟಕ್ಕೆ ಕಾಣುತ್ತಾರೋ ನೋಡುವರು. ಅಂತಹವರಾರಾದರೂ ಕಂಡರೆ ವಿನಯದಿಂದ ಅವರನ್ನು ಊಟಕ್ಕೆ ಕರೆಯುವರು. ಯಾರಾದರೂ ಸಿಕ್ಕಿದರೆ ಶರ್ಮರಿಗೆ ಬಹಳ ಆನಂದ. ದೇವರು ಆ ರೂಪದಲ್ಲಿ ತಮ್ಮ ಮನೆಯಲ್ಲಿ ಊಟ ಮಾಡಿದರು ಎಂಬಷ್ಟು ಸಂತೋಷ. ಯಾರೂ ಕಾಣದಿದ್ದರೆ ಮುದುಡಿದ ಮನಸ್ಸಿನಿಂದ ಊಟ ಮುಗಿಸುವರು. ಅವರ ಮಡದಿ ನರಸಮ್ಮನವರೂ ಪತಿಯ ಎಲ್ಲ ಕೆಲಸಗಳಲ್ಲೂ,ವ್ರತ ನಿಯಮಗಳಲ್ಲೂ ತುಂಬ ಶ್ರದ್ಧೆ, ವಿನಯ ಸಂತಸದಿಂದ ನೆರವಾಗುವರು. ಇದು ಇಬ್ಬರಿಗೂ ನೆಮ್ಮದಿಯ ಸಂಗತಿ ಆಗಿತ್ತು. ಊಟವಾದ ಮೇಲೆ ಒಂದರ್ಧ ಘಂಟೆ ಚಾಪೆಯ ಮೇಲೆ ನಿದ್ದೆಮಾಡಿ ಎದ್ದು ಮುಖತೊಳೆದು ಧರ್ಮಗ್ರಂಥಗಳ ಪ್ರವಚನಕ್ಕೆ ಕೂರುವರು. ಆ ವೇಳೆಗೆ ಊರಿನ ಹಲವರು ಇವರ ಪ್ರವಚನ ಕೇಳಲು ಬಂದು ಕುಳಿತಿರುವರು. ರಾಮಾಯಣ, ಭಾರತ, ಭಾಗವತ, ಭಗವದ್ಗೀತೆ ಮುಂತಾದ ಸದ್‌ಗ್ರಂಥಗಳನ್ನು ಓದಿ ಸರಳ ಭಾಷೆಯಲ್ಲಿ ವಿವರಿಸುವರು. ಶರ್ಮರ ಕಾಲಕ್ಷೇಪ ಕೇಳುತ್ತಿದ್ದರೆ ಪುರಾಣದ ಘಟನೆಗಳ ಚಿತ್ರಣ ಕಣ್ಣಮುಂದೆ ನಡೆಯುತ್ತಿರುವಂತೆ ಭಾಸವಾಗುತ್ತಿತ್ತು. ಪ್ರವಚನದಲ್ಲಿ ಆ ಮಟ್ಟಿಗೆ ಎತ್ತಿದ ಕೈ ಆದುದರಿಂದ ಒಮ್ಮೆ ಕೇಳಿದವರು ತಪ್ಪದೇ ಮತ್ತೆ ಮತ್ತೆ ಬಂದು ಕೇಳಿ ಕೃತಾರ್ಥರಾಗುತ್ತಿದ್ದರು. ಪುರಾಣ ಶ್ರವಣ ಮುಗಿದಮೇಲೆ ಸಂಜೆಗೆ ತೋಟಕ್ಕೆ ಹೋಗಿ ಕೊಂಚಹೊತ್ತು ಕೆಲಸಮಾಡಿ ಕೈಕಾಲು ತೊಳೆದುಕೊಂಡು ಸಂಧ್ಯಾವಂದನೆ ಮುಗಿಸಿ ಮತ್ತೆ ಗುಡಿಗೆ ಹೋಗಿ ರಾತ್ರಿ ಪೂಜೆಯಲ್ಲಿ ಪಾಲ್ಗೊಂಡು ಮನೆಗೆ ಬರುವರು. ಊಟ ಆದಮೇಲೆ ವಿಶ್ರಾಂತಿ. ಇದು ರಾಮಶರ್ಮರ ಸಾಧಾರಣ ದಿನಚರಿ. ಈ ದಿನಚರಿಯಂತೆ ರಾಮಶರ್ಮರ ಜೀವನ ಅವರ 25ನೇ ವರ್ಷದಿಂದ ಅವರ 80ನೇ ವರ್ಷದವರೆಗೆ ಅವಿಚ್ಛಿನ್ನವಾಗಿ ನಡೆದುಬಂತು. ಅಪರೂಪಕ್ಕೆ ಖಾಯಿಲೆ ಬಿದ್ದಾಗ ಅನಿವಾರ್ಯವಾಗಿ ಪರಸ್ಥಳಕ್ಕೆ ಹೋದಾಗ ಮಾತ್ರ ಈ ದಿನಚರಿಗೆ ಭಂಗಬರುತ್ತಿತ್ತು. ಊರಿನ ಜನತೆಗೂ ಇದು ರೂಢಿ ಆಗಿಬಿಟ್ಟಿತ್ತು. ದೇವಸ್ಥಾನಕ್ಕೆ ಹೋಗುವುದನ್ನು ತಪ್ಪಿಸಿದರೂ ರಾಮಶರ್ಮರ ಪುರಾಣಶ್ರವಣಕ್ಕೆ ತಪ್ಪಿಸಿಕೊಳ್ಳುತ್ತಿರಲಿಲ್ಲ. ರಾಮಶರ್ಮರ ಬಗೆಗೆ ಆಸುಪಾಸಿನ ಜನಕ್ಕೆಲ್ಲ ಗೌರವ ಭಯ, ಭಕ್ತಿ ಏರ್ಪಟ್ಟಿತ್ತು.

ಅವರಿಗೆ 80ನೇ ವರ್ಷ ತುಂಬಿದಾಗ ಸುತ್ತಮುತ್ತಣ ಗ್ರಾಮಗಳ ಜನರೆಲ್ಲ ಸೇರಿ ಅವರ ಸಹಸ್ರಚಂದ್ರದರ್ಶನದ ಸಮಾರಂಭವನ್ನು ತುಂಬಾಅದ್ದೂರಿಯಾಗಿ ನಡೆಸಿಬಿಟ್ಟರು. ಶರ್ಮರು ಸಂಕೋಚದಿಂದ ಎಷ್ಟು ಬೇಡವೆಂದರೂ ಬಿಡದೆ ಆ ಸಮಾರಂಭ ಒಂದು

ಜಾತ್ರೆಯಂತೆ ನಡೆಯಿತು. ಎಲ್ಲರಿಗೂ ಸಮಾಧಾನ, ಸಂಭ್ರಮ. ಅಷ್ಟು ವಯಸ್ಸಾದರೂ ಶರ್ಮರ ದಿನಚರಿಯಲ್ಲಿ ಕೊಂಚವೂ ಬದಲಾವಣೆ ಆಗಲಿಲ್ಲ.

ಆದರೆ ಅವರ ಮನಸ್ಸಿಗೆ ಒಂದು ಚಿಂತೆ ಹತ್ತಿತ್ತು. ಅದೇಂದರೆ ಅರ್ಧ ಶತಮಾನಕ್ಕಿಂತಲೂ ಹೆಚ್ಚುಕಾಲ ನಾನು ಶ್ರದ್ಧಾಭಕ್ತಿಗಳಿಂದ ಶುದ್ಧ ಮನಸ್ಸಿನಿಂದ ದೇವರಪೂಜೆ ಪಾರಾಯಣ ಮಾಡಿದೆ. ಕಾಯಾವಾಚಾ ಮನಸಾ ದೇವರ ಧ್ಯಾನ ಪಾರಾಯಣ ಪೂಜೆ ಮಾಡಿದೆ. ಆದರೂ ನನಗೆ ದೇವರ ಪ್ರತ್ಯಕ್ಷದರ್ಶನ ಆಗಲಿಲ್ಲವಲ್ಲಾ? ಹೆಚ್ಚು ಕಡಿಮೆ ಹಿಂದಿನ ಯುಗಗಳಲ್ಲಿ ಋಷಿಮುನಿಗಳು ಮಾಡಿದ ತಪಸ್ಸಿಗೆ ಸಮಾನವಾಗಿ 50 ವರ್ಷಗಳಷ್ಟು ದೀರ್ಘಕಾಲ ತಪೋಮಯ ಸಾತ್ವಿಕ ಜೀವನ ನಡೆಸಿದರೂ ಈ ಜನ್ಮದಲ್ಲಿ ದೇವರ ಪ್ರತ್ಯಕ್ಷ ದರ್ಶನ ಆಗಲಿಲ್ಲವಲ್ಲ. ಇನ್ನೂ ಪ್ರಾಪಂಚಿಕ ಗೊಂದಲಗಳಲ್ಲಿ ಸಿಲುಕಿ ತೊಳಲಾಡುತ್ತ ಎಂದಾದರೊಮ್ಮೆ ಭಗವಂತನನ್ನು ನೆನೆಯುವ ಸಾಧಾರಣ ಜನರಿಗೆ ಭಗವಂತ ಕಂಡಾನೆಯೇ? ದೇವರ ದರ್ಶನಕ್ಕೆ ನಾನಿನ್ನೇನು ಮಾಡಬೇಕು? ಈ ವೃದ್ಧಾಪ್ಯದಲ್ಲಿ ಇನ್ನೇನುತಾನೆ ಮಾಡಲು ಸಾಧ್ಯ? ಎಂಬ ಚಿಂತೆ ಹೊಕ್ಕಿತು ಅವರ ತಲೆಗೆ. ಊಟ ತಿಂಡಿಗಳಲ್ಲಿ ಆಸಕ್ತಿ ಕಡಿಮೆಯಾಯಿತು. ಶರೀರ ದುರ್ಬಲವಾಗತೊಡಗಿತು. ಆದರೂ ದೇವತಾಕಾರ್ಯ ಪುರಾಣಶ್ರವಣಗಳಲ್ಲಿ ಅಶ್ರದ್ಧೆ, ಲೋಪಕ್ಕೆ ಎಡೆಕೊಡದೆ ನಡೆಸಿಕೊಂಡಿದ್ದರು ರಾಮಶರ್ಮರು. ಒಂದು ದಿನ ಮಧ್ಯಾಹ್ನ ಮಲಗಿದ್ದಾಗ ಶರ್ಮರಿಗೆ ಒಂದು ಕನಸು ಬಿತ್ತು. ಕನಸಿನಲ್ಲಿ ಶಂಖಚಕ್ರ, ಗಧಾಪದ್ಮಧಾರಿಯಾಗಿ ಕಿರೀಟ ಕುಂಡಲಧಾರಿಯಾಗಿ ದಿವ್ಯಾಲಂಕಾರಭೂಷಿತನಾದ ಶ್ರೀಮನ್ನಾರಾಯಣನ ದರ್ಶನ ಆಯಿತು. ಜೊತೆಗೆ 'ಮುಂದಿನ ಗುರುವಾರ ನಿನ್ನ ಬಯಕೆಯನ್ನು ನೆರವೇರಿಸಲು ನಿನ್ನ ಮನೆಗೆ ಬರುತ್ತೇನೆ' ಎಂದುಹೇಳಿ ಶ್ರೀಮನ್ನಾನಾರಾಯಣ ಅದೃಶ್ಯನಾದಂತೆ ಕನಸುಕಂಡರು. ಎಚ್ಚರವಾಯಿತು, ನೋಡಿದರೆ ಏನೂ ಇಲ್ಲ. ಶರ್ಮರು ಹೆಂಡತಿಮಕ್ಕಳನ್ನು ಕರೆದು ಮುಂದಿನ ಗುರುವಾರ ಶ್ರೀಮನ್ನಾರಾಯಣ ನಮ್ಮ ಮನೆಗೆ ಬರುತ್ತಾರೆ ಎಂದು ಹೇಳಿ ಸಂತೋಷದಿಂದ ಕುಣಿದಾಡಿದರು. ಮೊದಮೊದಲು ಶರ್ಮರಿಗೆ ದೇವರ ಕಾಣುವ ಹುಚ್ಚುಹಿಡಿದಿದೆ. ಅದಕ್ಕಾಗಿ ಹೀಗಾಡುತ್ತಿದ್ದಾರೆ ಎಂದುಕೊಂಡರು ಮನೆಯವರು. ಆದರೆ ಶರ್ಮರು ಸಮಾಧಾನದಿಂದ ನಡೆದುದನ್ನೆಲ್ಲ ವಿವರಿಸಿದ ಮೇಲೆ ಎಲ್ಲರೂ ಹರ್ಷಗೊಂಡರು.

ಮುಂದಿನ ಗುರುವಾರ ರಾಮಶರ್ಮರ ಮನೆಗೆ ದೇವರು ಬರುತ್ತಾರೆಂಬ ಸುದ್ದಿ ಊರಿನಲ್ಲೆಲ್ಲ ಏಕೆ, ಸುತ್ತಮುತ್ತಣ ಗ್ರಾಮದಲ್ಲೆಲ್ಲ ಹರಡಿತು. ಆ ದಿನ ಶನಿವಾರ ವಾಗಿತ್ತು. ಇನ್ನು ನಾಲ್ಕು ದಿನ ಕಳೆದರೆ ಗುರುವಾರ ಅಂದರೆ ದೇವರು ಬರುವ ದಿನ. ದೇವರು ಬರುವಾಗ ಊರೆಲ್ಲ ಸಿಂಗಾರವಾಗಿರಬೇಕು, ಶುಚಿಯಾಗಿರಬೇಕು ಎಂಬ ಆಸೆ. ಎಲ್ಲ ಬೀದಿಗಳಿಗೂ ಮಣ್ಣು ಹರಡಲಾಯಿತು. ಚರಂಡಿಗಳನ್ನೆಲ್ಲಾ ಸ್ವಚ್ಛಪಡಿಸ–

ಲಾಯಿತು. ಎಲ್ಲಾ ಬೀದಿಗಳಲ್ಲಿ ಹಸಿರುವಾಣಿ ಚಪ್ಪರ, ಬಾಳೆಕಂದುಗಳು ಮಾವಿನ ಸೊಪ್ಪಿನ ತೋರಣ ಮುಂತಾಗಿ ಅಲಂಕಾರಗೊಂಡವು. ದೇವರಿಗೆ ಅರ್ಪಿಸಲು ಎಲ್ಲರೂ ಹಣ್ಣುಕಾಯಿ ಹೂವುಗಳನ್ನು ಸಿದ್ಧಪಡಿಸಿಕೊಂಡರು. ರಸ್ತೆಯೆಲ್ಲ ಸುಂದರ ರಂಗವಲ್ಲಿ ಗಳಿಂದ ಅಲಂಕೃತವಾದವು. ಶರ್ಮರ ಮನೆಮುಂದೆಯಂತೂ ಬುಧವಾರ ರಾತ್ರಿ ಬಣ್ಣ ಬಣ್ಣದ ಹೂಗಳ ರಂಗವಲ್ಲಿ ಹಾಕಲಾಯಿತು. ದೇವರಿಗೆ ಅರ್ಪಿಸಲು ಬಗೆಬಗೆಯ ಮೃಷ್ಟಾನ್ನಗಳು, ತಿಂಡಿಗಳು ತಯಾರಾದವು. ಯಾರೂ ಬುಧವಾರ ರಾತ್ರಿ ನಿದ್ದೆಮಾಡಲಿಲ್ಲ. ದೇವರ ಸ್ವಾಗತದ ಸೇವೆಯ ತಯಾರಿಯೇ ಕಾರ್ಯಕ್ರಮ. ಶರ್ಮರ ಬಲಪಕ್ಕದ ಮನೆಯವರು ತಮ್ಮ ಮನೆಕಡೆಯಿಂದಲೇ ದೇವರು ಬರುತ್ತಾರೆಂದು ಭಾವಿಸಿ ತಮ್ಮ ಮನೆಯ ಮುಂದಿನ ಅಲಂಕಾರ ದೇವರಿಗರ್ಪಿಸುವ ಹಣ್ಣು ಕಾಯಿಗಳಲ್ಲಿ ಉಳಿದವರೆಲ್ಲರಿಗಿಂತ ಮುಂದಾದರು. ಎಡಪಕ್ಕದ ಮನೆಯವರು ತಮ್ಮ ಮನೆಯ ಕಡೆಯಿಂದಲೇ ದೇವರು ಬರುತ್ತಾನೆಂದು ತರ್ಕಿಸಿ ತಾವೂ ಯಾರಿಗಿಂತ ಹಿಂದಾಗ ಬಾರದೆಂದು ಅತ್ಯಂತ ಶ್ರದ್ಧೆ ಭಕ್ತಿಗಳಿಂದ ಸಿದ್ಧತೆ ಮಾಡಿದರು.ಶಿ ' ವ ' ು ೯ ರಿ ' ಮನೆಯಲ್ಲಿಯಂತೂ ದೇವರು ಬಂದಾಗ ಅವರಿಗೆ ಅರ್ಪಿಸಲು, ಊಟ ಮಾಡಿಸಲು, ದೇವರು ಬಂದು ಹೋದಮೇಲೆ ಇಡೀ ಊರಿಗೆ ದೇವರ ದರ್ಶನಕ್ಕೆ ಬಂದು ಹೋಗುವವರಿಗೆಲ್ಲಾ ಭೋಜನ ಮಾಡಿಸಲು ಬೇಕಾಗುವಷ್ಟು ಅಡಿಗೆ ತಯಾರಾಗುತ್ತಿತ್ತು. ಶರ್ಮರು ಬೆಳಗಿನಜಾವವೇ ನಾಲ್ಕು ಘಂಟೆಗೇ ಎದ್ದು ಸ್ನಾನಾದಿಗಳನ್ನು ಮುಗಿಸಿ ಸೂರ್ಯೋದಯಕ್ಕೆ ಭಗವಂತನನ್ನು ಎದಿರುಗೊಳ್ಳಲು ಸಿದ್ಧವಾಗಿ ಮನೆ ಜಗಲಿಯ ಮೇಲೆ ಕೂತರು. ಒಟ್ಟಿನಲ್ಲಿ ಆ ದಿನ ಆ ಊರಿನ ಚರಿತ್ರೆಯಲ್ಲೇ ಪವಿತ್ರದಿನ. ಇಡೀ ಊರು ದೇವರನ್ನು ಕಾಣಲು ಕಾತುರವಾಗಿ ಕಾಯಿತು. ಬೆಳಗಾಯಿತು, ಬಿಸಿಲು ಬಂತು, ಸುಮಾರು 9 ಘಂಟೆ ಆಯಿತು. ಇನ್ನೂ ದೇವರ ಸುಳಿವೇ ಇಲ್ಲ. ಒಬ್ಬೊಬ್ಬರಾಗಿ ಜನ ಬಂದು ಶರ್ಮರನ್ನು, ದೇವರು ಎಷ್ಟು ಹೊತ್ತಿಗೆ ಬರುತ್ತೇವೆಂದು ಹೇಳಿದರು? ಎಂದು ಕೇಳಲಾರಂಭಿಸಿದರು. ಶರ್ಮರು ಪೆಚ್ಚಾಗಿ ಇಲ್ಲ ದೇವರು ಹೇಳಲಿಲ್ಲ. ನನಗೂ ಅದನ್ನು ಕೇಳಲು ಮರೆತುಹೋಯಿತು. ದೇವರು ಗುರುವಾರ ಎಂದು ಮಾತ್ರ ಹೇಳಿದ ಎಂದುತ್ತರಿಸಿದರು.

ಘಂಟೆ 11 ಆದರೂ ದೇವರ ಸುಳಿವಿರಲಿಲ್ಲ. ಆಗ ಎಲ್ಲರಿಗೂ ಅನುಮಾನ ಕಾಡತೊಡಗಿತು. ಆ ವೇಳೆಗೆ ಶರ್ಮರ ಬಲಗಡೆಯಿಂದ ಒಂದು ಕುಂಟುಕತ್ತೆ ವಿಚಿತ್ರವಾಗಿ ಅರಚುತ್ತಾ ಬಂತು. ಭಗವಂತನ ಬರುವಿಕೆಗಾಗಿ ಅಲಂಕರಿಸಿದ್ದ ರಸ್ತೆಯ ರಂಗವಲ್ಲಿ ಹೂವಿನ ಅಲಂಕಾರಗಳನ್ನೆಲ್ಲ ಹಾಳುಮಾಡಲು ಈ ಅನಿಷ್ಟಪ್ರಾಣಿ ಬಂತಲ್ಲ ಎಂದು ಸಿಟ್ಟಾದರು. ಶರ್ಮರಿಗಂತೂ ವಿಪರೀತ ಸಿಟ್ಟುಬಂದು ಬಡಿದಟ್ಟಿರೋ ಅದನ್ನು ಎಂದು ಅಪ್ಪಣೆ ಇತ್ತರು. ಅವರು ಹಾಗಂದದ್ದೇ ತಡ, ಯುವಕರು ಬಡಿಗೆಗಳನ್ನೆತ್ತಿಕೊಂಡು

ಬಂದು ಆ ಕತ್ತೆಗೆ ಹೊಡೆಯತೊಡಗಿದರು. ಕತ್ತೆ ಕುಂಟುತ್ತಾ ಭಯದಿಂದ ಅರಚುತ್ತಾ ಓಡಿಹೋಗಿಬಿಟ್ಟಿತು. ಆ ಕತ್ತೆ ಕೆದರಿದ್ದ ರಂಗೋಲಿ, ಅಲಂಕಾರಗಳನ್ನು ಆದಷ್ಟು ಸರಿಮಾಡಿದರು. 12 ಘಂಟೆಯಾಯಿತು. ದೇವರ ಸುಳಿವಿಲ್ಲ. ಜನರು ಒಬ್ಬೊಬ್ಬರಾಗಿ ಮನೆಯೊಳಗೆ ಹೋಗಿ ಮಕ್ಕಳು ಮುದುಕರು ಬಾಯಿಲೆಯವರಿಗೆ ಊಟಮಾಡಿಸಿ ಜಗಲಿಗಳಿಗೆ ಬಂದು ಕಾದರು. ಎಲ್ಲರಿಗೂ ಶರ್ಮರ ಕನಸು ನಿಜವೋ ಸುಳ್ಳೋ ಎಂಬ ಅನುಮಾನಮೂಡಿತು. ಶರ್ಮರಂತೂ ತುಂಬ ಚಿಂತಿತರಾದರು. ಆ ವೇಳೆಗೆ ಅವರ ಮನೆಯ ಎಡಗಡೆಯಿಂದ ಒಬ್ಬ ಮುದುಕಿ ಕೋಲೂರಿಕೊಂಡು ನಡೆಯ ಲಾರದೆ ನಡೆದುಬಂದಳು. ಕೊಳಕು ಹರಿದಸೀರೆಯ ಅರ್ಧ ಮೈ ಕಾಣಿಸುವಂತಿದ್ದ, ಕೆದರಿದ ಕೂದಲಿನ ಆ ಮುದುಕಿ ನಡುಗುವ ಧ್ವನಿಯಲ್ಲಿ ' ಅಪ್ಪಾ ಮೂರು ದಿನದಿಂದ ಏನೂ ತಿಂದಿಲ್ಲ, ಹಸಿವು ಕಣಪ್ಪ, ಏನಾರ ತಿನ್ನಲು ಕೊಡಿ ತಾಯಿ' ಎಂದು ಬೇಡುತ್ತ ಶರ್ಮರ ಮನೆಯ ಮುಂದಕ್ಕೆ ಬಂದು ನಿಂತಳು. ಶರ್ಮರಿಗೆ ಮತ್ತೆ ಸಿಟ್ಟು ನೆತ್ತಿಗೇರಿತು. ಊರೆಲ್ಲ ದೇವರಿಗೆ ಬೆಳಗ್ಗೆಯಿಂದ ಕಾಯುತ್ತಿದ್ದೇವೆ. ಈ ಅನಿಷ್ಟ ಭಿಕ್ಷುಕಿ ಈಗಲೇ ಬರಬೇಕೇ? ಎನ್ನುತ್ತ 'ಇವಳನ್ನು ಊರಾಚೆಗೆ ಎಳೆದುಕೊಂಡು ಹೋಗಿ ಬಿಟ್ಟುಬನ್ನಿರೋ, ದೇವರೆಲ್ಲಾದರೂ ಇವಳನ್ನು ಕಂಡು ಅಸಹ್ಯಪಟ್ಟುಕೊಂಡು ಹೊರಟುಹೋದಾನು' ಎಂದು ಆಳುಗಳಿಗೆ ಹೇಳಿದರು. ಆಳುಗಳು ಅಷ್ಟು ಹೇಳಿದ್ದೇ ತಡ ಅವಳನ್ನು ಅಟ್ಟಿಸಿಕೊಂಡು ಹೊರಟರು. ಅವಳು ತತ್ತರಿಸುತ್ತಾ ನಡುಗುತ್ತಾ ಊರಾಚೆಗೆ ಹೊರಟುಹೋದಳು. ಘಂಟೆ 2 ಆಯಿತು. ಎಲ್ಲರಿಗೂ ಹಸಿವು, ಬೇಸರ. ಒಬ್ಬೊಬ್ಬರು 'ಶರ್ಮರಿಗೂ ವಯಸ್ಸಾಗಿದೆ. ಅರುಳುಮರುಳು. ಏನೋ ಕನಸಾಯಿತೆಂದು ಅವರು ಅದನ್ನು ನಂಬಿದರು. ನಮಗೆಲ್ಲ ಹೇಳಿದರು. ನಾವೂ ನಂಬಿದೆವು. ಹಗಲುಗನಸೆಲ್ಲ ನಿಜವಾಗುವುದುಂಟೇ ಎಂದು ಆಲೋಚಿಸತೊಡಗಿದರು. ಕೆಲವರು ಮನೆಯ ಒಳಗಡೆ ಹೋಗಿ ಊಟಮುಗಿಸಿದರು. ಶರ್ಮರು ಮಾತ್ರ ಬಾಗಿಲಲ್ಲೇ ಕಾದಿದ್ದರು. ಆ ವೇಳೆಗೆ ಒಬ್ಬ ವಿದ್ಯಾರ್ಥಿ ಸುಮಾರು 12 ವರ್ಷದವನು ಮಡಿ ವಸ್ತ್ರ ಉಟ್ಟಿದ್ದಾನೆ ವಿಭೂತಿ ಧರಿಸಿದ್ದಾನೆ, ಒಳ್ಳೆ ತೇಜಸ್ವಿಯಾಗಿ ಕಾಣುತ್ತಾನೆ. ಶರ್ಮರ ಮನೆಯ ಮುಂದೆ ನಿಂತು, ಕೈಯಲ್ಲಿ ಭಿಕ್ಷಾಪಾತ್ರೆ ಹಿಡಿದು ಭವತಿ ಭಿಕ್ಷಾಂದೇಹಿ ಎಂದು ಭಿಕ್ಷೆ ಕೇಳಿದ. ಶರ್ಮರಿಗೆ ಅವನನ್ನು ಕಂಡು ಪ್ರೀತಿ, ಕರುಣೆ ವಾತ್ಸಲ್ಯ ಉಕ್ಕಿಬಂತು. ಅವನನ್ನು ಹತ್ತಿರ ಕರೆದು, 'ಅಪ್ಪಾ ಈ ದಿನ ನಮ್ಮ ಮನೆಗೆ ದೇವರು ಬರುತ್ತಿದ್ದಾರೆ. ಒಳಗೆ ಎಲ್ಲ ಅಡುಗೆ ಸಿದ್ಧವಾಗಿದೆ. ಇನ್ನೇನು ದೇವರು ಬರುವ ಸಮಯ. ಅವನು ಬಂದು ಹೋದಮೇಲೆ ನಿನಗೆ ತೃಪ್ತಿಯಾಗುವಂತೆ ಊಟ ಬಡಿಸುತ್ತೇನೆ. ಸ್ವಲ್ಪ ಹೊತ್ತಾದ ಮೇಲೆ ಬಾರಪ್ಪ' ಎಂದು ಒಳ್ಳೆಯ ಮಾತಿನಲ್ಲಿ ಹೇಳಿದರು. ಹುಡುಗ ಸರಿಸ್ವಾಮಿ ಎಂದು ಹೇಳಿ ಹೊರಟುಹೋದನು.

ಘಂಟೆ 3 ಆಯಿತು. ಕಾದಿದ್ದ ಶರ್ಮರಿಗೆ ಹಾಗೇ ಕೊಂಚ ಜೋಂಪು ಬಂತು. ಏನಾಶ್ಚರ್ಯ, ಮತ್ತೆ ಕನಸು. ಕನಸಿನಲ್ಲಿ ಕಳೆದ ಶುಕ್ರವಾರ ಕಂಡ ದೇವರು, ಅದೇ ಶಂಖಚಕ್ರ, ಗದಾಧಾರಿ, ಕೈಗಳಲ್ಲಿ ಪದ್ಮ, ಕಿರೀಟಕುಂಡಲ, ಹೂವಿನಹಾರ, ಕಚ್ಚೆಪಂಚೆ, ಹಸನ್ಮುಖಿ ಶರ್ಮರ ಎದುರಿಗೆ ಬಂದು ನಿಂತಿದ್ದಾನೆ.ಶರ್ಮರು ಒಡನೆ ಕೈಮುಗಿದು "ಏನಪ್ಪಾ,ಕನಸಿನಲ್ಲಿ ಮಾತ್ರ ಕಾಣುತ್ತೀ, ಇಡೀ ಊರೇ ನಿನ್ನ ಬರುವಿಕೆಗಾಗಿ ಕಾದಿದೆ. ಪ್ರತ್ಯಕ್ಷ ಬರದೆ ಸತಾಯಿಸುತ್ತಿರುವೆಯಲ್ಲ. ನೀನು ಪ್ರತ್ಯಕ್ಷ ಬರದಿದ್ದರೆ, ನನ್ನ ಸ್ವರೂಪವೇ ನಾಶವಾಗುತ್ತದೆ. ಈ ಪ್ರಾಂತ್ಯದ ಜನ ನನ್ನ ಮಾತನ್ನು ನಂಬುವರೇ? ನೀನು ಬಾರದಿದ್ದರೆ ನಾನಾದರೂ ಹೇಗೆ ಬದುಕಲಿ? ನನ್ನನ್ನು ಇನ್ನೆಷ್ಟು ಪರೀಕ್ಷೆಮಾಡುವೆ? " ಎಂದರು. ಅದಕ್ಕೆ ದೇವರು, "ಬೆಳಗಿನಿಂದ ಮೂರುಬಾರಿ ನಿನ್ನ ಮನೆಗೆ ಬಂದೆನಲ್ಲ, ಇನ್ನೆಷ್ಟು ಸಲ ಬರಲಿ? ಒಮ್ಮೆ ಹೊಡೆದೋಡಿಸಿದೆ, ಇನ್ನೊಮ್ಮೆ ಹೆದರಿಸಿ ಕಳುಹಿಸಿದೆ, ಕಡೆಸಲ ಒಳ್ಳೆಯ ಮಾತಿನಿಂದ ಉಪಾಯವಾಗಿ ಕಳುಹಿಸಿಬಿಟ್ಟೆ, ಇನ್ನೆಷ್ಟುಸಲ ಬರಲಿ?" ಎಂದು ಹೇಳಿ ಕಣ್ಮರೆ ಆಗಿಬಿಟ್ಟ. ಶರ್ಮರಿಗೆ ತಕ್ಷಣ ಎಚ್ಚರವಾಗಿಬಿಟ್ಟಿತು. ಮನಸ್ಸಿಗೆ ಹೊಳೆಯಿತು. ಆ ಕುಂಟ ಪ್ರಾಣಿ, ಕತ್ತೆಯ ರೂಪದಲ್ಲಿ, ಆ ಹಸಿದ ಮುದುಕಿಯ ರೂಪಿನಲ್ಲಿ ಆ ವಿದ್ಯಾರ್ಥಿ ರೂಪಿನಲ್ಲಿ ಹೀಗೆ ದೇವರು ಮೂರುಸಲ ಬಂದಿದ್ದು ನಿಜ. ನನಗೆ ಅವನನ್ನು ಗುರುತಿಸುವ ಪರಿಜ್ಞಾನ ವಿಶಾಲದೃಷ್ಟಿ ಬರಲಿಲ್ಲ ಅಷ್ಟೇ ಎಂದು ಮರುಗಿದರು. ಆಳುಗಳನ್ನು ಕರೆದು ಓಡಿರೋ ಆ ಕತ್ತೆ, ಆ ಮುದುಕಿ, ಆ ವಿದ್ಯಾರ್ಥಿಯನ್ನು ಕರೆತನ್ನಿ. ಅವು ಮೂರೂ ದೇವರ ಅವತಾರಗಳು. ನನಗೆ ತಿಳಿಯಲಿಲ್ಲ ಅಷ್ಟೆ. ಬೇಗ ಹೋಗಿ ಹುಡುಕಿ ಕರೆತನ್ನಿ ಎಂದು ನಾಲ್ಕು ದಿಕ್ಕುಗಳಿಗೂ ಕಳುಹಿಸಿದರು. ಊರಿನ ಇತರ ಜನರೂ ಹುಡುಕತೊಡಗಿದರು.

ಆದರೇನು, ಆ ದೇವರ ಅವತಾರಗಳು ಯಾವಾಗಲೋ ಮಾಯವಾಗಿದ್ದವು. ಎಲ್ಲರೂ ನಿರಾಶರಾಗಿ ಹಿಂತಿರುಗಿದರು. ಶರ್ಮರ ಮನೆಮುಂದೆ ಊರಜನರೆಲ್ಲ ಕೂಡಿದರು. ಶರ್ಮರು 'ಮಹಾಜನರೇ, ಕಲಿಯುಗದಲ್ಲಿ ದೇವರು ದೇವಸ್ಥಾನದ ವಿಗ್ರಹದ ರೂಪಿನಲ್ಲಿರುವುದಿಲ್ಲ. ದೀನದಲಿತರ, ರೋಗಿಗಳ, ಪ್ರಾಣಿಗಳ, ವಿದ್ಯಾರ್ಥಿಗಳ ರೂಪದಲ್ಲಿರುತ್ತಾರೆ. ಇದನ್ನು 50 ವರ್ಷಗಳ ಸದಾಚರಣೆಯ ಕೊನೆಯಲ್ಲಿ ನನಗೆ ತಿಳಿಸಿಕೊಟ್ಟಿದ್ದಾನೆ. ಇಂದಿನ ಈ ಘಟನೆ ನನ್ನ ಕಣ್ಣು ತೆರೆಸಿದೆ. ದಯಮಾಡಿ ಎಲ್ಲರೂ ಇನ್ನು ಮುಂದೆ ನಮ್ಮ ನಡುವೆ ಇರುವ ಬಡವರ ಸೇವೆ, ರೋಗಿಗಳ ಸೇವೆ, ಪ್ರಾಣಿಗಳ ಸೇವೆ ಮಾಡುತ್ತ, ಜೀವಂತ ದೇವರ ಸೇವೆ ಅರ್ಚನೆ ಮಾಡೋಣ ಎಂದು ಹೇಳಿದರು.

ತಮ್ಮ ಆಸ್ತಿಯನ್ನೆಲ್ಲ ಉಪಯೋಗಿಸಿ ಆ ಊರಿನಲ್ಲಿ ಒಂದು ವೃದ್ಧಾಶ್ರಮ, ಒಂದು ವಿದ್ಯಾರ್ಥಿನಿಲಯ, ಒಂದು ಆಸ್ಪತ್ರೆ, ಒಂದು ಪಶುಪ್ರಾಣಿಗಳ ಆಸ್ಪತ್ರೆ, ಆರಂಭಿಸಿದರು. ತಮ್ಮ ಉಳಿದ ಆಯುಷ್ಯವನ್ನು ಆ ಕೆಲಸಗಳಲ್ಲಿ ತೊಡಗಿಸಿಕೊಂಡು ಬಾಳಿದರು.

# ದೈವಭಕ್ತಿ ರಾಜನಿಷ್ಠೆ

ಸುಮಾರು ಒಂದು ಶತಮಾನದ ಹಿಂದೆ ಮೈಸೂರು ರಾಜ್ಯಕ್ಕೆ ರಸಪುರಿ ಮಾವಿನಹಣ್ಣು ಬಂತು. ಅವರೆವಿಗೂ ಇದ್ದ ನಾಟಿಹಣ್ಣುಗಳಿಗಿಂತ ತುಂಬಾ ರುಚಿಯಾಗಿತ್ತು. ಅಂದಿನ ಮಹಾರಾಜರು ಈ ಹಣ್ಣಿನ ಸಸಿಗಳನ್ನು ತರಿಸಿ ತಮ್ಮ ಶ್ರೀರಂಗಪಟ್ಟಣದ ತೋಟದಲ್ಲಿ ಬೆಳೆಸಿದರು. ಈ ಸಸಿಗಳಿಗೆ ರಾಜೋಪಚಾರ ನಡೆಯಿತು. ಗಿಡಗಳೂ ಚೆನ್ನಾಗಿಯೇ ಬೆಳೆದವು. 4-5 ವರ್ಷಕ್ಕೆ ಹೂಬಿಟ್ಟು ಕಾಯಿ ಕಚ್ಚಿದವು. ಮಹಾರಾಜರು ತೋಟಕ್ಕೆ ಭದ್ರವಾದ ಬೇಲಿ ಕಟ್ಟಿಸಿದರು. ನಾಲ್ಕು ಮೂಲೆಗಳಲ್ಲಿಯೂ ಕಾವಲುಗಾರರನ್ನು ನೇಮಿಸಿದರು. ಈ ತೋಟದ ಮೊದಲ ಬೆಳೆಯ ಹಣ್ಣುಗಳನ್ನು ತಾಯಿಚಾಮುಂಡಾಂಬೆಗೆ ಅರ್ಪಿಸಿ, ಬ್ರಾಹ್ಮಣರಿಗೆ ಹಂಚಿನಂತರ ತಾವು ಸವಿಯಬೇಕೆಂಬ ಸದಾಶಯ ಅವರದು.

ಆಗಿನ ಕಾಲಕ್ಕೆ ಮೇಲುಕೋಟೆ ಗ್ರಾಮವು ಶ್ರೀರಂಗಪಟ್ಟಣ ತಾಲ್ಲೋಕಿಗೆ ಸೇರಿತ್ತು. ಎಲ್ಲ ಸರ್ಕಾರಿ ವ್ಯವಹಾರಗಳಿಗೂ ಮೇಲುಕೋಟೆಯ ಜನ ಶ್ರೀರಂಗಪಟ್ಟಣಕ್ಕೆ ಬರಬೇಕಾಗುತ್ತಿತ್ತು. ಹಾಗೆ ಒಂದು ಸಲ ಬಂದಾಗ ಮೇಲುಕೋಟೆಯ ಕೆಲವು ಯುವಕರ ಕಣ್ಣು ಈ ತೋಟದತ್ತ ಬಿತ್ತು. ಕಸಿಮರಗಳಲ್ಲಿ ಜೊಂಪೆಜೊಂಪೆಯಾಗಿ ನೇತಾಡುತ್ತಿದ್ದ ಬಣ್ಣತುಂಬಿ ಬೆಳೆದ ಹೊಸ ಜಾತಿಯ ಬಲಿತ ಕಾಯಿಗಳನ್ನು ಕಂಡರು. ಕಾಯಿಗಳೂ ಕೈಗೇ ಎಟುಕುವಂತಿದ್ದವು. ಸರಿ ಅವರ ಸ್ವಗ್ರಾಮದ ದೇವರ ಮೇಲೆ ಭಕ್ತಿ ಉಕ್ಕಿತು. ಈ ಹಣ್ಣುಗಳ ಮೊದಲನೇ ಫಸಲನ್ನು ತಮ್ಮೂರಿನ ಚೆಲುವನಾರಾಯಣಸ್ವಾಮಿ, ನರಸಿಂಹಸ್ವಾಮಿ ದೇವರುಗಳಿಗೆ

ಅರ್ಪಿಸಬೇಕೆಂದು ನಿರ್ಧರಿಸಿಯೇಬಿಟ್ಟರು. ಯೋಜನೆ ರೂಪಿತವಾಯಿತು. ಒಂದು ಅಮಾವಾಸ್ಯೆದಿನ ಮಧ್ಯಾಹ್ನ ಊಟವಾದಮೇಲೆ 10–15 ಯುವಕರು ಶ್ರೀರಂಗಪಟ್ಟಣದತ್ತ ಗುಟ್ಟಾಗಿ ಪ್ರಯಾಣ ಹೊರಟರು. ಆಗ ಬಸ್ ಇತ್ಯಾದಿ ವಾಹನಗಳಿರಲಿಲ್ಲ.ನಡೆದೇ ಹೊರಟರು.ರಾತ್ರಿಆಯಿತು. ತೋಟದ ನಾಲ್ಕೂ ದಿಕ್ಕುಗಳಲ್ಲೂ ಇಬ್ಬಿಬ್ಬರು ನಿಂತರು. ಉಳಿದ 4–5 ಜನ, ಕೈಯಲ್ಲಿ ಗೋಣೀಚೀಲಗಳನ್ನು ಹಿಡಿದುನಿಂತರು. ಸರಿರಾತ್ರಿಯಾಯಿತು. ಕಾವಲುಗಾರರಿಗೆಲ್ಲ ನಿದ್ರೆ ಬಂತು. ಪೂರ್ವದಿಕ್ಕಿನಲ್ಲಿದ್ದ ಇಬ್ಬರು ಯುವಕರು ಕೈಲಿ ಎಣ್ಣೆ ಅದ್ದಿದ ದೀವಟಿಗೆ ಹತ್ತಿಸಿಕೊಂಡು ಕುಣಿಯಲಾರಂಭಿಸಿದರು. ಒಬ್ಬ ಕಾವಲುಗಾರನಿಗೆ ಎಚ್ಚರವಾಗಿ ನೋಡುತ್ತಾನೆ. ಅಲ್ಲಿ ಕೊಳ್ಳಿದೆವ್ವಗಳು ಕುಣಿಯುತ್ತಿವೆ ಎನ್ನಿಸಿತು ಅವನಿಗೆ. ಪಕ್ಕದಲ್ಲಿದ್ದವನನ್ನು ಎಬ್ಬಿಸಿ ತೋರಿಸಿದ. ಅವರಿಗೂ ಅದು ಕೊಳ್ಳಿದೆವ್ವವೇ ಎನ್ನಿಸಿ ಭಯವಾಯಿತು. ಇಬ್ಬರೂ ಕೂಗಿ ಬೇರೆ ದಿಕ್ಕಿನವರನ್ನು ಎಬ್ಬಿಸಲು ಯತ್ನಿಸಿದರು. ಹೆದರಿಕೆಗೆ ಧ್ವನಿಯೇ ಹೊರಡದು. ಅಂತೂ ಕೂಗಿದರು. ನಾಲ್ಕೂ ದಿಕ್ಕಿನ ಕಾವಲುಗಾರರಿಗೆ ಎಚ್ಚರವಾಯಿತು. ಅಷ್ಟು ಹೊತ್ತೂ ಪೂರ್ವ ದಿಕ್ಕಿನಲ್ಲಿ ಕಾಣಿಸಿಕೊಂಡಿದ್ದ ಕೊಳ್ಳಿದೆವ್ವ ಪಶ್ಚಿಮದಿಕ್ಕಿನಲ್ಲಿ ಕುಣಿಯತೊಡಗಿತು. ಮತ್ತೆ ಸ್ವಲ್ಪಹೊತ್ತಿಗೆ ದಕ್ಷಿಣದಿಕ್ಕಿನಲ್ಲಿ, ನಂತರ ಉತ್ತರ ದಿಕ್ಕಿನಲ್ಲಿ, ಹೀಗೆ ನಾಲ್ಕೂ ದಿಕ್ಕುಗಳಲ್ಲಿ ದೆವ್ವದಕುಣಿತ ಆರಂಭವಾಯಿತು. ಎಲ್ಲ ಕಾವಲುಗಾರರೂ ಹೆದರಿ ತಮ್ಮ ಕಂಬಳಿಗಳನ್ನು ಮುಸುಕೆಳೆದುಕೊಂಡು ಮಲಗಿದರು ನಿದ್ರೆಬಾರದಿದ್ದರೂಕೂಡ. ದೆವ್ವದ ಕುಣಿತ ದಿಕ್ಕುದಿಕ್ಕಿಗೂ ಚಲಿಸುತ್ತ ನಡೆದೇ ಇತ್ತು. ಇತ್ತ ಚೀಲಹಿಡಿದು ಕಾದಿದ್ದ ಯುವಕರು ದೆವ್ವದ ಕುಣಿತ ನಡೆದಿದ್ದಾಗ ಬೇಲಿಯನ್ನು ಸರಿಸಿ ಒಂದು ಕಡೆ ನಡೆದಾರಿಮಾಡಿಕೊಂಡು ತೋಟದೊಳಕ್ಕೆ ನುಗ್ಗಿ ದೆವ್ವದ ಕೊಳ್ಳಿಯ ಬೆಳಕಿನಲ್ಲೇ ಬಲಿತ ಮಾವಿನಕಾಯಿಗಳನ್ನು ಕಿತ್ತು ಚೀಲಗಳಿಗೆ ತುಂಬಿಸಿ ಬಾಯಿಕಟ್ಟಿ ಹೊತ್ತುಕೊಂಡು ಹೊರಟರು. ಅವರು ಸುಮಾರು 2–3 ಮೈಲು ಸಾಗುವವರೆಗೂ ದೆವ್ವದ ಕುಣಿತ ನಡೆದೇ ಇತ್ತು. ಕ್ರಮೇಣ ಕಡಿಮೆ ಆಯಿತು. ಮತ್ತೆ ನಿಂತೇ ಹೋಯಿತು. ಆದರೂ ಹೆದರಿದ್ದ ಕಾವಲುಗಾರರು ಬೆಳಗಾಗುವವರೆಗೂ ಮುಸುಕು ತೆಗೆಯದೇ ಮಲಗೇ ಇದ್ದರು. ಬೆಳಿಗ್ಗೆ ಎದ್ದು ಹೆದರಿಕೆಯಿಂದಲೇ ಹೊರಬಂದು ದೆವ್ವ ಕುಣಿಯುತ್ತಿದ್ದ ಜಾಗಕ್ಕೆ ಬಂದುನೋಡಿದರು. ಅಲ್ಲೆಲ್ಲ ನಾಲ್ಕೂ ಕಡೆ ಅರ್ಧ ಉರಿದು ಆರಿಸಲ್ಪಟ್ಟ ಎಣ್ಣೆ ಅದ್ದಿದ ದೀವಟಿಗೆಗಳು ಅರೆಬರೆಸುಟ್ಟ ತೆಂಗಿನಚಿಪ್ಪುಗಳು ಕಂಡವು. ಆಗ ಅವರಿಗೆ ತಿಳಿಯಿತು. ತಾವು ಕಂಡದ್ದು ದೆವ್ವಗಳಲ್ಲ, ಯಾರೋ ಕಳ್ಳರು ದೀವಟಿಗೆ ಹತ್ತಿಸಿ ಹಿಡಿದುಕೊಂಡುಕುಣಿದಿರಬೇಕು. ನಡುನಡುವೆ ಬೆಳಕುಕಾಣದಂತೆ ಚಿಪ್ಪುಮುಚ್ಚುತ್ತಿದ್ದರು. ಆದುದರಿಂದಲೇ ಚಿಪ್ಪುಗಳು ಅರ್ಧಮರ್ಧಸುಟ್ಟಿವೆ ಎಂದು. ನಂತರ ಮರಗಳ ಕಡೆ ತಿರುಗಿನೋಡಿದರೆ ಬಲಿತ, ಬಣ್ಣ ಬಂದಿದ್ದ ಹಣ್ಣುಗಳೆಲ್ಲ ನಾಪತ್ತೆ. ಆಗ ತಿಳಿಯಿತು ಇದ್ಯಾರೋ ಕಳ್ಳರ

ಕೆಲಸವೆಂದು.ಸುದ್ದಿ ಬೆಳ್ಳಂಬೆಳಗ್ಗೆ ತಹಶೀಲ್ದಾರ್‌ರನ್ನು ಮುಟ್ಟಿತು. ಅವರೂ ಸ್ಥಳಕ್ಕೆ ಬಂದು ನೋಡಿದರು. ಕಾವಲುಗಾರರನ್ನೆಲ್ಲ ಕರ್ತವ್ಯಭ್ರಷ್ಟತೆಗಾಗಿ ಲಾಕಪ್‌ಗೆ ಹಾಕಿದರು. ಹೊಸ ಕಾವಲುಗಾರರನ್ನು ಹೆಚ್ಚಿನ ಸಂಖ್ಯೆಯಲ್ಲಿ ನೇಮಿಸಲಾಯಿತು. ಮಹಾರಾಜರಿಗೂ ಸುದ್ದಿಮುಟ್ಟಿತು. ಎಲ್ಲೆಲ್ಲಿ ಹುಡುಕಿದರೂ ಕಳ್ಳರ ಪತ್ತೆ ಆಗಲಿಲ್ಲ.

ಇತ್ತ ಮೇಲುಕೋಟೆ ಯುವಕರು ಕಾಯಿಚೀಲಗಳನ್ನು ಹೊತ್ತುಕೊಂಡು ನೇರದಾರಿ ಬಿಟ್ಟು ಕಾಡುಮೇಡುಗಳ ದಾರಿಯಲ್ಲಿ ಅಮಾವಾಸ್ಯೆಯ ಕತ್ತಲಲ್ಲಿ ಓಡೋಡಿ ಹೋಗಿ ಊರುಮುಟ್ಟಿದರು. ಮೊದಲೇ ಗೊತ್ತುಮಾಡಿಕೊಂಡಿದ್ದ ಒಂದು ಮನೆಯಲ್ಲಿ ಕಾಯಿಹರಡಿ ನೆಲ್ಲುಹುಲ್ಲುಮುಚ್ಚಿ ಮನೆಗೆ ಭದ್ರವಾಗಿ ಬೀಗಹಾಕಿದರು. ಬೆಳಿಗ್ಗೆ ಎಲ್ಲರಂತೆ ತಾವೂ ಕೆರೆಗೆ ಸ್ನಾನಕ್ಕೆ ಹೋದರು. ಏನೂ ಅರಿಯದವರಂತೆ ತಮ್ಮ ದಿನಚರಿಯಲ್ಲಿ ತೊಡಗಿದರು. ರಾಜರ ತೋಟದ ರಸಪುರಿ ಮಾವಿನಕಾಯಿಗಳ ಕಳುವಿನ ಸುದ್ದಿ ಮೇಲುಕೋಟೆಗೂ ಮುಟ್ಟಿತು. ಪಾಲ್ಗೊಂಡಿದ್ದ ಯುವಕರಿಗೆ ಹಿಗ್ಗು, ಭಯ ಎರಡೂ ಕಾಡಿದರೂ ಅದಾವುದನ್ನೂ ಕಾಣಿಸಿಕೊಳ್ಳದೇ ಇದ್ದುಬಿಟ್ಟರು. ಐದು ದಿನ ಆಗುವವೇಳೆಗೆ ಮಾವಿನ ಹಣ್ಣು ವಾಸನೆ ಬೀರಲಾರಂಭಿಸಿತು. ಅಕ್ಕಪಕ್ಕದ ಮನೆಯವರಿಗೆಲ್ಲ ಏನೋ ಅನುಮಾನ. ಇನ್ನು ಹೆಚ್ಚು ದಿನ ತಡೆಯುವಂತಿಲ್ಲ. ಆರನೇ ದಿನ ಬೆಳಿಗ್ಗೆ ಯುವಕರು ಬಾಗಿಲು ತೆರೆದರು. ಪಕ್ವವಾಗಿದ್ದ ಹಣ್ಣುಗಳನ್ನೆಲ್ಲ ಬೇರೆ ಮಾಡಿದರು. ಹೊಸಕುಕ್ಕೆಗಳಲ್ಲಿ ತುಂಬಿದರು. ಮಧ್ಯಾಹ್ನದ ಪೂಜೆವೇಳೆಗೆ ನಾರಾಯಣಸ್ವಾಮಿಗೂ, ಬೆಟ್ಟದ ಮೇಲಿನ ನರಸಿಂಹ ಸ್ವಾಮಿಗೂ ನಿವೇದನಕ್ಕೆ ತಂದಿಟ್ಟರು. ಊರಿಗೆಲ್ಲ ಆಶ್ಚರ್ಯ ಭಯ. ಎಲ್ಲರಬಾಯಲ್ಲೂ ಗುಸಗುಸ ಮಾತು. ದೇವರಿಗೆ ನಿವೇದನೆ ಆಯಿತು. ಯುವಕರ ಆಸೆನೆರವೇರಿತು. ಇನ್ನು ರಾಜರ ಕೋಪದಿಂದ ಪಾರಾಗುವ ಚಿಂತೆ. ಅದಕ್ಕೂ ಯೋಚನೆ ಆರಂಭಿಸಿದರು. ಊರಿನವರಾರಿಗೂ ಒಂದು ಹಣ್ಣನ್ನೂ ಕೊಡಲಿಲ್ಲ. ದೇವರಿಗಾದಮೇಲೆ ಮಹಾರಾಜರಿಗೆ ಕೊಟ್ಟು ನಂತರ ಊರಿನವರಿಗೆ ಹಂಚುವ ಯೋಚನೆ ಯುವಕರದ್ದು. ರಾತ್ರಿ ಊಟ ಆದಮೇಲೆ ಅದೇ ಯುವಕರು ಗೂಡೆಗಳಲ್ಲಿ ದೇವರಪ್ರಸಾದದ ಹಣ್ಣುಗಳನ್ನು ತುಂಬಿಸಿದರು. ಗೂಡೆಗಳಿಗೆಲ್ಲ ಶುಚಿಯಾದ ಮಡಿವಸ್ತ್ರಮುಚ್ಚಿ ಹೊತ್ತುಕೊಂಡು ಮೈಸೂರ ದಾರಿಹಿಡಿದರು. ಆರು ಜನ ಹೊರೆಹೊತ್ತರೆ, ಇನ್ನಾರು ಜನ ಬರಿಗೈಲೆ ನಡೆದರು. ಎರಡೆರಡು ಮೈಲಿಗೊಮ್ಮೆ ಹೊರೆ ಬದಲಾಯಿಸಿಕೊಂಡು ಬೆಳಕು ಹರಿಯುವಹೊತ್ತಿಗೆ ಪಾದಯಾತ್ರೆಯಲ್ಲಿ ಮೈಸೂರು ತಲುಪಿದರು. ಜೀವನರಾಯನ ಕಟ್ಟೆಯಲ್ಲಿ ಸ್ನಾನ ಆಹ್ನಿಕಗಳನ್ನು ಮುಗಿಸಿಕೊಂಡರು. ನಾಮಧರಿಸಿ. ಶಾಲುಗಳನ್ನು ಹೊದ್ದರು. ಪ್ರಸಾದದ ಹಣ್ಣಿನ ಗೂಡೆಹೊತ್ತರು. ಅರಮನೆಯ ದ್ವಾರದ ಬಳಿಬಂದರು. ಕಾವಲುಗಾರನ ಕೈಲಿ ಮೇಲುಕೋಟೆಯ ದೇವಸ್ಥಾನಗಳಿಂದ ಮಹಾರಾಜರಿಗೆ ತೀರ್ಥಪ್ರಸಾದ ತಂದಿರುವುದಾಗಿ

ಹೇಳಿಕಳುಹಿಸಿದರು. ಇವರನ್ನು ಸೂಕ್ತಸ್ಥಳದಲ್ಲಿ ಕೂಡಿಸಿದ ಅಧಿಕಾರಿಗಳು ಮಹಾರಾಜರಿಗೆ ಸುದ್ದಿಮುಟ್ಟಿಸಿದರು.

ಮಹಾರಾಜರಿಗೋ ಮೇಲುಕೋಟೆಯ ನಾರಾಯಣ, ನರಸಿಂಹ ದೇವರಬಗೆಗೆ ತುಂಬ ಭಕ್ತಿ. ಅವರದ್ದೂ ಸ್ನಾನ ಆಗಿತ್ತು. ಒಡನೆ ತೀರ್ಥಪ್ರಸಾದ ಸ್ವೀಕರಿಸಲು ಸಿದ್ಧರಾಗಿ ಯುವಕರಿಗೆ ಹೇಳಿಕಳುಹಿಸಿದರು. ಯುವಕರು ಮಹಾರಾಜರಿಗೆ ವಂದಿಸಿ "ಮಹಾಸ್ವಾಮಿ ನಾವು ಈಗ ರಾಜದ್ರೋಹ ಎಸಗಿದ ಅಪರಾಧಿಗಳು. ಆದರೆ ದೈವಭಕ್ತಿಯಿಂದ ಈ ಅಪರಾಧ ಮಾಡಿದ್ದೇವೆ. ತಮ್ಮ ಶ್ರೀರಂಗಪಟ್ಟಣದ ತೋಟದಿಂದ ಮಾವಿನಹಣ್ಣುಗಳನ್ನು ಕಾವಲುಗಾರರನ್ನು ಹೆದರಿಸಿ ಕಳುವುಮಾಡಿದವರು ನಾವೇ. ಕದ್ದಾದರೂ ಆ ಹಣ್ಣುಗಳನ್ನು ನಮ್ಮ ಊರ ನಾರಾಯಣ, ನರಸಿಂಹ ದೇವರಿಗೆ ನಿವೇದನ ಮಾಡಿಸಿ ತೀರ್ಥಪ್ರಸಾದ ತಂದಿದ್ದೇವೆ. ಇದನ್ನು ಸ್ವೀಕರಿಸಿ ನಮ್ಮನ್ನು ಕ್ಷಮಿಸಬೇಕು. ನಿರಪರಾಧಿಗಳಾದ ಅಮಾಯಕ ಕಾವಲುಗಾರರನ್ನು ಬಂಧನದಿಂದ ಬಿಡುಗಡೆ ಮಾಡಿ, ಮನ್ನಿಸಬೇಕೆಂದು ಬೇಡುತ್ತೇವೆ. ತಾವು ಫಲಪ್ರಸಾದ ಸ್ವೀಕರಿಸಿದ ನಂತರ ಊರಿನ ಹತ್ತೂಜನರಿಗೆ ಪ್ರಸಾದ ಹಂಚುತ್ತೇವೆ. ದಯಮಾಡಿ ನಾವು ನಮ್ಮೂರ ದೇವರ ಮೇಲಣ ಭಕ್ತಿಯಿಂದ ಮಾಡಿದ ಈ ಅಪರಾಧವನ್ನು ಮನ್ನಿಸಬೇಕು" ಎಂದು ವಿನಂತಿಸಿದರು. ಮಹಾರಾಜರಿಗೆ ಮೊದಲು ಇವರು ವಂಚಕರು, ಮೋಸಗಾರರು ಎನ್ನಿಸಿದರೂ, ಅವರ ಮಾತೆಲ್ಲ ಕೇಳಿದಮೇಲೆ ಅವರ ನಿಷ್ಕಪಟ, ಭಕ್ತಿಪೂರಿತ ಮುಖವನ್ನು ನೋಡಿದಮೇಲೆ, ಮಾತುಗಳನ್ನು ಕೇಳಿದಮೇಲೆ ಸಿಟ್ಟೆಲ್ಲ ಕರಗಿ ದೈವಭಕ್ತಿ ಉಕ್ಕಿ ಸಂತೋಷದಿಂದ ತೀರ್ಥಪ್ರಸಾದ ಸ್ವೀಕರಿಸಿ, ಯುವಕರಿಗೆಲ್ಲ ಶಾಲುಹೊದಿಸಿ ಬಹುಮಾನ ನೀಡಿ ಬೇಗ ಊರಿಗೆ ಹೋಗಿ ಅಲ್ಲಿ ಫಲಪ್ರಸಾದವನ್ನು ಊರಜನರಿಗೆಲ್ಲ ಹಂಚಬೇಕೆಂದು ತಿಳಿಸಿಬೀಳ್ಕೊಟ್ಟರು. ಬಂಧನದಲ್ಲಿದ್ದ ಕಾವಲುಗಾರರನ್ನು ಬಂಧಮುಕ್ತರಾಗಿಸಲು ಮರೆಯಲಿಲ್ಲ. ಒಡನೆ ಅವರನ್ನು ಬಿಡುಗಡೆ ಮಾಡಲು ಅಪ್ಪಣೆ ಮಾಡಿದರು.

# ಗ್ರಾಮ ನ್ಯಾಯ

ಕಾವೇರಿ ನದೀ ತೀರದಲ್ಲಿ ಕಣಗಾಲು ಒಂದು ಗ್ರಾಮ. ಈಗ್ಗೆ 50 ವರ್ಷಗಳ ಹಿಂದೆ ಸರ್ಕಾರ ಆ ಗ್ರಾಮಕ್ಕೆ ಒಂದು ಸರ್ಕಾರಿ ಮಾಧ್ಯಮಿಕ ಶಾಲೆಯನ್ನು ಮಂಜೂರುಮಾಡಿತು. ಒಬ್ಬ ಯುವಕ ಉಪಾಧ್ಯಾಯರು ಸಂಸಾರಸಮೇತ ಅಲ್ಲಿಗೆ ಬಂದರು. ಹಿಂದೆ ಕೇವಲ 4 ತರಗತಿ ಓದಿ ಶಾಲೆ ಬಿಟ್ಟಿದ್ದ ಕೆಲವು ಮಕ್ಕಳೂ ಹೊಸ ಮಾಧ್ಯಮಿಕ ಶಾಲೆಗೆ ಸೇರಿದರು. ಅಂತಹ ಹುಡುಗರಿಗೆ ಮರೆತುಹೋಗಿದ್ದ ಪಾಠ ಪ್ರವಚನಗಳನ್ನು ನೆನಪಿಸಲು ವಿಶೇಷ ಮನೆಪಾಠದ ಏರ್ಪಾಟನ್ನು ಉಪಾಧ್ಯಾಯರು ಆರಂಭಿಸಿದರು. ಉಪಾಧ್ಯಾಯರ ಮನೆಬಳಕೆಗೆ ಹಾಲುಬೇಕುತಾನೆ? ಮೊದಲೇ ಗೋಪಾಲನೆಯಲ್ಲಿ ಅನುಭವ ಇದ್ದ ಅವರು ಹಾಲಿಗಾಗಿ ಒಂದು ಹಸುವನ್ನೇ ಕೊಂಡುತರಲು ನಿರ್ಧರಿಸಿದರು. ಗ್ರಾಮದ ಹಿರಿಯರೊಬ್ಬರ ನೆರವಿನೊಂದಿಗೆ ಕಾವೇರಿನದಿಯ ಆಚೆಬದಿಯ ಕಡುವಿನ ಹೊಸಹಳ್ಳಿಯಿಂದ ಒಂದು ಹಾಲುಕರೆಯುತ್ತಿದ್ದ ಹೋರಿಕರು ಹಾಕಿದ್ದ ಹಸುವನ್ನು 165 ರೂ. ಕೊಟ್ಟು ನದಿದಾಟಿಸಿತಂದರು. ಮನೆಯ ಹಾಲಿನ ಸಮಸ್ಯೆ ಬಗೆಹರಿಯಿತು.

ಒಂದೆರಡು ತಿಂಗಳ ನಂತರ ಶಾಲೆಗೆ ಪಕ್ಕದ ಗ್ರಾಮದವನಾದ ದೊಡ್ಡ ಕಮರವಳ್ಳಿಯಿಂದ ಒಬ್ಬ ಹುಡುಗ ಬಂದುಸೇರಿದ. ಉಪಾಧ್ಯಾಯರ ಮನೆಪಾಠಕ್ಕೂ ಸೇರಿದ. ಉಪಾಧ್ಯಾಯರ ಮನೆಯ ಹಸುವನ್ನು ನೋಡಿದ. ಅವನಿಗೆ ಅದನ್ನು ಎಲ್ಲೋ ನೋಡಿದಂತಿದೆಯಲ್ಲ ಎನ್ನಿಸಿತು. ಚೆನ್ನಾಗಿ ನೆನಪಿಸಿಕೊಂಡ ಮೇಲೆ ಸುಮಾರು 4ವರ್ಷಗಳ ಹಿಂದೆ ತಮ್ಮೂರಿನಿಂದ ಕಾಣೆ ಆಗಿದ್ದ

ತಮ್ಮ ನೆಂಟರೊಬ್ಬರ ಕರುವೇ ಈ ಹಸು ಇರಬಹುದು ಎನ್ನಿಸಿತು. ಊರಲ್ಲಿದ್ದ ಕರು ಕಳೆದುಕೊಂಡಿದ್ದ ತನ್ನ ಸಂಬಂಧಿಯನ್ನು ಕರೆತಂದು ತೋರಿಸಿದ. ತನ್ನ ಮನೆಯಿಂದ ಕಣ್ಮರೆ ಆಗಿದ್ದ ಕರುವೇ ಈ ಹಸು ಎಂದು ಅವನೂ ಗುರ್ತಿಸಿದ. ಸರಿ ಸುದ್ದಿ ಕಣಗಾಲು,ದೊಡ್ಡಕಮರವಳ್ಳಿಗಳಲ್ಲಿ ಎಲ್ಲರ ಕಿವಿಗೂ ಬಿತ್ತು. ಪತ್ತೇದಾರಿ ಆರಂಭವಾಯಿತು. ಆಗ ತಿಳಿಯಿತು. 4ವರ್ಷಗಳ ಹಿಂದೆ ಕಡುವಿನ ಹೊಸಳ್ಳಿಯ ಒಬ್ಬ ರೈತ ದೊಡ್ಡಕಮರವಳ್ಳಿಯಿಂದ ಬಂದು ಹಸುವನ್ನು ಖರೀದಿಸಿ ದೋಣಿಮೂಲಕ ಹೊಳೆದಾಟಿಸಿ ತಮ್ಮೂರಿಗೆ ಒಯ್ದಿದ್ದ. ಆ ಹಸುವಿನ ಜೊತೆಗೆ ಈ ಕರುವೂ ಹೊಳೆಯಲ್ಲಿ ಈಜಿಕೊಂಡು ಕಡುವಿನ ಹೊಸಳ್ಳಿ ಸೇರಿತ್ತು. ಊರಿನ ದನಗಳೊಟ್ಟಿಗೆ ಮೇಯುತ್ತ ಸಿಕ್ಕಲ್ಲಿ ಮಲಗುತ್ತಿತ್ತು. ಕ್ರಮೇಣ ಅದು ಗರ್ಭ ಧರಿಸಿತ್ತು. ಆಗ ಗ್ರಾಮಪಂಚಾಯ್ತಿಯವರು ಮಾಲೀಕನಿಲ್ಲದ ಆ ಹಸುವನ್ನು ಗ್ರಾಮದ ಸ್ವತ್ತೆಂದು ಪರಿಗಣಿಸಿ ಹರಾಜುಹಾಕಿದರು. ಒಬ್ಬ ರೈತ 150 ರೂ.ಗಳಿಗೆ ಹರಾಜಿನಲ್ಲಿ ಕೊಂಡುಕೊಂಡ. ಹಣ ಗ್ರಾಮದ ಪಂಚಾಯ್ತಿಯ ಲೆಕ್ಕಕ್ಕೆ ಸೇರಿತು. ಕಣಗಾಲಿನ ಉಪಾಧ್ಯಾಯರು ಅದೇ ಹಸುವನ್ನು ಕರುವಿನೊಡನೆ 165ರೂ. ಗಳಿಗೆ ಕೊಂಡುತಂದಿದ್ದರು ಎಂಬ ವಿವರಗಳು ಬೆಳಕಿಗೆ ಬಂದವು. ದೊಡ್ಡಕಮರವಳ್ಳಿಯ ಹಸುಕಳೆದುಕೊಂಡಿದ್ದ ರೈತ ತನಗೆ ಸೇರಿದ್ದ ಹಸು ಕರುವನ್ನು ತನಗೆ ಕೊಡಿಸಿಕೊಡಬೇಕೆಂದು ಬೇಡಿಕೆ ಇಟ್ಟ. ಸರಿ ಕಣಗಾಲು. ದೊಡ್ಡಕಮರವಳ್ಳಿ, ಕಡುವಿನಹೊಸಳ್ಳಿ ಗ್ರಾಮಗಳ ಹಿರಿಯರು ಕಣಗಾಲಿನಲ್ಲಿ ಪಂಚಾಯ್ತಿಗೆ ಸೇರಿದರು. ಕರುಕಳೆದುಕೊಂಡವನೂ, ಉಪಾಧ್ಯಾಯರೂ ಸೇರಿದರು. ಹಿರಿಯರೆಲ್ಲರ ಒಮ್ಮತದ ತೀರ್ಮಾನ ಹೀಗಿತ್ತು.

ಕರು ಕಳೆದುಕೊಂಡವನು ಅಂದು ಸಣ್ಣ ಕರುವನ್ನು ಕಳೆದುಕೊಂಡಿದ್ದ. ಈಗ ಅದು ಬೆಳೆದು ದೊಡ್ಡದಾಗಿ ಹಾಲುಕರೆಯುವ ಹಸು ಆಗಿದೆ. ಜೊತೆಗೆ ಹೋರಿಕರು ಸಹಾ ಇದೆ. ಆದ್ದರಿಂದ ಅವನು ಉಪಾಧ್ಯಾಯರಿಗೆ ಅವರು ಕೊಟ್ಟಿದ್ದ ಹಣ 165 ರೂ. ಗಳನ್ನು ಕೊಟ್ಟು ಹಸುಕರು ಪಡೆಯತಕ್ಕದ್ದು. ಉಪಾಧ್ಯಾಯರು ಈ ಯಾವ ಘಟನೆಗಳ ಅರಿವೂ ಇಲ್ಲದೆ ಹಸುವನ್ನು 165 ರೂ. ಕೊಟ್ಟುಕೊಂಡು ತಂದಿದ್ದಾರೆ. 4 ತಿಂಗಳು ಹಾಲು ಕುಡಿದಿದ್ದಾರೆ. ಆದುದರಿಂದ ಇಂದು ಹಸುಕರು ಕೊಂಚಹೆಚ್ಚು ಬೆಲೆಬಾಳುವಂತಿದ್ದರೂ ತಾವು ಕೊಟ್ಟ ಹಣವನ್ನು ಪಡೆದು ಹಸುಕರುವನ್ನು ಅದರ ಮೂಲ ಮಾಲೀಕನಿಗೆ ಕೊಡತಕ್ಕದ್ದು.ಕಡುವಿನಹೊಸಳ್ಳಿಯಲ್ಲಿ ಮಾಲೀಕನಿಲ್ಲದೆ ಓಡಾಡಿಕೊಂಡಿದ್ದು ಗರ್ಭಧರಿಸಿದ್ದ ಹಸುವನ್ನ ಗ್ರಾಮಪಂಚಾಯಿತಿಯವರು ಹರಾಜು ಹಾಕಿ ಬಂದ 150 ರೂ. ಗಳನ್ನು ಪಂಚಾಯಿತಿ ಲೆಕ್ಕಕ್ಕೆ ಸೇರಿಸಿರುವುದರಲ್ಲಿ ಯಾವತಪ್ಪೂ ಇರುವುದಿಲ್ಲ. ಕಡುವಿನಹೊಸಳ್ಳಿಯ ರೈತ ಹರಾಜಿನಲ್ಲಿ ಹಸುಕೊಂಡಿದ್ದಾನೆ. ನಂತರ ಅದು ಕರುಹಾಕಿದ ಮೇಲೆಮಾರಿದ್ದಾನೆ. ಅದರಲ್ಲೂ ಯಾವ ತಪ್ಪೂ ಇಲ್ಲ

ಈಗ ನಡೆದಿರುವ ಈ ಒಮ್ಮತ ತೀರ್ಮಾನವನ್ನು ಬರವಣಿಗೆ ಮಾಡಿ ಮೂರೂ ಗ್ರಾಮಗಳ ಪಂಚಾಯಿತಿಯವರೂ, ಉಪಾಧ್ಯಾಯರೂ, ಹಸುಮಾಂದವರೂ, ಹಸುಕರು ಹಿಂದಕ್ಕೆ ಪಡೆದವರೂ ರುಜುಮಾಡಿ ಎಲ್ಲರೂ ಒಂದೊಂದು ಪ್ರತಿಯನ್ನು ಪಡೆಯತಕ್ಕದ್ದು ಎಂದು ಸರ್ವಸಮ್ಮತಿಯ ನಿರ್ಣಯ ಆಯಿತು. ಈ ರೀತಿ ಕಗ್ಗಂಟಾಗಿದ್ದ ವ್ಯವಹಾರವನ್ನು ಯಾವ ಕೋರ್ಟುಕಛೇರಿಗೂ ಒಯ್ಯದೇ, ಎಲ್ಲರೂ ಸಂತೋಷವಾಗಿ ಒಪ್ಪುವಂತಹ ಯಾರಿಗೂ ಲಾಭ-ಹಾನಿ ಆಗದಂತಹ ನ್ಯಾಯ ತೀರ್ಮಾನಮಾಡಿದ್ದು ಯಾವ ನ್ಯಾಯಾಲಯದ ನ್ಯಾಯಾಧೀಶರೂ ನೀಡಬಹುದಾದ ತೀರ್ಪಿಗೂ ಮಿಗಿಲಾದ ಸರ್ವಜನಹಿತದ ತೀರ್ಮಾನವಾಗಿದೆ ಎಂದು ಇಂದಿಗೂ ಅನ್ನಿಸುತ್ತದೆ.

# ಜಟ್ಟಿಯ ಜಂಭ

ಹಾಸನ ಜಿಲ್ಲೆಯಲ್ಲಿ ಬಸವಾಪಟ್ಟಣ ಒಂದು ಸಣ್ಣ ಗ್ರಾಮ. ತೆಂಗು, ಅಡಿಕೆ, ಬಾಳೆ, ವೀಳ್ಯದೆಲೆ ತೋಟಗಳು, ಭತ್ತದ ಗದ್ದೆಗಳು ರಾಗಿ, ಹುರುಳಿ ಹೊಲಗಳಿಂದ ತುಂಬಿದ ಹಳ್ಳಿ, ಬಹಳ ಹಿಂದೆ ಅಲ್ಲಿ ರಾಮಯ್ಯನೆಂಬ ಒಬ್ಬ ರೈತನಿದ್ದನು. ಅವನಿಗೆ ರಂಗಮ್ಮನೆಂಬ ಹೆಂಡತಿ, ಮೂರು ಹಸುಗಳು, ಒಂದು ಗಂಡು ಮಗು, ಇಷ್ಟೇ ಅವನ ಸಂಸಾರ. ಶ್ರಮಪಟ್ಟು ಕೆಲಸಮಾಡಿ ನೆಮ್ಮದಿಯಿಂದ ಬಾಳುತ್ತಿದ್ದನು. ಬೆಳಗ್ಗೆ ನಸುಕಿನಲ್ಲೇ ಎದ್ದು ರಾಮಯ್ಯ ತೋಟಕ್ಕೆ ಹೋಗುತ್ತಿದ್ದನು. ಅಲ್ಲಿನ ಬಾವಿಯಲ್ಲಿ ಮುಖತೊಳೆದು ಸೂರ್ಯನಿಗೆ ಕೈಮುಗಿದು ಪ್ರಾರ್ಥನೆ ಮಾಡುತ್ತಿದ್ದನು. ನಂತರ ಎರಡು ಕೈಗಳಲ್ಲೂ ಎರಡುಗಡಿಗೆ ಹಿಡಿದುಕೊಂಡು ಬಾವಿಯಿಂದ ನೀರು ತುಂಬಿಕೊಂಡು ತೆಂಗಿನ, ಅಡಿಕೆಯ ಮರಗಳಿಗೆ ನೀರು ಹಾಕುತ್ತಿದ್ದನು. 8 ಘಂಟೆ ಹೊತ್ತಿಗೆ ಅವನ ಹೆಂಡತಿ ರಂಗಮ್ಮ ಮಗನನ್ನು ಶಾಲೆಗೆ ಕಳುಹಿಸಿ ಕುಕ್ಕೆಯಲ್ಲಿ ತಿಂಡಿ ಹೊತ್ತುಕೊಂಡು ಹಸುಗಳನ್ನು ಹಿಡಿದುಕೊಂಡು ತೋಟಕ್ಕೆ ಬರುತ್ತಿದ್ದಳು. ಹಸುಗಳನ್ನು ಹುಲ್ಲಿರುವ ಕಡೆ ಬದುಗಳಲ್ಲಿ ಕಟ್ಟಿಹಾಕುತ್ತಿದ್ದಳು. ರಾಮಯ್ಯ ಕೆಲಸ ನಿಲ್ಲಿಸಿ ಬಾವಿಯಲ್ಲಿ ಸ್ನಾನಮಾಡುತ್ತಿದ್ದನು. ನಂತರ ಇಬ್ಬರೂ ಮಾತಾಡುತ್ತ ತಿಂಡಿ ತಿನ್ನುತ್ತಿದ್ದರು.

ನಂತರ ರಾಮಯ್ಯ ಗುದ್ದಲಿ ಹಿಡಿದು ಅಗೆತಕ್ಕೆ ಶುರುಮಾಡುತ್ತಿದ್ದ. ರಂಗಮ್ಮ ಅಡುಗೆಗೆ ಬೇಕಾದ ಸೌದೆಪುರುಲೆ ಆರಿಸಿಕೊಂಡು ಹೊರೆಕಟ್ಟಿ ಸೊಪ್ಪು ತರಕಾರಿ ಹೊಂದಿಸಿಕೊಂಡು. ಹಸುಗಳನ್ನು ಬೇರೆಕಡೆ ಕಟ್ಟಿ, ತರಕಾರಿ ಸೌದೆ ತೆಗೆದುಕೊಂಡು ಮನೆ ಕಡೆ ಹೊರಡುವಳು. ಮಧ್ಯಾಹ್ನದ ಅಡಿಗೆ ಮುಗಿಸುವಳು. ಮನೆಯನ್ನೆಲ್ಲ ಗುಡಿಸಿಸಾರಿಸಿ ಒಪ್ಪಮಾಡುವಳು. ಊಟಕ್ಕಾಗಿ ಗಂಡನನ್ನು ಕಾಯುತ್ತಾ ಕೂರುವಳು. ರಾಮಯ್ಯ ತೋಟದಲ್ಲಿ ಮಧ್ಯಾಹ್ನದವರೆಗೂ ಕೆಲಸ ಮಾಡುವನು. ನಂತರ ಮೇಯುತ್ತಿದ್ದ ಹಸುಗಳನ್ನು ನೆರಳಲ್ಲಿ ಕಟ್ಟಿಹಾಕಿ ಮನೆಗೆ ಹೋಗುವನು. ಇಬ್ಬರೂ ಶಾಲೆಯಿಂದ ಬಂದಿದ್ದ ಮಗನೊಡನೆ ಊಟಮಾಡುವರು. ಕೊಂಚ ವಿಶ್ರಾಂತಿ ಪಡೆದು, ಮತ್ತೆ

ತೋಟಕ್ಕೆ ಹೊರಡುವನು. ರಂಗಮ್ಮನೂ ಮಗನನ್ನು ಮಧ್ಯಾಹ್ನದ ಶಾಲೆಗೆ ಕಳುಹಿಸಿ ಗಂಡನೊಡನೆ ಹೊರಡುವಳು. ಗಂಡನ ಕೆಲಸ ಮುಗಿಯುವ ವೇಳೆಗೆ ತಾನು ಹಸುಗಳನ್ನು ಚೆನ್ನಾಗಿ ಮೇಯಿಸಿಕೊಳ್ಳುವಳು. ಸಂಜೆಗೆ ಇಬ್ಬರೂ ಹಸುಗಳೊಡನೆ ಮನೆಗೆ ಹಿಂತಿರುಗುವರು. ಸಂಜೆ ದೀಪ ಹಚ್ಚಿಸಿ ಮೂವರೂ ಪ್ರಾರ್ಥನೆಮಾಡಿ ಹಸುಗಳಿಗೆ ಹುಲ್ಲುಹಾಕಿ ಊಟಮಾಡಿ ಮಲಗುವರು. ರಾಮಯ್ಯನ ಚಿಕ್ಕ ಸಂಸಾರದ ದಿನಚರಿ ಹೀಗೇ ನಡೆಯುತ್ತಿತ್ತು. ಊರಲ್ಲಿ ಹೆಚ್ಚುಕಡಿಮೆ ಎಲ್ಲ ಮನೆಗಳಲ್ಲೂ ಇದೇ ರೀತಿ ನಡೆಯುತ್ತಿತ್ತು.

ಭಾನುವಾರ ಸೋಮವಾರಗಳಲ್ಲಿ ಮಾತ್ರ ಈ ದಿನಚರಿಯಲ್ಲಿ ಬದಲಾವಣೆ ಆಗುತ್ತಿತ್ತು. ಭಾನುವಾರ ರಾಮಯ್ಯನಿಗೆ ತೋಟದಲ್ಲಿ ವೀಳ್ಯದೆಲೆ ಕೊಯ್ದು ಲೆಕ್ಕಮಾಡಿ ಜೋಡಿಸಿ ಹೊರೆಕಟ್ಟುವ ಕೆಲಸ. ರಾತ್ರಿ ಮಲಗುವ ಹೊತ್ತಿಗೆ ದೊಡ್ಡ ಪಿಂಡಿಮಾಡಿದ ಹೊರೆ ಸಿದ್ಧವಾಗುತ್ತಿತ್ತು. ರಂಗಮ್ಮ ಗಂಡನಿಗೆ ಒಂದು ದಿನಕ್ಕಾಗುವಷ್ಟು ಬುತ್ತಿಗಂಟನ್ನು ಸಿದ್ಧಮಾಡಿಡುತ್ತಿದ್ದಳು. ಸೋಮವಾರ ಕೋಳಿಕೂಗುವ ಮೊದಲೇ ರಾಮಯ್ಯ ಎದ್ದು ಹೊರೆಯನ್ನು, ಬುತ್ತಿಗಂಟನ್ನೂ ಹೊತ್ತುಕೊಂಡು ಮೈಸೂರಿಗೆ ಹೊರಡುತ್ತಿದ್ದನು.

ಊರಿಂದ ಬೆಳಗಿನಜಾವ ಮೂರು ಘಂಟೆಗೆ ಹೊರಟವನು ಬೆಳಕು ಹರಿಯುವಹೊತ್ತಿಗೆ ಬಿಳಿಕೆರೆಗೆ ತಲುಪುತ್ತಿದ್ದನು. ಕೆರೆಯಲ್ಲಿ ಮುಖತೊಳೆದು, ಪ್ರಾರ್ಥನೆ, ಉಪಾಹಾರ ಮುಗಿಸುತ್ತಿದ್ದ. ಮತ್ತೆ ಹೊರಟರೆ ಬೆಳಗಿನ ಹತ್ತು ಘಂಟೆವೇಳೆಗೆ ಮೈಸೂರಿಗೆ ಮುಟ್ಟಿಬಿಡುತ್ತಿದ್ದ. ಮೈಸೂರಲ್ಲಿ ಅಗ್ರಹಾರದ ಬೀದಿಯಲ್ಲಿದ್ದ ಚೆಲುವರಾಯ ಶೆಟ್ಟರು ರಾಮಯ್ಯನ ಮಿತ್ರರು. ರಾಮಯ್ಯನ ತಂದೆ ಶೀನಪ್ಪನವರ ಕಾಲದಿಂದಲೂ ಮೈಸೂರಿನಲ್ಲಿ ಅವರ ಮನೆಯಲ್ಲೇ ಉಳಿಯುತ್ತಿದ್ದುದು ವಾಡಿಕೆ. ರಾಮಯ್ಯ ನೇರವಾಗಿ ಅವರ ಮನೆಗೆ ಹೋಗಿ ಹೊರೆ ಇಳಿಸುತ್ತಿದ್ದ. ಬಾವಿಯಲ್ಲಿ ನೀರುಸೇದಿ ಸ್ನಾನ ಮಾಡುತ್ತಿದ್ದ. ಬುತ್ತಿಯ ಊಟ ಮುಗಿಸಿ ವೀಳ್ಯದೆಲೆ ಹೊರೆಹೊತ್ತುಕೊಂಡುಹೋಗಿ ಮಾರಿಬಿಡುತ್ತಿದ್ದ. ರಾಮಯ್ಯನ ಎಲೆಗೆ ವರ್ತನೆ ಗಿರಾಕಿ ಇರುತ್ತಿದ್ದರು. ಇವನ ತೋಟದ ಎಲೆ ಬಹಳ ಪ್ರಸಿದ್ಧವಾಗಿತ್ತು. ಮೃದುವಾದ ಬಿಳಿಎಲೆ, ಅಗಲವಾಗಿರುತ್ತಿತ್ತು. ಲೆಕ್ಕದಲ್ಲಿ ಕೊಂಚವೂ ವ್ಯತ್ಯಾಸ ಇಲ್ಲ. ಆದುದರಿಂದ ರಾಮಯ್ಯ ಬರುವುದನ್ನೇ ಕಾದಿರುತ್ತಿದ್ದರು ಗಿರಾಕಿಗಳು. ಮಾರುಕಟ್ಟೆಯ ವ್ಯವಹಾರ ಅರ್ಧಘಂಟೆಯಲ್ಲಿ ಮುಗಿದುಹೋಗುತ್ತಿತ್ತು. ಶೆಟ್ಟರ ಮನೆಗೆ ಹಿಂತಿರುಗಿ ಕೊಂಚಹೊತ್ತು ಯೋಗಕ್ಷೇಮದ ಮಾತನ್ನಾಡಿ ಹಣವನ್ನು, ಸೊಂಟದ ಪಟ್ಟಿಯಲ್ಲಿ ಭದ್ರಪಡಿಸಿ ಊರಿನಕಡೆ ಹೊರಟುಬಿಡುತ್ತಿದ್ದ ರಾಮಯ್ಯ ಸಂಜೆ ಮತ್ತೆ ಬಿಳಿಕೆರೆಯಲ್ಲಿ ಊಟಮುಗಿಸಿ ಸರಿರಾತ್ರಿ ವೇಳೆಗೆ ಮನೆ ತಲುಪಿಬಿಡುತ್ತಿದ್ದು ಬೆಳಕು ಹರಿಯುತ್ತಿದ್ದಂತೆ ದಿನದ ಕಾರ್ಯಕ್ರಮ ಶುರು ಆಗಿಬಿಡುತ್ತಿತ್ತು. ಎಲೆ ಮಾರಿಕೊಂಡು ಬಂದ ದಿನ ರಂಗಮ್ಮ ಬೆಳಿಗ್ಗೆ ಬೇಗ ಎದ್ದು ಸ್ನಾನಕ್ಕೆ ನೀರುಕಾಯಿಸಿ ಗಂಡನಿಗೆ

ತೋಟಕ್ಕೆ ಹೊರಡುವನು. ರಂಗಮ್ಮನೂ ಮಗನನ್ನು ಮಧ್ಯಾಹ್ನದ ಶಾಲೆಗೆ ಕಳುಹಿಸಿ ಗಂಡನೊಡನೆ ಹೊರಡುವಳು. ಗಂಡನ ಕೆಲಸ ಮುಗಿಯುವ ವೇಳೆಗೆ ತಾನು ಹಸುಗಳನ್ನು ಚೆನ್ನಾಗಿ ಮೇಯಿಸಿಕೊಳ್ಳುವಳು. ಸಂಜೆಗೆ ಇಬ್ಬರೂ ಹಸುಗಳೊಡನೆ ಮನೆಗೆ ಹಿಂತಿರುಗುವರು. ಸಂಜೆ ದೀಪ ಹತ್ತಿಸಿ ಮೂವರೂ ಪ್ರಾರ್ಥನೆಮಾಡಿ ಹಸುಗಳಿಗೆ ಹುಲ್ಲುಹಾಕಿ ಊಟಮಾಡಿ ಮಲಗುವರು. ರಾಮಯ್ಯನ ಚಿಕ್ಕ ಸಂಸಾರದ ದಿನಚರಿ ಹೀಗೇ ನಡೆಯುತ್ತಿತ್ತು. ಊರಲ್ಲಿ ಹೆಚ್ಚುಕಡಿಮೆ ಎಲ್ಲ ಮನೆಗಳಲ್ಲೂ ಇದೇ ರೀತಿ ನಡೆಯುತ್ತಿತ್ತು.

ಭಾನುವಾರ ಸೋಮವಾರಗಳಲ್ಲಿ ಮಾತ್ರ ಈ ದಿನಚರಿಯಲ್ಲಿ ಬದಲಾವಣೆ ಆಗುತ್ತಿತ್ತು. ಭಾನುವಾರ ರಾಮಯ್ಯನಿಗೆ ತೋಟದಲ್ಲಿ ವೀಳ್ಯದೆಲೆ ಕೊಯ್ದು ಲೆಕ್ಕಮಾಡಿ ಜೋಡಿಸಿ ಹೊರೆಕಟ್ಟುವ ಕೆಲಸ. ರಾತ್ರಿ ಮಲಗುವ ಹೊತ್ತಿಗೆ ದೊಡ್ಡ ಪಿಂಡಿಮಾಡಿದ ಹೊರೆ ಸಿದ್ಧವಾಗುತ್ತಿತ್ತು. ರಂಗಮ್ಮ ಗಂಡನಿಗೆ ಒಂದು ದಿನಕ್ಕಾಗುವಷ್ಟು ಬುತ್ತಿಗಂಟನ್ನು ಸಿದ್ಧಮಾಡಿಡುತ್ತಿದ್ದಳು. ಸೋಮವಾರ ಕೋಳಿಕೂಗುವ ಮೊದಲೇ ರಾಮಯ್ಯ ಎದ್ದು ಹೊರೆಯನ್ನು ಬುತ್ತಿಗಂಟನ್ನೂ ಹೊತ್ತುಕೊಂಡು ಮೈಸೂರಿಗೆ ಹೊರಡುತ್ತಿದ್ದನು.

ಊರಿಂದ ಬೆಳಗಿನಜಾವ ಮೂರು ಘಂಟೆಗೆ ಹೊರಟವನು ಬೆಳಕು ಹರಿಯುವಹೊತ್ತಿಗೆ ಬಿಳಿಕೆರೆಗೆ ತಲುಪುತ್ತಿದ್ದನು. ಕೆರೆಯಲ್ಲಿ ಮುಖತೊಳೆದು, ಪ್ರಾರ್ಥನೆ, ಉಪಾಹಾರ ಮುಗಿಸುತ್ತಿದ್ದ. ಮತ್ತೆ ಹೊರಟರೆ ಬೆಳಗಿನ ಹತ್ತು ಘಂಟೆವೇಳೆಗೆ ಮೈಸೂರಿಗೆ ಮುಟ್ಟಿಬಿಡುತ್ತಿದ್ದ. ಮೈಸೂರಲ್ಲಿ ಅಗ್ರಹಾರದ ಬೀದಿಯಲ್ಲಿದ್ದ ಚಲುವರಾಯ ಶೆಟ್ಟರು ರಾಮಯ್ಯನ ಮಿತ್ರರು. ರಾಮಯ್ಯನ ತಂದೆ ಶೀನಪ್ಪನವರ ಕಾಲದಿಂದಲೂ ಮೈಸೂರಿನಲ್ಲಿ ಅವರ ಮನೆಯಲ್ಲೇ ಉಳಿಯುತ್ತಿದ್ದುದು ವಾಡಿಕೆ. ರಾಮಯ್ಯ ನೇರವಾಗಿ ಅವರ ಮನೆಗೆ ಹೋಗಿ ಹೊರೆ ಇಳಿಸುತ್ತಿದ್ದ, ಬಾವಿಯಲ್ಲಿ ನೀರುಸೇದಿ ಸ್ನಾನ ಮಾಡುತ್ತಿದ್ದ, ಬುತ್ತಿಯ ಊಟ ಮುಗಿಸಿ ವೀಳ್ಯದೆಲೆ ಹೊರೆಹೊತ್ತುಕೊಂಡುಹೋಗಿ ಮಾರಿಬಿಡುತ್ತಿದ್ದ. ರಾಮಯ್ಯನ ಎಲೆಗೆ ವರ್ತನೆ ಗಿರಾಕಿ ಇರುತ್ತಿದ್ದರು. ಇವನ ತೋಟದ ಎಲೆ ಬಹಳ ಪ್ರಸಿದ್ಧವಾಗಿತ್ತು. ಮೃದುವಾದ ಬಿಳಿಎಲೆ, ಅಗಲವಾಗಿರುತ್ತಿತ್ತು. ಲೆಕ್ಕದಲ್ಲಿ ಕೊಂಚವೂ ವ್ಯತ್ಯಾಸ ಇಲ್ಲ. ಆದುದರಿಂದ ರಾಮಯ್ಯ ಬರುವುದನ್ನೇ ಕಾದಿರುತ್ತಿದ್ದರು ಗಿರಾಕಿಗಳು. ಮಾರುಕಟ್ಟೆಯ ವ್ಯವಹಾರ ಅರ್ಧಘಂಟೆಯಲ್ಲಿ ಮುಗಿದುಹೋಗುತ್ತಿತ್ತು. ಶೆಟ್ಟರ ಮನೆಗೆ ಹಿಂತಿರುಗಿ ಕೊಂಚಹೊತ್ತು ಯೋಗಕ್ಷೇಮದ ಮಾತನ್ನಾಡಿ ಹಣವನ್ನು ಸೊಂಟದ ಪಟ್ಟಿಯಲ್ಲಿ ಭದ್ರಪಡಿಸಿ ಊರಿನಕಡೆ ಹೊರಟುಬಿಡುತ್ತಿದ್ದ ರಾಮಯ್ಯ ಸಂಜೆ ಮತ್ತೆ ಬಿಳಿಕೆರೆಯಲ್ಲಿ ಊಟಮುಗಿಸಿ ಸರಿರಾತ್ರಿ ವೇಳೆಗೆ ಮನೆ ತಲುಪಿಬಿಡುತ್ತಿದ್ದ. ಬೆಳಕು ಹರಿಯುತ್ತಿದ್ದಂತೆ ದಿನದ ಕಾರ್ಯಕ್ರಮ ಶುರು ಆಗಿಬಿಡುತ್ತಿತ್ತು. ಎಲೆ ಮಾರಿಕೊಂಡು ಬಂದ ದಿನ ರಂಗಮ್ಮ ಬೆಳಗ್ಗೆ ಬೇಗ ಎದ್ದು ಸ್ನಾನಕ್ಕೆ ನೀರುಕಾಯಿಸಿ ಗಂಡನಿಗೆ

ಮೈತಲೆಗೆಲ್ಲಾ ಎಣ್ಣೆ ಒತ್ತಿ ನೀರೆರೆಯುವಳು. ಅಂದು ಮಧ್ಯಾಹ್ನಕ್ಕೆ ಪಾಯಸದೂಟ ತಪ್ಪುತ್ತಿರಲಿಲ್ಲ. ಹೀಗೆ ಈ ದಂಪತಿಗಳ ಜೀವನ ನೆಮ್ಮದಿಯಿಂದ ಸಾಗಿತ್ತು. ನವರಾತ್ರಿ ಸಮಯದಲ್ಲಿ ಮೈಸೂರಲ್ಲಿ ವೀಳ್ಯದೆಲೆಗೆ ತುಂಬಾ ಗಿರಾಕಿ. ಆದ್ದರಿಂದ ನವರಾತ್ರಿ ಇನ್ನೂ ಎರಡು ತಿಂಗಳಿರುವಾಗಲೇ ಎಲೆ ತೋಟದವರೆಲ್ಲ ಎಲೆಗಿಡದ ಬುಡಕ್ಕೆ ಅಗೆತಮಾಡಿ, ಗೊಬ್ಬರಹಾಕಿ ನೀರು ತಪ್ಪದೆ ಹಾಕುತ್ತಿದ್ದರು. ಹೀಗಾಗಿ ನವರಾತ್ರಿ ಎಂದರೆ ಎಲೆತೋಟದವರಿಗೆ ಸುಗ್ಗಿಕಾಲ ಇದ್ದಂತೆ.

ಒಂದು ಸಲ ರಾಮಯ್ಯ ಮಹಾನವಮಿ ಹಬ್ಬದ ದಿನ ಮನೆಯಲ್ಲಿ ಹಬ್ಬದ ಊಟ ಮುಗಿಸಿಕೊಂಡವನೆ ವೀಳ್ಯದ ಎಲೆ ಪಿಂಡಿಯನ್ನು ಹೊತ್ತುಕೊಂಡು ಮೈಸೂರು ಕಡೆಗೆ ಹೊರಟನು. ಮಾರನೆಯ ದಿನ ವಿಜಯದಶಮಿ. ಮಾರುಕಟ್ಟೆಗೆ ರಾಮಯ್ಯ ಹೋಗುತ್ತಿದ್ದಂತೆಯೇ ಒಂದೇ ಕ್ಷಣದಲ್ಲಿ ಅವನ ಎಲ್ಲ ಎಲೆ ಮಾರಾಟವಾಯಿತು. ಒಳ್ಳೆಯ ಬೆಲೆಯೂ ಸಿಕ್ಕಿತು. ರಾಮಯ್ಯ ಊರಿಗೆ ಹೊರಟುನಿಂತ. ಆಗ ಶೆಟ್ಟರು 'ರಾಮಯ್ಯನವರೇ, ಇಂದು ಅರಮನೆಯ ಮುಂದೆ ಕುಸ್ತಿ ಪಂದ್ಯ ಇದೆ. ನಮ್ಮ ರಾಜ್ಯದ ಪ್ರಸಿದ್ಧ ಜಟ್ಟಿ ಸಂಗಣ್ಣನಿಗೂ ಪಕ್ಕದ ಹೈದರಾಬಾದ್ ಜೆಟ್ಟಿ ಭರಮಣ್ಣನಿಗೂ ಜಂಗಿ ಕುಸ್ತಿ ಇದೆ. ನೋಡಿಕೊಂಡು ಹೋಗಿ' ಎಂದರು. ರಾಮಯ್ಯ 'ಇಲ್ಲ ಶೆಟ್ಟರೇ, ಊರಿಗೆ ಹೋಗಲು ತಡ ಆಗುತ್ತದೆ. ಮನೆಯಲ್ಲಿ ರಂಗಮ್ಮ ಗಾಬರಿ ಆಗುತ್ತಾರೆ. ಹಬ್ಬ ಬೇರೆ, ಹೊರಡುತ್ತೇನೆ' ಎಂದರು. ಆದರೂ ಶೆಟ್ಟರು ತುಂಬಾ ಒತ್ತಾಯ ಮಾಡಿದರು. ಅವರ ಮಾತನ್ನು ಮೀರಲಾರದೇ ಉಳಿದುಕೊಂಡರು ರಾಮಯ್ಯ. ಶೆಟ್ಟರ ಮನೆಯಲ್ಲಿಯೇ ಹಬ್ಬದೂಟ ಆಯಿತು. ಸಂಜೆಗೆ ಇಬ್ಬರೂ ಕೂಡಿ ಅರಮನೆ ಮುಂದೆ ಕುಸ್ತಿ ನೋಡಲು ಹೋದರು.

ಚಲುವರಾಯಶೆಟ್ಟರು ಅರಮನೆಯ ಉಗ್ರಾಣಕ್ಕೆ ಸಾಮಾನು ಒದಗಿಸುತ್ತಿದ್ದರು.ಆದುದರಿಂದ ಅವರಿಗೆ ನವರಾತ್ರಿ ಉತ್ಸವಗಳಿಗೆ ವಿಶೇಷ ಪಾಸ್ ಸಿಕ್ಕಿತ್ತು. ಅವರು ಮಹಾರಾಜರ ಸಮೀಪದಲ್ಲಿ ಗಣ್ಯರ ಸಾಲಿನಲ್ಲಿ ಕೂರಬಹುದಾಗಿತ್ತು. ಆದರೂ ಆ ದಿನ ರಾಮಯ್ಯನನ್ನು ತಾವೇ ಒತ್ತಾಯಮಾಡಿ ಉಳಿಸಿಕೊಂಡು ಜತೆಯಲ್ಲಿ ಕರೆತಂದಿದ್ದುದರಿಂದ ಅವರೊಡನೆ ಮೈದಾನದಲ್ಲೇ ನಿಂತುಕೊಂಡೇ ಕುಸ್ತಿ ನೋಡುತ್ತಿದ್ದರು.

ಆ ದಿನ ಎಂಟು ಜೊತೆ ಕುಸ್ತಿಗಳಿದ್ದವು. ಕೊನೆಯ ಜೋಡಿ ಬಹಳ ಮುಖ್ಯವಾದದ್ದು, ಮೈಸೂರುಸಂಸ್ಥಾನದ ಹಿರಿಯಜಟ್ಟಿ ಸಂಗಣ್ಣನಿಗೂ ಹೈದರಾಬಾದಿನ ಜಟ್ಟಿ ಭರಮಪ್ಪನಿಗೂ ನಡೆಯಲಿದ್ದ ಜಂಗೀ ಕುಸ್ತಿ. ಎಲ್ಲರೂ ಅದನ್ನು ಬಹಳ ಕಾತುರದಿಂದ ಎದುರುನೋಡುತ್ತಿದ್ದರು. ಇಬ್ಬರೂ ಕಟ್ಟುಮಸ್ತಾದ ಶರೀರದವರು. ಎದುರಿಗೆ ಸಿಂಹಾಸನದ ಮೇಲೆ ಕುಳಿತಿದ್ದ ಮಹಾರಾಜರಿಗೆ ನಮಸ್ಕಾರ ಮಾಡಿ ಕುಸ್ತಿ ಶುರುಮಾಡಿದರು. ಸುಮಾರು ಅರ್ಧಘಂಟೆ ಆದರೂ ಯಾರೂ ಗೆಲ್ಲುವ ಸೂಚನೆ ಇಲ್ಲ. ಯಾರೂ

ಸೋಲುವ ಸೂಚನೆಯೂ ಇಲ್ಲ. ನೋಡುವವರಿಗೆಲ್ಲಾ ಆಶ್ಚರ್ಯ ಅನೇಕ ವರ್ಷಗಳಿಂದ ಇಂತಹ ಕುಸ್ತಿ ನಡೆದಿರಲಿಲ್ಲ. ಮಹಾರಾಜರೂ ಕುತೂಹಲದಿಂದ ಗಮನಿಸುತ್ತಿದ್ದರು. ಕಡೆಗೆ ಜಟ್ಟಿ ಭರಮಪ್ಪ ಸಂಗಣ್ಣನನ್ನು ಕೆಳಕ್ಕೆ ಕೆಡವಿ ಚಿತ್ತುಮಾಡಿಬಿಟ್ಟು ವಿಜಯಿಯಾದನು. ಮಹಾರಾಜರಾದಿಯಾಗಿ ಎಲ್ಲರೂ ಚಪ್ಪಾಳೆ ತಟ್ಟಿ ಭರಮಪ್ಪನಿಗೆ ಜಯಕಾರ ಮಾಡಿದರು. ಸಂಗಣ್ಣ ಭರಮಪ್ಪನ ಕಾಲುಮುಟ್ಟಿ ನಮಸ್ಕಾರಮಾಡಿ ಅಖಾಡದಿಂದ ಹೊರನಡೆದನು.

ಮಹಾರಾಜರಿಗೆ ಮಾತ್ರ ಮುಖ ಕೊಂಚ ಕಿರಿದಾಯಿತು. ನಮ್ಮ ರಾಜ್ಯದ ಗೌರವ ಕೊಚ್ಚಿಹೋಯಿತಲ್ಲ ಎಂದು ವ್ಯಥೆ ಆಯಿತು. ಆಗ ವಿಜಯದ ಅಟ್ಟಹಾಸದಲ್ಲಿದ್ದ ಜಟ್ಟಿ ಭರಮಪ್ಪ ಬೇರೆ ಯಾರಾದರೂ ಕುಸ್ತಿಪಟುಗಳಿದ್ದರೆ ಅವರೊಡನೆ ಇದೇ ಅಖಾಡಾದಲ್ಲಿ ಈಗಲೇ ಕುಸ್ತಿಮಾಡಲು ನಾನು ಸಿದ್ಧ ಎಂದು ಸವಾಲೆಸೆದು ನಿಂತ. ಈ ಸವಾಲಿನ ಮಾತುಗಳನ್ನು ಕೇಳಿದಮೇಲಂತೂ ಎಲ್ಲರ ಮುಖಗಳೂ ಮಂಕಾದವು. ಮಹಾರಾಜರಿಗಂತೂ ತುಂಬಾ ಚಿಂತೆ ಆಯಿತು. ಜಟ್ಟಿ ಸಂಗಣ್ಣನಿಗೆ ಮತ್ತೊಮ್ಮೆ ಪ್ರಯತ್ನಿಸಿ ನೋಡಲೋ ಎನ್ನಿಸಿತು. ಆದರೆ ಧೈರ್ಯಸಾಲದೇ ಸುಮ್ಮನಾದ.

ಆಗ ರಾಮಯ್ಯ ಶೆಟ್ಟರ ಕಿವಿಯಲ್ಲಿ ಏನೋ ಹೇಳಿದ. ಶೆಟ್ಟರು, "ಮಹಾಮಹಾ ಜಟ್ಟಿಗಳೇ ಸುಮ್ಮನೆ ಕುಳಿತ್ತಿದ್ದಾರೆ. ಅಂತಹುದರಲ್ಲಿ ನಿಮಗ್ಯಾಕೆ ರಾಮಯ್ಯ ಈ ಹುಚ್ಚು ಉಸಾಬರಿ, ಸುಮ್ಮನಿರಿ" ಎಂದರು. ರಾಮಯ್ಯ 'ನೀವೊಮ್ಮೆ ಮಹಾರಾಜರನ್ನು ಕೇಳಿನೋಡಿರಿ. ಇದು ನಮ್ಮ ರಾಜ್ಯದ ಮರ್ಯಾದೆಯ ಪ್ರಶ್ನೆ ಅಲ್ಲವೇ? ನಾನೊಮ್ಮೆ ಪ್ರಯತ್ನಮಾಡಿ ನೋಡಿಯೇಬಿಡುತ್ತೇನೆ' ಎಂದನು. ಶೆಟ್ಟರಿಗೆ ಕೊಂಚವೂ ಇಷ್ಟವಾಗಲಿಲ್ಲ. ಆದರೂ ರಾಮಯ್ಯನವರ ಒತ್ತಾಯಕ್ಕೆ ಮಣಿದು ಮಹಾರಾಜರ ಬಳಿ ಹೋಗಿ 'ಬಸವಾಪಟ್ಟಣದ ಒಬ್ಬ ರೈತಮಿತ್ರರು ಭರಮಪ್ಪನೊಡನೆ ಕುಸ್ತಿಮಾಡಿ ನೋಡುತ್ತೇನೆ ಎನ್ನುತ್ತಿದ್ದಾರೆ' ಎಂದರು. ರಾಜ್ಯದ ಮರ್ಯಾದೆ ಹೋಯಿತಲ್ಲ ಎಂದು ದುಃಖ ಪಡುತ್ತಿದ್ದ ಮಹಾರಾಜರು ತಕ್ಷಣ ಒಪ್ಪಿಗೆ ಕೊಟ್ಟೇಬಿಟ್ಟರು. ಶೆಟ್ಟರು ಬಂದು ರಾಮಯ್ಯನಿಗೆ ಮಹಾರಾಜರ ಒಪ್ಪಿಗೆ ತಿಳಿಸಿದರು.

ಒಡನೆ ರಾಮಯ್ಯ ತೊಟ್ಟಿದ್ದ ಅಂಗಿಯನ್ನೂ, ಹೊದ್ದಿದ್ದ ವಸ್ತ್ರವನ್ನೂ ತೆಗೆದು ಶೆಟ್ಟರ ಕೈಗಿತ್ತ. ಉಟ್ಟಿದ್ದ ಪಂಚೆಯನ್ನೇ ಕಾಚದಂತೆ ಕಟ್ಟಿಕೊಂಡು ಮನದಲ್ಲೇ ಮನೆದೇವರಾದ ಲಕ್ಷ್ಮೀಜನಾರ್ದನನಿಗೆ ವಂದಿಸಿ, ಮಹಾರಾಜರಿಗೆ ನಮಸ್ಕಾರ ಮಾಡಿ ಅಖಾಡಕ್ಕೆ ಇಳಿದೇಬಿಟ್ಟರು. ನೆರೆದ ಜನರೆಲ್ಲ ಆಶ್ಚರ್ಯದಿಂದ ನೋಡತೊಡಗಿದರು. ಮಹಾರಾಜರೂ ರಾಮಯ್ಯನಿಗೆ ಜಯವಾಗಲಿ ಎಂದು ದೇವಿ ಚಾಮುಂಡಾಂಬೆಯನ್ನು ಪ್ರಾರ್ಥಿಸಿದರು.

ಭರಮಪ್ಪ ಮಾತ್ರ ಇವನ್ಯಾರೋ ಹಳ್ಳಿಗುಗ್ಗು, ಇವನೊಡನೆ ಎಂಥ ಕುಸ್ತಿ ಎಂದು ತಿರಸ್ಕಾರದಿಂದ ನೋಡಿದ. ಆದರೂ ಮಹಾರಾಜರ ಅಪ್ಪಣೆ ಎಂದಮೇಲೆ ವಿಧಿಇಲ್ಲದೆ

ಕುಸ್ತಿ ಆಡಿಯೇ ತೀರಬೇಕು ಎಂದು ಬೇಸರ ತಿರಸ್ಕಾರಗಳಿಂದಲೇ ಅಖಾಡಕ್ಕೆ ಇಳಿದ. ಐದಾರು ನಿಮಿಷಗಳು ಬಹಳ ಆತಂಕದಲ್ಲೇ ಕಳೆದವು, ಭರಮಪ್ಪ ಎಂದುಕೊಂಡಷ್ಟು ಸುಲಭದಲ್ಲಿ ರಾಮಯ್ಯನನ್ನು ಗೆಲ್ಲಲಾಗಲಿಲ್ಲ. ಹತ್ತು ನಿಮಿಷ ಕಳೆಯಿತು. ಎಲ್ಲರ ಕುತೂಹಲವೂ ಹೆಚ್ಚಿತು. ಎಲ್ಲರ ಕಣ್ಣೂ ಅಖಾಡದ ಕಡೆಗೇ ನೆಟ್ಟವು. ಇದ್ದಕ್ಕಿದ್ದಂತೆ ರಾಮಯ್ಯ ಭರಮಪ್ಪನನ್ನು ಕೆಳಕ್ಕೆ ಕೆಡವಿ ಚಿತ್ತುಮಾಡಿಯೇ ಬಿಟ್ಟನು. ಓಡನೆಯೇ ಮಹಾರಾಜರಿಗೆ ಕೈಮುಗಿದು ಶೆಟ್ಟರಿಂದ ಬಟ್ಟೆ ಪಡೆದು ಹಾಕಿಕೊಂಡು ಹೊರಟೇಬಿಟ್ಟರು ರಾಮಯ್ಯ.

ಮಹಾರಾಜರು ರಾಜ್ಯದ ಮರ್ಯಾದೆ ಉಳಿಸಿದ ಮಹಾವ್ಯಕ್ತಿಯನ್ನು ಕರೆದು ಸಭೆಯಲ್ಲಿ ಗೌರವಿಸಲು ಕಾದಿದ್ದರು. ಆದರೆ ಎಲ್ಲೆಲ್ಲಿ ಹುಡುಕಿದರೂ ರಾಮಯ್ಯ ಪತ್ತೆಯೇ ಆಗಲಿಲ್ಲ. ಚಲುವರಾಯಶೆಟ್ಟಿಗೆ ಹೇಳಿಕಳುಹಿಸಿದರು. ಅವರು ತಮ್ಮ ಮಿತ್ರ ಬಸವಾಪಟ್ಟಣದ ರಾಮಯ್ಯ ಎಂದೂ ಅವರು ಎಂದೂ ಗರಡಿ ಮಾಡಿದವರಲ್ಲ, ಕುಸ್ತಿ ಆಡಿದವರಲ್ಲ; ರಾಜ್ಯದ ಮರ್ಯಾದೆ ಹೋಗುತ್ತದಲ್ಲಾ ಎಂದು ಈ ದಿನ ಕುಸ್ತಿಗೆ ಇಳಿದರು. ಸನ್ಮಾನ ಗೌರವಗಳಿಗೆ ಮನಸ್ಸಿಲ್ಲದೆ ಹೊರಟುಹೋಗಿರಬೇಕು. ಮನೆ ಯಲ್ಲಿದ್ದರೆ ಕರೆತರುತ್ತೇನೆ ಎಂದು ಹೇಳಿ ಮನೆಕಡೆ ಹೊರಟರು. ಕೆಲವೇ ನಿಮಿಷಗಳಲ್ಲಿ ಶೆಟ್ಟರು ಸಭೆಗೆ ಹಿಂತಿರುಗಿದರು. ರಾಮಯ್ಯ ಆಗಲೇ ತಮ್ಮ ಮನೆಯಿಂದ ಊರಿಗೆ ಹೊರಟುಹೋಗಿರುವುದಾಗಿ ತಿಳಿಸಿದರು. ಮುಂದಿನವಾರ ಎಲೆ ಮಾರಲು ಬಂದಾಗ ಹೇಗಾದರೂ ಮಾಡಿ ಭೇಟಿ ಮಾಡಿಸುವುದಾಗಿ ಮಹಾರಾಜರ ಬಳಿಗೆ ತಿಳಿಸಿದರು.

ಮಹಾರಾಜರು ಸಭೆಯನ್ನುದ್ದೇಶಿಸಿ 'ನಮ್ಮ ರಾಜ್ಯದ ಒಬ್ಬ ಸಾಧಾರಣ ರೈತ ರಾಮಯ್ಯ ಇಂದು ನೆರೆರಾಜ್ಯದ ಹಿರಿಯ ಜಟ್ಟಿ ಭರಮಪ್ಪನವರನ್ನು ಕುಸ್ತಿಯಲ್ಲಿ ಗೆದ್ದಿರುವುದು ನಮಗೆ ತುಂಬಾ ಹೆಮ್ಮೆಯನ್ನು ಉಂಟುಮಾಡಿದೆ. ಭರಮಪ್ಪನೂ ಶ್ರೇಷ್ಠ ಜಟ್ಟಿ, ಆದುದರಿಂದ ರಾಮಯ್ಯ ಹಾಗೂ ಭರಮಪ್ಪ ಇಬ್ಬರನ್ನೂ ಆಸ್ಥಾನದ ಪರವಾಗಿ ಗೌರವಿಸುತ್ತಿದ್ದೇವೆ. ರಾಮಯ್ಯ ಕುಸ್ತಿಯಲ್ಲಿ ಗೆದ್ದ ಒಡನೆ ನಿಲ್ಲದೆ ಊರಿಗೆ ಹೊರಟು ಹೋಗಿದ್ದಾರೆ. ಆದುದರಿಂದ ಅವರಿಗೆ ಸಲ್ಲಬೇಕಾದ ಗೌರವವನ್ನು ಅವರ ಮಿತ್ರರೂ, ನಮ್ಮ ಸ್ನೇಹಿತರೂ ಆದ ಚಲುವರಾಯಶೆಟ್ಟರ ಕೈಲಿ ಕೊಡುತ್ತಿದ್ದೇವೆ. ದೇವಿ ಚಾಮುಂಡಾಂಬೆ ಅವರಿಗೆ ಸನ್ಮಂಗಳವನ್ನುಂಟುಮಾಡಲಿ' ಎಂದು ಹೇಳಿ ಹಣದ ಥೈಲಿಯನ್ನೂ ಒಂದು ಚಿನ್ನದ ಉಂಗುರವನ್ನೂ ಶೆಟ್ಟರ ಕೈಗೆ ಕೊಟ್ಟರು. ಸಭೆ ಮಹಾರಾಜರಿಗೂ ರಾಮಯ್ಯನಿಗೂ ಜೈಕಾರ ಹಾಕಿತು.

ಭರಮಪ್ಪನಿಗೆ ಮಹಾರಾಜರ ಹಣದ ಥೈಲಿ ಮಾತ್ರ ದೊರೆಯಿತು. ಅವನಿಗೆ ತುಂಬಾ ಅವಮಾನ ಅದಂತಾಯಿತು. ಮೈಸೂರು ರಾಜ್ಯಕ್ಕೆ ಬಂದು ಇಲ್ಲಿನ ಹಿರಿಯ ಜಟ್ಟಿಗಳನ್ನೆಲ್ಲ ಗೆದ್ದು ಒಬ್ಬ ಸಾಧಾರಣ ರೈತನ ಕೈಲಿ ಸೋಲನುಭವಿಸಿದೆನಲ್ಲ ಎಂದು

ಕೊರಗುಹತ್ತಿತು. ಭರಮಪ್ಪ ಹೈದರಾಬಾದಿನಿಂದ ಹೊರಡುವಾಗ ಆರು ಜನ ಮಿತ್ರರೊಂದಿಗೆ ಬಂದಿದ್ದ.ಅವರೆಲ್ಲ ಪೈಲ್ವಾನರೇ. ಅವರು ರಾಮಯ್ಯ ಗೆದ್ದ ತಕ್ಷಣವೇ ಶೆಟ್ಟರಿಂದ ಅವನು ಬಸವಾಪಟ್ಟಣದವನೆಂದು ತಿಳಿದುಕೊಂಡರು. ಅಲ್ಲಿಗೆ ಹೋಗುವ ಮಾರ್ಗವನ್ನೂ ಕೇಳಿ ತಿಳಿದುಕೊಂಡರು. ಅವರಲ್ಲಿ ಒಬ್ಬ ಮಾತ್ರ ಭರಮಪ್ಪನ ಜತೆಗೆ ಮೈಸೂರಲ್ಲೇ ಉಳಿದ. ಉಳಿದ ಐದು ಜನರೂ ತಕ್ಷಣ ಮಾರುಕಟ್ಟೆಗೆ ಹೋಗಿ ಐದು ಹರಿತವಾದ ಮಚ್ಚುಗತ್ತಿಗಳನ್ನು ಕೊಂಡುಕೊಂಡರು. ಬಸವಾಪಟ್ಟಣದ ದಾರಿಯಲ್ಲಿ ಓಡತೊಡಗಿದರು. ಬಿಳಿಕೆರೆಗೆ ಹೋಗುವ ವೇಳೆಗೆ ರಾತ್ರಿ 12 ಘಂಟೆ ಆಗಿಬಿಟ್ಟಿತ್ತು. ಅಲ್ಲೇ ಕೊಂಚ ಹಣ್ಣು ತಿಂದರು. ಒಂದು ಜಗಲಿಯ ಮೇಲೆ ಮಲಗಿದರು. ಬೆಳಗಿನ ಜಾವ ಬೇಗ ಎದ್ದು ಪ್ರಯಾಣ ಮುಂದುವರೆಸಿದರು. ತುಂಬಾ ದೂರ ಓಡಿದರು. ಆಗ ರಾಮಯ್ಯ ದೂರದಲ್ಲಿ ದಾಪುಗಾಲು ಹಾಕುತ್ತಾಹೋಗುತ್ತಿರುವುದನ್ನು ನೋಡಿದರು. ರಾಮಯ್ಯನ ನಡಿಗೆ ವೇಗ ಇವರ ಓಟವನ್ನೂ ಮೀರಿಸಿತ್ತು. ಇವರೂ ಉಸಿರುಕಟ್ಟಿ ಓಡತೊಡಗಿದರು. ರಾಮಯ್ಯ ಒಂದು ಕಡೆ ರಸ್ತೆ ತಿರುವಿನಲ್ಲಿ ಅಕಸ್ಮಾತ್ ಹಿಂತಿರುಗಿ ನೋಡಿದನು. ಯಾರೋ ಓಡಿಬರುತ್ತಿರುವುದು ಕಾಣಿಸಿತು. ಆಗ ರಾಮಯ್ಯ 'ಯಾರಪ್ಪಾ ಅದು ಯಾವೂರಿನವರೋ ಕತ್ತಲೆಯಸಮಯಬೇರೆ, ಬನ್ನಿ ಜತೆಯಲ್ಲಿ ಹೋಗೋಣ' ಎಂದು ಕರೆದ. ರಾಮಯ್ಯ ತಮ್ಮನ್ನು ಕಂಡಾಗ ಮರಗಳ ಮರೆಗೆ ಹೋಗಲೆತ್ನಿಸಿದ ಜಟ್ಟಿಗಳು ಈಗ ವಿಧಿಯಿಲ್ಲದೆ ಅವನ ಬಳಿಗೆಬಂದರು. ತಾವು ವ್ಯಾಪಾರಸ್ಥರೆಂದೂ, ಹಾಸನಕ್ಕೆ ಹೋಗುತ್ತಿರುವುದಾಗಿಯೂ ಹೇಳಿದರು. ರಾಮಯ್ಯನಿಗೆ ಅವರ ಮಾತಿನಲ್ಲಿ ನಂಬಿಕೆಬರಲಿಲ್ಲ. ಆದರೂ ಅವರ ಜತೆಯಲ್ಲಿ ಮಾತನಾಡುತ್ತ ಹೊರಟ. ರಾಮಯ್ಯನಿಗೂ ತೆಲುಗು ಬರುತ್ತಿತ್ತು. ಆದುದರಿಂದ ಮಾತಿಗೇನೂ ಕಷ್ಟವಾಗಲಿಲ್ಲ.

ಬಸವಾಪಟ್ಟಣ ಸಿಕ್ಕಿಯೇ ಬಿಟ್ಟಿತು. ರಾಮಯ್ಯ ಅವರನ್ನು ತನ್ನ ಮನೆಯಲ್ಲಿ ವಿಶ್ರಮಿಸಿಕೊಂಡು ತಿಂಡಿತಿಂದೇ ಹೋಗಬೇಕೆಂದು ಒತ್ತಾಯಮಾಡಿದ. ಜಟ್ಟಿಗಳು ವಿಧಿಯಿಲ್ಲದೇ ಒಪ್ಪಿ ಅವನ ಮನೆಗೆ ಹೋದರು. ಮಚ್ಚುಗಳನ್ನು ಮಾತ್ರ ಕಾಣದಂತೆ ಬಟ್ಟೆಯೊಳಗೆ ಸುತ್ತಿಟ್ಟು ಮರೆಯಾಗಿಟ್ಟುಕೊಂಡಿದ್ದರು. ರಾಮಯ್ಯ ಹೊಸ ಸ್ನೇಹಿತರಿಗೆ ಮಲಗಿಕೊಳ್ಳಲು ಚಾಪೆದಿಂಬುಗಳನ್ನು ಕೊಟ್ಟು ವಿಶ್ರಮಿಸಿಕೊಳ್ಳಲು ಹೇಳಿದನು. ಹೆಂಡತಿಗೆ ಮೈಸೂರಿನಲ್ಲಿ ನಡೆದುದನ್ನೆಲ್ಲ ಸಂಗ್ರಹವಾಗಿ ಹೇಳಿದ. ಮಿತ್ರರಿಗೆ ತಿಂಡಿ ಮಾಡಿಕೊಡಲು ತಿಳಿಸಿದ. ತಾನು ತೋಟದಲ್ಲಿ ಎಲೆ ಹಂಬುಗಳಿಗೆ ನೀರುಹಾಕಲು ಹೊರಟೇಬಿಟ್ಟ. ಜಟ್ಟಿಗಳಿಗೆ ಚಾಪೆಮೇಲೆ ಮಲಗಿದ್ದೇ ತಡ, ನಿದ್ರೆ ಬಂದೇ ಬಂದುಬಿಟ್ಟಿತು. ರಂಗಮ್ಮ ಅತಿಥಿಗಳಿಗೆಂದು ದೊಡ್ಡ ದೊಡ್ಡದಾಗಿ ರೊಟ್ಟಿ ತಯಾರಿಸಿದಳು. ಇವರು ಇನ್ನೂ ಮಲಗಿಯೇ ಇದ್ದರು. ಎಬ್ಬಿಸಿದರೆ ನಿದ್ರಾಭಂಗ ಆಗುತ್ತದೆ. ಸುಮ್ಮನಿದ್ದರೆ ಹಸಿದವರಿಗೆ ಊಟ ನೀಡದ ಪಾಪ ಬರುತ್ತದೆ. ಗಂಡನ ಮಾತನ್ನೂ ಮೀರಿದ ಅಪರಾಧ ಒಂದು

ಕಡೆ, ರೊಟ್ಟಿ ಆರಿಹೋಗಿ ಅದರ ರುಚಿ ಹೋಗಿಬಿಡುತ್ತದಲ್ಲ ಎಂಬ ಆತಂಕ ಇನ್ನೊಂದುಕಡೆ; ಹೀಗೆಲ್ಲ ಚಿಂತಿಸಿ ಕೊನೆಗೆ ಏನಾದರಾಗಲೀ ಎಂದು ಕೂಗಿ ಎಬ್ಬಿಸಿಯೇ ಬಿಟ್ಟಳು. ಎಲ್ಲರಿಗೂ ಮುಖ ತೊಳೆಯಲು ತಂಬಿಗೆಗಳಲ್ಲಿ ಬಿಸಿನೀರು ತಂದಿಟ್ಟಳು. ಎಲ್ಲರೂ ಎದ್ದು ಕೈಕಾಲುಮುಖ ತೊಳೆದು ತಿಂಡಿ ತಿನ್ನಲು ಕುಳಿತರು. ರಂಗಮ್ಮ ಎಲ್ಲರ ಮುಂದೆಯೋ ದೊಡ್ಡ ದೊಡ್ಡ ಬಾಳೆಎಲೆಗಳಲ್ಲಿ ರೊಟ್ಟಿಗಳನ್ನಿಟ್ಟಳು.ಅದರ ಮೇಲೆ ಚಟ್ನಿಪುಡಿ ಹಾಕಿದಳು. ಎಲ್ಲ ಎಲೆಯ ಪಕ್ಕದಲ್ಲೂ ಮತ್ತೊಂದು ಸೀಳು ಬಾಳೆಎಲೆ ಮೇಲೆ ಹುಚ್ಚೆಳ್ಳು ಇಟ್ಟಳು. ಒಂದೊಂದು ಚೊಂಬು ಸಿಹಿನೀರನ್ನೂ ಇಟ್ಟಳು.ಜಟ್ಟಿಗಳು ಚಟ್ನಿಪುಡಿ ಹಾಕಿಕೊಂಡು ರೊಟ್ಟಿತಿನ್ನತೊಡಗಿದರು. ಹುಚ್ಚೆಳ್ಳನ್ನು ಯಾರೂ ಮುಟ್ಟಲಿಲ್ಲ. ಅದನ್ನು ಕಂಡ ರಂಗಮ್ಮ 'ಏಕಪ್ಪಾ ಚಟ್ನಿಪುಡಿ ಖಾರ. ಅದಕ್ಕೆ ಎಣ್ಣೆ ಹಾಕಿಕೊಂಡು ತಿನ್ನಿ ಎಂದಳು. ಎಣ್ಣೆಯೇ ಇಲ್ಲವಲ್ಲಮ್ಮ ಎಂದ ಒಬ್ಬ ಜಟ್ಟಿ. ಅದಕ್ಕೆ ರಂಗಮ್ಮ 'ಹುಚ್ಚೆಳ್ಳು ಇಟ್ಟಿದೀನಲ್ಲ, ಅದರ ಎಣ್ಣೆ ಹಿಂಡಿಕೊಳ್ಳಿ' ಎಂದಳು. ಆ ಮಾತನ್ನು ಕೇಳಿದ ಜಟ್ಟಿಗಳಿಗೆ ಆಶ್ಚರ್ಯವೂ ಗಾಬರಿಯೂ ಆಯಿತು. ಹೇಗಾದರಾಗಲೀ ನೋಡಿಬಿಡೋಣ ಎಂದು ಒಬ್ಬೊಬ್ಬರೂ ಒಂದೊಂದು ಹಿಡಿ ಹುಚ್ಚೆಳ್ಳು ತೆಗೆದುಕೊಂಡು ಎಣ್ಣೆ ಹಿಂಡಲು ಯತ್ನಿಸಿದರು. ಕೈಗಳಿಗೆ ಹುಚ್ಚೆಳ್ಳು ಚುಚ್ಚಿತೇ ಹೊರತು ಒಂದು ತೊಟ್ಟು ಎಣ್ಣೆಯೂ ಬರಲಿಲ್ಲ. ಒಬ್ಬರ ಮುಖವನ್ನು ಮತ್ತೊಬ್ಬರು ನೋಡಿಕೊಂಡರು. ಕೊನೆಗೆ ಒಬ್ಬ ಜಟ್ಟಿ ಧೈರ್ಯಮಾಡಿ 'ಅಮ್ಮ ಇದರಲ್ಲಿ ಎಣ್ಣೆ ಬರುವುದಿಲ್ಲ. ಕೊಂಚ ಎಣ್ಣೆ ಇದ್ದರೆ ಹಾಕಿಬಿಡಿ' ಎಂದ. ಆಗ ರಂಗಮ್ಮ ಒಬ್ಬನ ಎಲೆ ಮುಂದೆ ಕುಳಿತು ಕೈಯಲ್ಲಿ ಹುಚ್ಚೆಳ್ಳು ತೆಗೆದುಕೊಂಡು ಆ ಎಲೆಯಲ್ಲಿಟ್ಟಿದ್ದ ಚಟ್ನಿಪುಡಿ ಮೇಲೆ ಹಿಂಡಿದಳು. ಎಣ್ಣೆ ಸುರಿಯಿತು. ನಂತರ ಎಲ್ಲ 5 ಜನರಿಗೂ ಎಣ್ಣೆ ಹಿಂಡಿಕೊಟ್ಟು ಹಿಂಡಿಯನ್ನು ಸೀಳು ಬಾಳೆಎಲೆಗಳ ಮೇಲೆ ಇಟ್ಟು ಊಟಮಾಡಿ ಎಂದಳು. ಎಲ್ಲರಿಗೂ ಆಶ್ಚರ್ಯ. ಎಲ್ಲರ ಮುಖಗಳೂ ಸಪ್ಪಗಾದವು. ಅಂತೂ ಇಂತೂ ರೊಟ್ಟಿ ತಿಂದು ಕೈತೊಳೆದುಕೊಂಡರು. ಕೊಂಚ ಸುತ್ತಾಡಿಕೊಂಡು ಬರುವುದಾಗಿ ಹೇಳಿ ಮನೆಯಿಂದ ಹೊರಬಿದ್ದರು.

ಊರಲ್ಲಿ ವಿಚಾರಿಸಿಕೊಂಡು ರಾಮಯ್ಯನ ತೋಟದ ಕಡೆ ಹೊರಟರು. ದಾರಿಯಲ್ಲಿ ಅವರು ಈ ರಾಜ್ಯದ ಜನ ಸಾಮಾನ್ಯರಲ್ಲ, ತುಂಬಾ ಶಕ್ತಿಶಾಲಿಗಳು. ಪೈಲ್ವಾನರಾದ ನಮಗೇ ಒಂದು ತೊಟ್ಟು ಎಣ್ಣೆ ಹಿಂಡಲಾಗಲಿಲ್ಲ. ಕೈಎಲ್ಲಾ ಇನ್ನೂ ಉರಿಯುತ್ತಿದೆ ಆ ತಾಯಿ ಎಷ್ಟು ಸಲೀಸಾಗಿ ಎಣ್ಣೆ ಹಿಂಡಿಬಿಟ್ಟಳಲ್ಲಾ! ಇವರ ತಂಟೆಯೇ ನಮಗೆ ಬೇಡ. ನಾವು ದಾರಿಯಲ್ಲೇ ರಾಮಯ್ಯನನ್ನು ಕಡಿದುಹಾಕಲು ಹೊರಟವರು. ಈಗ ನೋಡಿದರೆ ಈ ಜನ ಒಬ್ಬೊಬ್ಬರೂ ನಮ್ಮ ಗುರು ಭರಮಪ್ಪನವರಿಗಿಂತ ಶಕ್ತಿವಂತರಾಗಿ ಕಾಣುತ್ತಾರೆ. ಆದುದರಿಂದ ರಾಮಯ್ಯನಿಗೆ ಹೇಳಿ ಸುಮ್ಮನೇ ಮೈಸೂರಿಗೆ ಹಿಂತಿರುಗಿ ಹೋಗಿಬಿಡೋಣ ಎಂದು ಮಾತಾಡಿಕೊಂಡರು. ಅಷ್ಟರಲ್ಲೇ ತೋಟ ಸಿಕ್ಕಿತು.

ರಾಮಯ್ಯ ಎರಡು ದಿನಗಳಿಂದ ನೀರಿಲ್ಲದೇ ಬಾಡಿದ್ದ ಎಳೆಹಂಬುಗಳಿಗೆ ತೃಪ್ತಿಯಾಗುವಷ್ಟು ನೀರು ಹಾಕಿ ಬಾವಿಗೆ ಸ್ನಾನಕ್ಕಿಳಿದಿದ್ದ. ರಾತ್ರಿಯೆಲ್ಲ ನಡೆದುಬಂದು ಬೆಳಿಗ್ಗೆ ಅಷ್ಟೊತ್ತಿಗಾಗಲೇ ಒಬ್ಬನೇ ಇಡೀ ತೋಟಕ್ಕೆ ನೀರು ಹೊತ್ತುಹಾಕಿ ಮುಗಿಸಿದ್ದ. ಅದನ್ನು ಕಂಡು ಪೈಲ್ವಾನರುಗಳಿಗೆ ಪರಮಾಶ್ಚರ್ಯವಾಯಿತು. ರಾಮಯ್ಯ ಸ್ನಾನಮುಗಿಸಿ ಪ್ರಾರ್ಥನೆಮಾಡಿ ಅತಿಥಿಗಳ ಹೆಚ್ಚಿನ ಪರಿಚಯ ಮಾಡಿಕೊಳ್ಳಲು ಮಾತಿಗೆ ಶುರುಮಾಡಿದ. ಆಗ ಅವರು ಸರಳ ಸ್ವಭಾವದ, ಕಷ್ಟಜೀವಿ ರಾಮಯ್ಯನಿಂದ ಏನನ್ನೂ ಮುಚ್ಚಿಡದೆ ಎಲ್ಲವನ್ನೂ ಹೇಳಿಬಿಟ್ಟರು. ತಾವು ಭರಮಪ್ಪನ ಅಂಗರಕ್ಷಕರಾಗಿ ಊರಿಂದ ಅವನೊಡನೆ ಬಂದದ್ದು, ಭರಮಪ್ಪ ಕುಸ್ತಿಯಲ್ಲಿ ರಾಮಯ್ಯನಿಂದ ಸೋಲು ಅನುಭವಿಸಿದ್ದು, ಅವಮಾನಿತನಾದ ಅವನ ಮಾತಿನಂತೆ ರಾಮಯ್ಯನನ್ನು ದಾರಿಯಲ್ಲೇ ಕಡಿದುಹಾಕಲು ಮಚ್ಚುಗಳ ಸಹಿತ ಹೊರಟಿದ್ದು; ಬಸವಾಪಟ್ಟಣಕ್ಕೆ ರಾಮಯ್ಯನ ಜತೆಯಲ್ಲಿ ಬಂದದ್ದು, ಮನೆಯಲ್ಲಿ ರಾಮಯ್ಯ ಮತ್ತು ರಂಗಮ್ಮನವರ ಸದ್ಭಾವನೆ, ಶಕ್ತಿಸಾಮರ್ಥ್ಯ, ಆದರದ ಅತಿಥಿಸತ್ಕಾರಗಳನ್ನು ಕಂಡು ಬೆರಗಾದದ್ದು, ತಮ್ಮ ಮನಸ್ಸು ಪರಿವರ್ತನೆ ಆದದ್ದು, ಎಲ್ಲವನ್ನೂ ತಿಳಿಸಿಬಿಟ್ಟರು. ಮೈಸೂರಿಗೆ ಹೋಗಿ ಎಲ್ಲ ವಿಷಯಗಳನ್ನೂ ಭರಮಪ್ಪನಿಗೆ ತಿಳಿಸುವುದಾಗಿಯೂ ಹೇಳಿದರು. ತಮ್ಮಲ್ಲಿದ್ದ ಐದು ಮಚ್ಚುಗಳನ್ನೂ ರಾಮಯ್ಯನ ಕಾಲಿನ ಬಳಿ ಇಟ್ಟು, ಅವನಿಗೆ ಪ್ರಣಾಮಮಾಡಿ ಮೈಸೂರಿನ ಕಡೆಗೆ ಹೊರಟೇಬಿಟ್ಟರು.

ಇತ್ತ ಮೈಸೂರಿನಲ್ಲಿ ಭರಮಪ್ಪ ತನ್ನ ಸಂಗಡಿಗರು ರಾಮಯ್ಯನನ್ನು ದಾರಿಯಲ್ಲೇ ಕೊಂದುಹಾಕಿಬರುತ್ತಾರೆಂದು ಕಾಯುತ್ತಾ ಇದ್ದನು. ಮರುದಿನ ರಾತ್ರಿಗೆ ಐದು ಜನರೂ ಸಪ್ಪೆಮುಖ ಮಾಡಿಕೊಂಡು ಹಿಂತಿರುಗಿದರು. ನಡೆದ ಸಂಗತಿಯನ್ನೆಲ್ಲ ವಿವರವಾಗಿ ತಿಳಿಸಿದರು. ಭರಮಪ್ಪನ ಜಂಭವೆಲ್ಲ ಅಡಗಿಹೋಯಿತು. ರಾತ್ರಿ ಎಲ್ಲರೂ ಚಿಂತಿಸುತ್ತಾ ಉರುಳಿಕೊಂಡರು ಬೆಳಿಗ್ಗೆ ಎದ್ದು ಭರಮಪ್ಪ ಚಲುವರಾಯಶೆಟ್ಟರ ಮನೆಗೆ ಹೋದ. ತಾನು ರಾಮಯ್ಯನನ್ನು ಅಭಿನಂದಿಸಬೇಕೆಂದ. ಅದಕ್ಕಾಗಿ ಅವನ ಭೇಟಿ ಮಾಡಿಸಬೇಕೆಂದು ಕೇಳಿಕೊಂಡ. ಶೆಟ್ಟರು ರಾಮಯ್ಯ ಭಾನುವಾರ ರಾತ್ರಿಗೆ ವೀಳ್ಯದೆಲೆತೆಗೆದುಕೊಂಡು ಬರುತ್ತಾನೆ. ಸೋಮವಾರ ಎಲೆ ಮಾರಾಟವಾದಮೇಲೆ ಮಧ್ಯಾಹ್ನದ ವೇಳೆಗೆ ಅವರನ್ನು ಕಾಣಬಹುದು ಎಂದರು. ಮಹಾರಾಜರೂ ಶೆಟ್ಟರನ್ನು ಕರೆಸಿಕೊಂಡರು. ರಾಮಯ್ಯನನ್ನು ಆಸ್ಥಾನಕ್ಕೆ ಕರೆಸಲೇಬೇಕು. ತಾವು ಅವರನ್ನು ಕಂಡು ಮಾತನಾಡಿ, ಸತ್ಕರಿಸಬೇಕೆಂದು ಹೇಳಿದರು. ಅವರಿಗೂ ಸೋಮವಾರ ರಾಮಯ್ಯನವರನ್ನು ಆಸ್ಥಾನಕ್ಕೆ ಕರೆದುಕೊಂಡು ಬರುವುದಾಗಿ ತಿಳಿಸಿದರು ಶೆಟ್ಟರು. ಆದರೆ ಶೆಟ್ಟರ ಮನಸ್ಸಿನಲ್ಲಿ ಮಾತ್ರ ಗೊಂದಲ ಶುರುವಾಯಿತು. ಬಲಿಷ್ಠ ದೃಷ್ಟಿ ರಾಜದೃಷ್ಟಿ ಎರಡೂ ಬಿದ್ದಿರುವುದರಿಂದ ರಾಮಯ್ಯನಿಗೇನಾದರೂ ಕೇಡು ಸಂಭವಿಸುವುದೋ ಎಂಬ ಭಯ ಅವರನ್ನು ಕಾಡತೊಡಗಿತು. ರಾಮಯ್ಯ ಆಸ್ಥಾನಕ್ಕೆ ಬರಲೊಪ್ಪದಿದ್ದರೆ ಏನು ಮಾಡುವುದೆಂಬ ಅನುಮಾನ ಬೇರೆ.

ಭಾನುವಾರ ರಾತ್ರಿ ಎಂದಿನಂತೆ ಎಲೆಪಿಂಡಿ ಹೊತ್ತುಕೊಂಡು ರಾಮಯ್ಯ ಶೆಟ್ಟರ ಮನೆಗೆ ಬಂದರು. ದೊಡ್ಡ ಎಲೆಪಿಂಡಿಯೊಡನೆ ಒಂದು ಸಣ್ಣಕಟ್ಟು ಬೇರೆ ಇತ್ತು. ಅದೇನೆಂದು ಶೆಟ್ಟರು ಕೇಳಿದರು. ರಾಮಯ್ಯ ಸಂತೋಷದಿಂದ ಅದು ಮಹಾರಾಜರಿಗೆ ನಜರು ಎಂದರು. ಶೆಟ್ಟರಿಗೆ ಧೈರ್ಯವಾಯಿತು. ಸೋಮವಾರ ರಾಮಯ್ಯ ಮಾರುಕಟ್ಟೆಯಲ್ಲಿ ವ್ಯಾಪಾರ ಮುಗಿಸಿಕೊಂಡು ಶೆಟ್ಟರ ಮನೆಗೆ ಬಂದರು. ಭರಮಪ್ಪನವರೂ ಆ ವೇಳೆಗೆ ಶೆಟ್ಟರ ಮನೆಗೆ ಬಂದಿದ್ದರು. ಶೆಟ್ಟರು ಇಬ್ಬರನ್ನೂ ಒಟ್ಟಿಗೆ ಸನ್ನಿಧಾನಕ್ಕೆ ಕರೆದುಕೊಂಡು ಹೊರಟರು. ರಾಮಯ್ಯ ತಾನು ತಂದಿದ್ದ ನಜರಿನ ಕಟ್ಟನ್ನು ಕೈಯಲ್ಲಿ ತೆಗೆದುಕೊಂಡು ಹೋದರು. ಮಹಾರಾಜರ ಮುಂದೆ ಅದನ್ನು ಬಿಚ್ಚಿಟ್ಟು ನಮಸ್ಕರಿಸಿದರು. ಥಳಥಳನೆ ಬೆಳ್ಳಗೆ ಹೊಳೆಯುತ್ತಿದ್ದ ಮೃದುವಾದ ಬುತ್ತಿಚಿಗುರು ಎಲೆ, ಕಳಿ ಅಡಿಕೆ ಇವನ್ನು ನೋಡಿದ ಮಹಾರಾಜರಿಗೆ ಎಲ್ಲಿಲ್ಲದ ಸಂತೋಷ. ಮಹಾರಾಜರಿಗೆ ತಾಂಬೂಲ ಎಂದರೆ ಪಂಚಪ್ರಾಣ. ಅದನ್ನು ಕಂಡದ್ದೇ ಅವರ ಬಾಯಲ್ಲಿ ನೀರೂರಿತು. ಸಭಾಮರ್ಯಾದೆಯನ್ನೂ ಗಮನಿಸದೆ ಅದಕ್ಕೆ ಕೈಹಾಕಿಯೇ ಬಿಟ್ಟರು. ಸುಣ್ಣ ತರಿಸಿಕೊಂಡು ತಾಂಬೂಲ ಹಾಕಿಕೊಂಡೇಬಿಟ್ಟರು. ರಾಮಯ್ಯನಿಗೂ, ಶೆಟ್ಟರಿಗೂ ತುಂಬಾ ಸಂತೋಷವಾಯಿತು. ಮಹಾರಾಜರಿಗಂತೂ ಖುಷಿಯೋ ಖುಷಿ. ಮಹಾರಾಜರು ಭರಮಪ್ಪನ ಕಡೆ ತಿರುಗಿ "ಪೈಲ್ವಾನರೇ, ನಿಮ್ಮ ಶಕ್ತಿ, ಸಾಮರ್ಥ್ಯ, ಕುಸ್ತಿ ವಿದ್ಯೆಗಳು ಮೆಚ್ಚುವಂತಹವೇ. ನಮ್ಮಲ್ಲೂ ಅನೇಕ ಪೈಲ್ವಾನರಿದ್ದಾರೆ. ಸ್ವತಃ ನಾನೂ ಸಾಮು ಮಾಡಿದವನೇ. ಜೊತೆಗೆ ಆಪತ್ಕಾಲದಲ್ಲಿ ರಾಜ್ಯವನ್ನೂ, ರಾಜ್ಯದ ಗೌರವವನ್ನೂ ಕಾಪಾಡಬಲ್ಲ ರಾಮಯ್ಯನಂತಹ ಹಲವಾರು ಜನ ಇರುವುದು ನಮಗೆ ಹೆಮ್ಮೆಯ ಸಂಗತಿ. ಈ ಸಲದ ನಮ್ಮ ರಾಜ್ಯದ ನವರಾತ್ರಿಯಲ್ಲಿ ನಮಗಾದ ಸಂತೋಷದ ಗುರುತಿಗಾಗಿ ನಿಮ್ಮಿಬ್ಬರಿಗೂ ಈ ಉಡುಗೊರೆ ಕೊಡುತ್ತಿದ್ದೇನೆ ಎಂದು ಹೇಳಿ ಇಬ್ಬರಿಗೂ ಒಂದೊಂದು ಚಿನ್ನದ ಪದಕವನ್ನು ಕೊಟ್ಟು ಗೌರವಿಸಿದರು.

ಭರಮಪ್ಪ, ಮಹಾಸ್ವಾಮಿ, ಇಡೀ ನನ್ನ ಜೀವಮಾನಪೂರ್ತಿ ಗರಡಿ ಸಾಮು ಮಾಡಿದ ಪೈಲ್ವಾನರಿರಲಿ, ನಿಮ್ಮ ರಾಜ್ಯದ ಸಾಧಾರಣ ರೈತರೂ, ಅವರ ಮನೆಯ ಹೆಂಗಸರೂ ತುಂಬಾ ಬಲಶಾಲಿಗಳಾಗಿರುವುದನ್ನು ಕಂಡು ಕೇಳಿ ತುಂಬಾ ಸಂತೋಷವಾಗಿದೆ. ಅದರಲ್ಲೂ ರಾಮಯ್ಯನವರ ಬಗೆಗೆ ತುಂಬಾ ಗೌರವ ಉಂಟಾಗಿದೆ. ಅದರ ಗುರುತಾಗಿ ರಾಮಯ್ಯನವರಿಗೆ ನನ್ನ ಈ ಉಡುಗೊರೆ ಕೊಡುತ್ತಿದ್ದೇನೆ ಎಂದು ಹೇಳಿ, ತನ್ನ ತೋಳಿನಲ್ಲಿದ್ದ ಚಿನ್ನದ ಬಂದಿಯನ್ನು ತೆಗೆದು ರಾಮಯ್ಯನ ತೋಳಿಗೆ ತೊಡಿಸಿ, ಅವರನ್ನು ಅಪ್ಪಿಕೊಂಡು ಗೌರವಿಸಿದನು.ರೈತರ ಮನೆಯ ಹೆಂಗಸರೂ ಸಹ ಎಂದು ಭರಮಪ್ಪ ಹೇಳಿದುದು ಮಹಾರಾಜರ ಗಮನ ಸೆಳೆಯಿತು. ಅದೇನೆಂದು ಭರಮಪ್ಪನನ್ನೇ ಕೇಳಿದರು, ಮಹಾರಾಜರು. ಆಗ ಭರಮಪ್ಪ ಕುಸ್ತಿನಡೆದ ನಂತರ ತನ್ನ

ಶಿಷ್ಯರು ರಾಮಯ್ಯನನ್ನು ಮುಗಿಸಿಬಿಡಲು ಅವನ ಹಿಂದೆ ಹೊರಟಿದ್ದು; ರಾಮಯ್ಯ ಅವರನ್ನು ತನ್ನ ಮನೆಗೇ ಕರೆದುಕೊಂಡು ಹೋಗಿದ್ದು, ಅಲ್ಲಿ ಅವರ ಹೆಂಡತಿ ರಂಗಮ್ಮ ರೊಟ್ಟಿ ಜತೆಗೆ ಅವ್ರಿಗೆ ಹುಚ್ಚೆಳ್ಳು ನೀಡಿದ್ದು; ಅವರಿಗೆ ಅದರಿಂದ ಒಂದು ತೊಟ್ಟು ಎಣ್ಣೆ ಹಿಂಡಿಕೊಳ್ಳಲಾಗದೇ ಇದ್ದದ್ದು, ಆಗ ಆ ತಾಯಿ ಎಲ್ಲರಿಗೂ ತಮ್ಮಕೈಯಿಂದ ಎಣ್ಣೆಹಿಂಡಿಕೊಟ್ಟದ್ದು; ಮೈಸೂರಿಗೆ ಹೊರೆ ಹೊತ್ತುಕೊಂಡು ಬಂದು, ಅದನ್ನು ಮಾರಿದಬಳಿಕ ಕುಸ್ತೀ ಆಡಿ, ತನ್ನನ್ನು ಸೋಲಿಸಿ, ಕಾಲ್ನಡಿಗೆಯಲ್ಲಿಯೇ ಊರಿಗೆ ಹಿಂತಿರುಗಿ, ಒಡನೆ ತೋಟಕ್ಕೆ ಹೋಗಿ ಒಬ್ಬರೇ ಬೆಳಕು ಹರಿಯುವ ಹೊತ್ತಿಗೆ, ಇಡೀ ತೋಟಕ್ಕೆ ನೀರುಕಟ್ಟಿದುದು ಎಲ್ಲವನ್ನೂ ವಿವರವಾಗಿ ಸಭೆಗೆ ತಿಳಿಸಿದನು. ಇಂತಹ ಪ್ರಜೆಗಳನ್ನು ಹೊಂದಿರುವ ನೀವು ಭಾಗ್ಯಶಾಲಿಗಳು. ನಿಮಗೂ, ನಿಮ್ಮ ಪ್ರಜೆಗಳಿಗೂ ಜಯವಾಗಲಿ ಎಂದು ಹೇಳಿ ಮಹಾರಾಜರಿಗೆ ವಂದಿಸಿದರು. ಮಹಾರಾಜರು ಒಡನೆ ಎದ್ದುಬಂದು ತಮ್ಮ ಕೈಗೆ ಧರಿಸಿದ್ದ ತೋಡಬಂದನ್ನು ರಾಮಯ್ಯನಿಗೆ ತೊಡಿಸಿ ಅವರನ್ನು ಅಪ್ಪಿ ಮುದ್ದಾಡಿದರು. ಅವರ ಹೆಂಡತಿಗೆ ರೇಷ್ಮೆ ಸೀರೆ, ಖಣ, ಒಂದು ಜೊತೆ ಚಿನ್ನದ ಬಳೆಯ ಉಡುಗೊರೆ ತರಿಸಿ, ರಾಮಯ್ಯನ ಕೈಗೆ ಕೊಟ್ಟರು. ನಿಮ್ಮಂತಹ ಸತ್ಪ್ರಜೆಗಳೇ ನಮ್ಮ ರಾಜ್ಯದ ನಿಜವಾದ ಆಸ್ತಿ, ದೇವಿ ಚಾಮುಂಡಾಂಬೆ ನಿಮಗೆಲ್ಲ ಒಳ್ಳೆಯದು ಮಾಡಲಿ ಎಂದು ಹರಸಿದರು. ಚಲುವರಾಯಶೆಟ್ಟರಿಗೂ ಯಥಾ ಸೂಕ್ತವಾಗಿ ಉಡುಗೊರೆ ಕೊಟ್ಟು ಎಲ್ಲರನ್ನೂ ಸಂತೋಷದಿಂದ ಬೀಳ್ಕೊಟ್ಟರು.

# ಕಣ್ಮಣಿ

ಒಂದೂರಿನಲ್ಲಿ ನಾಲ್ಕು ಜನ ಹೆಂಗಸರು ನೀರು ತರಲು ಬಟ್ಟೆ ಒಗೆಯಲು ಊರಮುಂದಿನ ಬಾವಿಯ ಬಳಿಗೆ ಹೋಗಿದ್ದರು. ಲೋಕಾಭಿರಾಮವಾಗಿ ಮಾತುಕತೆ ನಡೆದಿತ್ತು. ನಾಲ್ವರೂ ತಮ್ಮ ತಮ್ಮ ಮಕ್ಕಳ ಬಗ್ಗೆ ಹೆಮ್ಮೆಯ ಮಾತುಗಳನ್ನಾಡಿಕೊಂಡು ತಮಗೆ ತಾವೇ ಸಂತೋಷಪಡುತ್ತಿದ್ದರು.

ಒಬ್ಬಾಕೆ ಹೇಳಿದಳು: ನನ್ನ ಮಗ ಕೇವಲ ನನ್ನ ಮಗನೇ ಏಕೆ, ನಮ್ಮೂರಿಗೇ ಕಲಶಪ್ರಾಯನಾದವನು. ಅವನು ಅತ್ಯಂತ ಸುಶ್ರಾವ್ಯವಾಗಿ ಕೊಳಲು ಬಾರಿಸುತ್ತಾನೆ. ಅವನ ವಾದನ ಕೇಳುತ್ತಿದ್ದರೆ ಬೇರೆ ಯಾವ ಕಡೆಗೂ ಗಮನವೇ ಹೋಗುವುದಿಲ್ಲ. ಎಂತೆಂತಹ ಮಹಾ ವಿದ್ವಾಂಸರೂ ಅವನ ಕೊಳಲುವಾದನವನ್ನು ಮೆಚ್ಚಿದ್ದಾರೆ ಎಂದಳು.

ಎರಡನೆಯವಳು ತಕ್ಷಣ ಎದ್ದುನಿಂತು, ನನ್ನ ಮಗ ಅವನ ಓರಗೆಯವರಲ್ಲೆಲ್ಲ ಶಕ್ತಿವಂತ. 15 ವರ್ಷಕ್ಕೇ ಅವನು ದೊಡ್ಡ ಕುಸ್ತಿಪಟು ಆಗಿದ್ದಾನೆ. ಜೊತೆ ಹುಡುಗರೆಲ್ಲ ಅವನನ್ನು ಕಂಡರೆ ಸಾಕು ನಡುಗುತ್ತಾರೆ. ಅವನೇ ನಮ್ಮೂರಿನ ಯುವಕರ ಮುಖಂಡ. ಅಂತಹ ಮಗನ ತಾಯಿ ಆಗಿರುವುದು ನನಗೆ ಅತ್ಯಂತ ಹೆಮ್ಮೆಯ ಸಂಗತಿ ಎಂದಳು.

ಮೂರನೆಯವಳು ನನ್ನ ಮಗ ಓದುವುದರಲ್ಲಿ ತುಂಬ ಚುರುಕು. ಅವನ ತರಗತಿಗೆ ಅವನೆ ಮೊದಲಿಗ. ಅಷ್ಟೇ ಏಕೆ ಒಂದೊಂದು ಸಲ ಅವರ ಉಪಾಧ್ಯಾಯರಿಗೇ ತಿಳಿಯದ ಅನೇಕ ಲೆಕ್ಕಗಳನ್ನು, ಇವನೇ ಬಿಡಿಸಿ ತೋರಿಸಿಕೊಡುತ್ತಾನಂತೆ. ಇದ್ದರೆ

ಇಂತಹ ಸುಪುತ್ರ ಇರಬೇಕು ಎಂದಳು.ಈ ಮೂವರೂ ನಾಲ್ಕನೆಯ ಗೆಳತಿಯತ್ತ ತಿರುಗಿ ನಿಮಗೂ ಒಬ್ಬ ಮಗನಿದ್ದಾನಲ್ಲ. ಅವನ ವಿಷಯ ಹೇಳಿಕೊಳ್ಳುವಂತಹುದು ಏನೂ ಇಲ್ಲವೋ ಎಂದು ಛೇಡಿಸಿದರು. ಅದಕ್ಕುತ್ತರವಾಗಿ ಆಕೆ ನನ್ನ ಮಗನಲ್ಲಿ ಹೊಗಳಿಕೊಳ್ಳುವಂತಹ ವಿಷಯ ಏನೂ ಇಲ್ಲವಮ್ಮ, ಎಲ್ಲ ಮಕ್ಕಳಂತೆ ಅವನೂ ಒಬ್ಬ ಅಷ್ಟೇ ಅಂದಳು.

ಅವರೆಲ್ಲರ ಬಟ್ಟೆ ಒಗೆದಾಯಿತು. ಪಾತ್ರೆ ತೊಳೆದಾಯಿತು. ಇನ್ನೇನು ತಲೆಯಮೇಲೆ ಬಟ್ಟೆ ಕುಕ್ಕೆ, ಕಂಕಳು ಕೈಗಳಲ್ಲಿ ನೀರಿನ ಬಿಂದಿಗೆಗಳನ್ನೆತ್ತಿಕೊಂಡು ಹೊರಡಬೇಕು ಎನ್ನುವಷ್ಟರಲ್ಲಿ ಮೊದಲನೆಯವಳ ಮಗ ಕೊಳಲೂದುತ್ತ ಆ ಕಡೆಯಿಂದ ಬಂದ. ಅವನ ತಾಯಿ ಬಟ್ಟೆಕುಕ್ಕೆಯನ್ನು ತಲೆಯ ಮೇಲಿಟ್ಟುಕೊಂಡಳು. ಬಿಂದಿಗೆ ಎತ್ತಿಕೊಂಡು ಕಂಕುಳಲ್ಲಿಟ್ಟುಕೊಳ್ಳಲು ಕಷ್ಟಪಡುತ್ತಿದ್ದಳು. ತಲೆಯ ಕುಕ್ಕೆ ಅಲ್ಲಾಡತೊಡಗಿತು. ಮಗ ಕಷ್ಟಪಡುತ್ತಾ ಪೇಚಾಡುತ್ತಿದ್ದ ತಾಯಿಯ ಕಡೆ ನೋಡಿ ನಗುತ್ತಾ ಕೊಳಲೂದುತ್ತಾ ಮುಂದೆ ನಡೆದ.

ಎರಡನೆಯವಳು ಅವಳಿಗೆ ಸಹಾಯಮಾಡಿದಳು. ತಾನೂ ಕುಕ್ಕೆ ಹೊತ್ತುಕೊಂಡಳು. ಕಷ್ಟಪಟ್ಟು ಬಿಂದಿಗೆಯನ್ನು ಕಂಕುಳಲ್ಲಿಟ್ಟುಕೊಂಡಳು. ಅಲ್ಲೇ ಪಕ್ಕದ ಮೈದಾನದಲ್ಲಿ ಅವಳಮಗ ವ್ಯಾಯಾಮಮಾಡುತ್ತಿದ್ದ. ಅವನನ್ನು ನೋಡುತಿದ್ದಂತೆಯೇ ಅವರಮ್ಮ ಕಾಲು ತೊಡರಿಕೊಂಡು ಬಿದ್ದುಬಿಟ್ಟಳು. ಕುಕ್ಕೆಯ ಬಟ್ಟೆಯೆಲ್ಲ ಮಣ್ಣಾಯಿತು. ಬಿಂದಿಗೆ ನೀರುಸಹಿತ ಬಿದ್ದುದರಿಂದ ನೀರು ಚೆಲ್ಲಿ ಹೋಯಿತು. ಬಿಂದಿಗೆಯೂ ಕೊಂಚ ತಗ್ಗಿತು. ಅವಳ ಮಗ ಇದನ್ನೆಲ್ಲ ನೋಡಿ ನಗುತ್ತಾ ವ್ಯಾಯಾಮ ಮಾಡುತ್ತಲೇ ಇದ್ದ. ತಾಯಿ ಸಹಾಯಕ್ಕಾಗಿ ಕರೆದರೂ ಗಮನಕೊಡಲಿಲ್ಲ. ಆಕೆ ಮತ್ತೆ ಬಾವಿಯ ಬಳಿ ಹೋಗಿ ನೀರುಸೇದಿ ಸೀರೆಬಟ್ಟೆ ಜಾಲಿಸಿಕೊಂಡು, ಕೊಡ ತೊಳೆದು ನೀರುತುಂಬಿಸಿ ಕೊಂಡಳು. ನಾಲ್ಕನೆಯವಳ ಸಹಾಯದಿಂದ ಹೊರೆ ಹೊತ್ತುಕೊಂಡು ಹೊರಟಳು.

ಮೂರನೆಯವಳದೂ ಅದೇ ಪಾಡಾಯಿತು. ಅವಳು ಹೊರೆ ಹೊತ್ತುಕೊಳ್ಳಲು ತಿಣುಕಾಡುತ್ತಿದ್ದವೇಳೆಗೆ ಸರಿಯಾಗಿ ಅವಳ ಮಗ ಪದ್ಯವೊಂದನ್ನು ಗುಣುಗುಣಿಸುತ್ತಾ ಆಕಡೆ ಬಂದನು. ಅವರಮ್ಮ 'ಮಗೂ, ತಲೆಯಮೇಲೆ ಬಟ್ಟೆಕುಕ್ಕೆ ಇದೆ. ಕಂಕುಳಲ್ಲಿ ಬಿಂದಿಗೆ ಇದೆ. ಆ ಹಗ್ಗದ ಸುರುಳಿಯನ್ನು ಎತ್ತಿ ಬಲಗೈಲಿಕೊಡಪ್ಪ' ಎಂದಳು. ಅವನು ಪದ್ಯದಲ್ಲಿ ತಲ್ಲೀನನಾಗಿದ್ದ. 'ಹೋಗಮ್ಮ, ನನ್ನ ಪದ್ಯದ ಆನಂದವನ್ನೇ ಕೆಡಿಸಿಬಿಟ್ಟೆ' ಎಂದು ರೇಗುತ್ತಾ ಹೊರಟೇಹೋದ. ಅಷ್ಟರಲ್ಲಿ ನಾಲ್ಕನೆಯವಳ ಮಗ ಬಂದ.ತನ್ನ ತಾಯಿಯ ಹಾಗೂ ಆಕೆಯ ಸ್ನೇಹಿತೆಯರ ಕಷ್ಟವನ್ನು ಕಂಡು ಮರುಗಿದ. ಮೂರನೆಯ ಸ್ನೇಹಿತೆಗೆ ಹಗ್ಗದ ಸುರುಳಿಯನ್ನು ತೆಗೆದುಕೈಗಿತ್ತ. ತನ್ನ ತಾಯಿಗೂ ಬಟ್ಟೆಕುಕ್ಕೆ ಹೊರಿಸಿಕೊಟ್ಟ. ನೀರಿನ ಬಿಂದಿಗೆಯನ್ನು ತಾನೇ ಹೊತ್ತುಕೊಂಡ. ಅಷ್ಟಕ್ಕೇ ನಿಲ್ಲದೆ

ಮೂರನೆಯ ಸ್ನೇಹಿತೆಯ ಕೈಯಿಂದ ಹಗ್ಗವನ್ನೂ ತೆಗೆದುಕೊಂಡು ಅವರ ಜೊತೆಗೇ ಮನೆಕಡೆಗೆ ಹೊರಟ. ಇದೆಲ್ಲವನ್ನೂ ಹತ್ತಿರದಲ್ಲೇ ಅಡುಮೇಯಿಸುತ್ತಿದ್ದವಳು ನೋಡುತ್ತಿದ್ದಳು. ಅವಳು ಈ ಎಲ್ಲ ಮಕ್ಕಳಲ್ಲಿ 'ತಾಯಿಗೂ, ಉಳಿದವರಿಗೂ ಕೆಲಸದಲ್ಲಿ ನೆರವಾದ ಈ ಹುಡುಗನೇ ಮಕ್ಕಳ ಕಣ್ಮಣಿ ಎನಿಸುತ್ತದೆ. ಇದ್ದರೆ ಇಂತಹ ಮಕ್ಕಳಿರಬೇಕು. ಶಕ್ತಿ, ಹಾಡು, ವಿದ್ಯೆ ಇದ್ದೂ ಗರ್ವಪಡುತ್ತಾ ತಮ್ಮ ತಾಯಿಯ ಕಷ್ಟಕ್ಕೆ ಕೊಂಚವೂ ಸಹಾಯಮಾಡದ ಮಕ್ಕಳು ಊಟಕ್ಕೆ ದಂಡವೇ ಸರಿ' ಎಂದುಬಿಟ್ಟಳು. ನೆರೆಯವರ ಕಷ್ಟಗಳಲ್ಲಿ ಮರುಗಿ ನೆರವಾಗುವವರು ಮಾತ್ರ 'ಕಣ್ಮಣಿ' ಗಳಾಗಬಲ್ಲರು. ನಾವು ನಮ್ಮ ವ್ಯವಹಾರಗಳಲ್ಲೇ ಮಗ್ನರಾಗಿದ್ದುಕೊಂಡು ಇತರರಿಗೆ ಯಾವ ವಿಧದಲ್ಲೂ ಪ್ರಯೋಜಕರಾಗದಿದ್ದರೆ ನಮ್ಮ ನೈಪುಣ್ಯತೆ ವ್ಯರ್ಥ ಎನಿಸುತ್ತದೆ. ನೆರೆಯವರಿಗೆ ನೆರವಾಗುತ್ತ ನಮ್ಮ ಗುಣಗಳನ್ನೂ, ಕಲೆ ವಿದ್ಯೆಗಳನ್ನೂ ಬೆಳೆಸಿಕೊಂಡಾಗ ಮಾತ್ರ ಅವು ಭೂಷಣಪ್ರಾಯವಾಗುತ್ತವೆ. ಇಲ್ಲದಿದ್ದರೆ ಅಂತಹ ವಿದ್ಯೆ ವ್ಯರ್ಥವೇ ಸರಿ.

# ಮಾಯದ ಟೋಪಿ

ಒಂದು ಊರಿನಲ್ಲಿ ಒಬ್ಬ ಕುಳ್ಳ ಇದ್ದ. ಅವನು ಒಂದು ಮೊಳದಷ್ಟೇ ಉದ್ದ ಇದ್ದ. ಅವನ ಹೆಸರು ನಾಗರಾಜ. ಆದರೆ ಎಲ್ಲರೂ ಅವನನ್ನು 'ಕುಳ್ಳ' ಎಂದೇ ಕರೆಯುತ್ತಿದ್ದರು. ಅವನ ತಂದೆ ಕುಳ್ಳನಿಗೆ ಎರಡು ವರ್ಷ ವಯಸ್ಸಾಗಿದ್ದಾಗಲೇ ಸತ್ತು ಹೋಗಿದ್ದರು, ತಾಯಿ ಕಾಳಮ್ಮ ಮಾತ್ರ ಅವನನ್ನು ತುಂಬಾ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದಳು. ಚಿಕ್ಕವನಾಗಿದ್ದಾಗ ಹುಡುಗರೆಲ್ಲ ಅವನು ಒಂದು ಮೊಳ ಇದ್ದರೂ ಅವನನ್ನು 'ಬೆಟ್ಟುದ್ದ ಕುಳ್ಳ' ಎಂದು ಹಾಸ್ಯ ಮಾಡುತ್ತಿದ್ದರು. ದಾರಿಯಲ್ಲಿ ಓಡಾಡುವಾಗ ಅವನನ್ನು ತಳ್ಳಿಕೊಂಡು ಹೋಗುತ್ತಿದ್ದರು. ಕುಳ್ಳ ಬಿದ್ದುಬಿಟ್ಟಾಗ 'ಹೋ ಬೆಟ್ಟುದ್ದ ಕುಳ್ಳ ಬಿದ್ದ' ಎಂದು ಹೇಳಿಕೊಂಡು ಕೇಕೆ ಹಾಕಿ ನಗುತ್ತಿದ್ದರು. ಕುಳ್ಳನಿಗೆ ಬೀದಿಯ ಹುಡುಗರನ್ನು ಕಂಡರೆ ತುಂಬಾ ಹೆದರಿಕೆ. ಹುಡುಗರ ಗುಂಪು ಕಂಡರಂತೂ ಕುಳ್ಳ ಓಡಿಹೋಗಿ ಮರೆಯಲ್ಲಿ ಅವಿತುಕೊಳ್ಳುತ್ತಿದ್ದ. ಎಷ್ಟೋ ಸಲ ಇವನು ದಾರಿಯಲ್ಲಿ ಹೋಗುತ್ತಿದ್ದಾಗ ಅವರಿವರ ಕಾಲಿಗೆ ಸಿಕ್ಕಿ ಕೆಳಕ್ಕೆ ಬಿದ್ದು ಜೋರಾಗಿ ಅಳುತ್ತಿದ್ದ. ಮಗನ ಈ ಕಷ್ಟವನ್ನು ಕಂಡು ಸಹಿಸಲಾರದೆ ಅವನ ತಾಯಿ ಕಾಳಮ್ಮ ಒಂದು ಉಪಾಯ ಮಾಡಿದಳು. ಅವಳು ಪೇಟೆಗೆ ಹೋಗಿ ಎರಡು ಸಣ್ಣ ಗಂಟೆಗಳನ್ನು ಕೊಂಡುತಂದಳು. ಮಗನ ಎರಡು ಕಿವಿಗಳಿಗೂ ಸೂಜಿಯಿಂದ ತೂತುಮಾಡಿದಳು. ದಾರದಿಂದ ಆ ಗಂಟೆಗಳನ್ನು ಮಗನ ಕಿವಿಗಳಿಗೆ ಕಟ್ಟಿದಳು. ಈಗ ಕುಳ್ಳ ನಡೆಯುವಾಗಲೆಲ್ಲ ಗಂಟೆ 'ಗಣಗಣ' ಸದ್ದುಮಾಡುತ್ತಿತ್ತು. ಅವನು

ದೂರದಲ್ಲಿ ಬರುತ್ತಿದ್ದರೂ ಗಂಟೆಯ ಸದ್ದಿನಿಂದ ಜನರಿಗೆ ತಿಳಿಯುತ್ತಲಿತ್ತು. ಅವನು ಅವರಿವರ ಕಾಲಿಗೆ ಸಿಕ್ಕಿಕೊಂಡು ಬೀಳುವುದು ಕಡಿಮೆ ಆಯಿತು. ಆದರೆ ಜೊತೆ ಹುಡುಗರ ಕೀಟಲೆ ತಪ್ಪಲಿಲ್ಲ. ತಾಯಿ ಕಾಳಮ್ಮ ಅವನನ್ನು ಶಾಲೆಗೆ ಸೇರಿಸಿದಳು. ಶಾಲೆಯ ಹುಡುಗರೆಲ್ಲ ಅವನನ್ನು ತುಂಬಾ ಕೀಟಲೆ ಮಾಡುತ್ತಿದ್ದರು. ತರಗತಿಯಲ್ಲಿ ಹುಡುಗರು ಕುಳ್ಳನ ಕಿವಿಯ ಗಂಟೆಗಳನ್ನು ಅಳ್ಳಾಡಿಸಿ ಸದ್ದು ಮಾಡುತ್ತಿದ್ದರು. ಎಷ್ಟೋ ಸಲ ಕುಳ್ಳ ಹುಡುಗರಿಗೆ ಹೆದರಿ ಬೆಂಚಿನ ಕೆಳಗಡೆ ಅವಿತುಕೊಳ್ಳುತ್ತಿದ್ದ. ಮೇಷ್ಟ್ರಿಗೆ ಮಾತ್ರ ಕುಳ್ಳನ ಮೇಲೆ ತುಂಬಾ ಪ್ರೀತಿ. ಏಕೆಂದರೆ ಅವನು ತುಂಬಾ ಬುದ್ಧಿವಂತನಾಗಿದ್ದ, ನೋಡಲು ಮುದ್ದಾಗಿದ್ದ. ಎಲ್ಲ ಹುಡುಗರ ಮುಂದೆ ಅವನನ್ನು ಮುದ್ದು ಮಾಡಿ ಹೊಗಳುತ್ತಿದ್ದರು. 'ಲೋ ಹುಡುಗರಾ, ನಾಗರಾಜನನ್ನು ಯಾರೂ ಹಾಸ್ಯ ಮಾಡಬೇಡಿ; ಅವನನ್ನು ಯಾರೂ ಗೋಳು ಹುಯ್ದುಕೊಳ್ಳಬೇಡಿ; ಅವನ ತಂಟೆಗೆ ಹೋದರೆ ನಿಮಗೆ ಏಟು ಕೊಡುತ್ತೇನೆ' ಎಂದು ಇತರ ಮಕ್ಕಳಿಗೆ ಎಚ್ಚರಿಸುತ್ತಿದ್ದರು. ಒಂದು ದಿನ ಮೇಷ್ಟರು ಕುಳ್ಳನನ್ನು ಎತ್ತಿ ತಮ್ಮ ಮೇಜಿನಮೇಲೆ ನಿಲ್ಲಿಸಿ ಪಾಠ ಓದಲು ಹೇಳಿದರು. ಆಗ ಹುಡುಗರೆಲ್ಲ 'ಓ ಕುಳ್ಳಾ ಈಗ ನೀನು ಎಷ್ಟು ಉದ್ದ' ಎಂದು ಚಪ್ಪಾಳೆ ತಟ್ಟಿ ಜೋರಾಗಿ ನಕ್ಕುಬಿಟ್ಟರು. ಮೇಷ್ಟ್ರು ಹುಡುಗರನ್ನು ಗದರಿಸಿದರು. ಬೆತ್ತವನ್ನು ಮೇಜಿನ ಹಲಗೆಗೆ ಬಡಿದು ಸದ್ದುಮಾಡಿ ಹೆದರಿಸಿದರು. ಹುಡುಗರು ಹೆದರಿಕೊಂಡು ಸುಮ್ಮನೆ ಕುಳಿತುಕೊಂಡು ಪಾಠ ಕೇಳಿದರು. ಆದರೆ ಒಬ್ಬ ಹುಡುಗ ಧೈರ್ಯದಿಂದ ಎದ್ದುನಿಂತು 'ಸಾರ್, ಈ ದಿನ ಕುಳ್ಳ ನಮಗೆ ಪಾಠ ಮಾಡುತ್ತಾನಾ?' ಎಂದು ಕೇಳಿದನು. ಉಪಾಧ್ಯಾಯರು 'ಕುಳ್ಳ ನಿಮ್ಮೆಲ್ಲರಿಗಿಂತ ಚೆನ್ನಾಗಿ ಓದ್ತಾನೆ. ಗೊತ್ತಾ? ಅವನು ಚೆನ್ನಾಗಿ ಓದಿ ದೊಡ್ಡವನಾದ ಮೇಲೆ ಮಂತ್ರಿ ಆಗ್ತಾನೆ ನೋಡ್ತಾ ಇರಿ' ಎಂದು ನಗುತ್ತಾ ಹೇಳಿ ಅವನನ್ನು ಮೇಜಿನಿಂದ ಕೆಳಕ್ಕೆ ಇಳಿಸಿದರು.

ಕುಳ್ಳನಿಗೆ 20 ವರ್ಷವಾದರೂ ಅವನು ಮೊಳದುದ್ದವೇ ಇದ್ದ. ಅವನ ತಾಯಿ ಅವನನ್ನು ವೈದ್ಯರಿಗೂ ತೋರಿಸಿದಳು. ಔಷಧಿ ಕೊಡಿಸಿದಳು. ಆದರೆ ಅವನು ಉದ್ದ ಮಾತ್ರ ಆಗಲಿಲ್ಲ. ಕುಳ್ಳನಿಗೆ ತಾನು ಉದ್ದವಾಗಿ ಬೆಳೆಯಲಿಲ್ಲವಲ್ಲ ಎಂದು ತುಂಬಾ ದುಃಖವಾಯಿತು. ಶಾಲೆಯಲ್ಲಿ ಚೆನ್ನಾಗಿ ಓದಿ ವಿದ್ಯಾವಂತನಾದ, ಗಡ್ಡ ಮೀಸೆ ಎಲ್ಲ ಬೆಳೆಯಿತು; ಆದರೂ ಅವನು ಮೊಳದುದ್ದವೇ ಇದ್ದ. ಎಲ್ಲರೂ ಅವನನ್ನು ಈಗಲೂ 'ಬೆಟ್ಟುದ್ದ ಕುಳ್ಳ' ಎಂದೇ ಕರೆಯುತ್ತಿದ್ದರು. ಅವನ ತಾಯಿ ಇಟ್ಟಿದ್ದ ಅಂಗಡಿಯಲ್ಲಿ ವ್ಯಾಪಾರವನ್ನು ಮಾಡುತ್ತಿದ್ದ. ಹಣವನ್ನೂ ಸಂಪಾದಿಸಿದ. ಆದರೆ ತಾನು ಎಲ್ಲರಂತೆ ಉದ್ದವಾಗಲಿಲ್ಲವಲ್ಲ ಎಂಬ ಕೊರಗು ಮಾತ್ರ ಹೆಚ್ಚಾಗುತ್ತಲೇ ಬಂತು. ಅವನಿಗೆ ಜೀವನ ತುಂಬಾ ಬೇಸರವಾಯಿತು. ಒಂದು ದಿನ ಅವನು ಬೇಗನೆ ಎದ್ದ. ಅವನ ತಾಯಿ ಬಾವಿಯಿಂದ ನೀರು ತರಲು ಹಿತ್ತಲಿಗೆ ಹೋಗಿದ್ದಳು. ಅವನು ಕಿವಿಯ ಗಂಟೆಯನ್ನು

ಸದ್ದಾಗದಂತೆ ಕೈಯಿಂದ ಹಿಡಿದುಕೊಂಡು ಮೆಲ್ಲಮೆಲ್ಲಗೆ ಹೆಜ್ಜೆ ಹಾಕುತ್ತ ಮನೆಯಿಂದ ಹೊರಟ. ಬೀದಿಯ ಬಾಗಿಲಬಳಿ ಬಂದ. ಬಾಗಿಲು ತೆರೆದೇ ಇತ್ತು. ಬೀದಿಯಲ್ಲಿ ಹೊರಟೇಬಿಟ್ಟ. ಸ್ವಲ್ಪ ದೂರ ಹೋದಮೇಲೆ ಜೋರಾಗಿ ನಡೆದ. ಮುಂದೆ ಅವನು ಓಡುತ್ತಿದ್ದ. ಗಂಟೆ ಸದ್ದು ಗಣಗಣ ಎಂದು ಕೇಳಿಸುತ್ತಿತ್ತು.

ಆ ಊರಿನಲ್ಲಿ ಒಬ್ಬ ದೊಡ್ಡ ಸಾಹುಕಾರನಿದ್ದ. ಅವನಿಗೆ ಬಹಳ ದಿನಗಳವರೆಗೆ ಮಕ್ಕಳೇ ಆಗಿರಲಿಲ್ಲ. ಅನೇಕ ದೇವರುಗಳಿಗೆ ಹರಕೆ ಹೊತ್ತಿದ್ದಾಯಿತು. ಕಡೆಗೆ ಒಂದು ಹೆಣ್ಣುಮಗು ಆಯಿತು. ಆ ಮಗು ಬೆಳೆದು ಹದಿನಾರು ವರ್ಷದ ಸುಂದರಿ ಆಯಿತು. ಅವಳ ಹೆಸರು ಗೌರಿ. ಮನೆಯಲ್ಲಿ ಇನ್ನೂ ಮಲಗಿದ್ದ ಗೌರಿಗೆ ಬೀದಿಯಲ್ಲಿ ಸಣ್ಣ ಗಂಟೆಗಳ ಸದ್ದು ಕೇಳಿಸಿತು. ಸದ್ದು ಇಂಪಾಗಿತ್ತು. ಅದೇನು ಸದ್ದೆಂದು ನೋಡಲು ಗೌರಿ ಮನೆಯಿಂದ ಹೊರಗೆ ಬಂದಳು. ಕುಳ್ಳನನ್ನು ನೋಡಿ ಆಕೆಗೆ ನಗು ತಡೆಯಲಾಗಲಿಲ್ಲ. "ಕುಳ್ಳಾ" ಎಂದು ಕೂಗುತ್ತಾ ಜೋರಾಗಿ ನಗತೊಡಗಿದಳು. ನಗು ಕೇಳಿದ ಕಡೆ ಕುಳ್ಳ ತಿರುಗಿನೋಡಿದ. ಕುಳ್ಳ ಸಿಟ್ಟಿನಿಂದ ಕುದಿಯುತ್ತಿದ್ದ. ಆದರೆ ನಕ್ಕವಳ ಮುಖ ನೋಡಿದ ಕೂಡಲೆ ಅವನ ಸಿಟ್ಟೆಲ್ಲಾಮಾಯವಾಯಿತು.ಅಂತಹ ಸುಂದರಿಯನ್ನು ಅವನು ಅಲ್ಲಿಯ ವರೆಗೆ ನೋಡಿಯೇ ಇರಲಿಲ್ಲ. ಕುಳ್ಳ ಸೀದಾ ಹುಡುಗಿಯ ಹತ್ತಿರಕ್ಕೆ ಹೋಗಿ "ನಿನ್ನ ಹೆಸರೇನು ಚಿನ್ನಾ" ಎಂದು ಹೆದರದೆ ಧೈರ್ಯವಾಗಿ ಕೇಳಿದ. ಸಾಹುಕಾರನ ಮಗಳು ನಗುತ್ತಾ "ನನ್ನ ಹೆಸರು ಗೌರಿ. ನಿನ್ನ ಹೆಸರೇನು. ಕುಳ್ಳ ತಾನೇ?" ಎಂದು ಕೇಳಿದಳು. ಕುಳ್ಳ "ನನ್ನ ಹೆಸರು ನಾಗರಾಜ" ಎಂದು ಅಭಿಮಾನದಿಂದ ಹೇಳಿದ. ಜೊತೆಗೆ "ನನ್ನನ್ನು ಮದುವೆ ಆಗುತ್ತೀಯಾ?" ಎಂದು ಕೇಳಿದ. ಆಗ ಗೌರಿಗೆ ಮತ್ತೂ ನಗು ಬಂತು. ಇನ್ನೂ ಜೋರಾಗಿ ನಗುತ್ತಾ "ಹೋಗಲೇ ಕುಳ್ಳಾ. ನಿನ್ನನ್ನು ಯಾರು ಮದುವೆ ಆಗ್ತಾರೆ? ಒಂದು ಕಪೀನೂ ಮದುವೆ ಆಗುವುದಿಲ್ಲ, ನಡಿ ಮುಂದೆ" ಎಂದು ಹಾಸ್ಯ ಮಾಡಿದಳು. ಕುಳ್ಳನಿಗೆ ಗೌರಿ ಹೇಳಿದ್ದನ್ನು ಕೇಳಿ ತುಂಬ ಅವಮಾನವಾಯಿತು. "ಹೇಗಾದರೂಮಾಡಿ ಅವಳನ್ನು ಮದುವೆ ಆಗಬೇಕು. ಇಲ್ಲವೇ ಪ್ರಾಣ ಬಿಟ್ಟುಬಿಡಬೇಕು" ಎಂದು ತೀರ್ಮಾನಮಾಡಿಕೊಂಡು ಅಲ್ಲಿ ನಿಲ್ಲದೆ ತಕ್ಷಣ ಹೊರಟ. ಬೇಗ ಬೇಗ ನಡೆದ. ಗೌರಿ ಕುಳ್ಳ ಹೋಗುವುದನ್ನೇ ನೋಡುತ್ತಾ ನಿಂತಿದ್ದಳು. ಅವನ ಗಂಟೆಯ ಗಣಗಣ ಸದ್ದು ಕೇಳುವವರೆಗೂ ನಿಂತಿದ್ದಳು. ಆಮೇಲೆ ಮನೆ ಒಳಕ್ಕೆ ಹೋದಳು.ಅವನ ಆಕಾರ ನೆನಪಿಸಿಕೊಂಡಾಗಲೆಲ್ಲಾ ಅವಳಿಗೆ ತುಂಬಾ ಮೋಜೆನಿಸುತ್ತಿತ್ತು.

ಕಾಳಮ್ಮ ನೀರು ಸೇದಿಕೊಂಡು ಮನೆಯೊಳಕ್ಕೆ ಬಂದಳು. ಮನೆಯಲ್ಲಿ ಮಗ ಕಾಣಲಿಲ್ಲ. ಬೀದಿ ಬಾಗಿಲು ತೆರೆದಿತ್ತು. ಬಾಗಿಲಲ್ಲಿ, ಬೀದಿಯಲ್ಲಿ ಎಲ್ಲ ಹುಡುಕಿದಳು. "ನಾಗರಾಜ, ನಾಗರಾಜ"ಎಂದು ಕೂಗುತ್ತಾ ಅಕ್ಕಪಕ್ಕದ ಮನೆಯಲೆಲ್ಲ ವಿಚಾರಿಸಿದಳು. ಕುಳ್ಳ ಎಲ್ಲೂ ಸಿಕ್ಕಲಿಲ್ಲ. ಅವನಿಗೆ ಏನು ತೊಂದರೆ ಆಗಿದೆಯೋ ಎಂದು ತುಂಬಾ

ಗಾಬರಿಯಾದಳು. ಅಕ್ಕಪಕ್ಕದ ಮನೆಯ ಹೆಂಗಸರೊಡನೆ ಹೇಳಿಕೊಂಡು ಗೋಳಾಡಿದಳು. ಕುಳ್ಳ ಮನೆಗೆ ಬರದೆ ಅವಳಿಗೆ ಊಟತಿಂಡಿಗಳೇ ಸೇರದೆ ಅಳುತ್ತಿದ್ದಳು. ಕುಳ್ಳ ಗೌರಿಯ ಮಾತುಗಳಿಂದ ಕೋಪಗೊಂಡಿದ್ದು ಬೇಗಬೇಗ ನಡೆಯುತ್ತಾ ಹೊರಟ. ಊರಿಂದ ಆಚೆಗೂ ನಡೆದುಹೋದ. ತುಂಬಾ ದೂರ ನಡೆದ. ನಡೆಯುತ್ತಾ ನಡೆಯುತ್ತಾ ಒಂದು ಕಾಡಿಗೆ ಹೋದ. ಅವನಿಗೆ ದುಃಖ, ಹಸಿವು, ಬಾಯಾರಿಕೆ ಎಲ್ಲ ಆಯಿತು. ಸಾಯಂಕಾಲ ಆಯಿತು. ಕತ್ತಲಾಗುತ್ತಾ ಬಂತು. ಹೆದರಿಕೆ ಬೇರೆ ಆಯಿತು. ಅವನು ಒಂದು ಮರದ ಪೊಟರೆಯಲ್ಲಿ ಅವಿತುಕೊಂಡ. ರಾತ್ರಿ ಆಯಿತು. ಕುಳ್ಳನಿಗೆ ನಿದ್ರೆ ಬಂದುಬಿಟ್ಟಿತು.ಬೆಳಿಗ್ಗೆ ಎದ್ದು ಅಳುತ್ತಾ ಅಲ್ಲೇ ಕುಳಿತಿದ್ದ. ಹೀಗೆ ಎರಡು ದಿನ ಕಳೆಯಿತು.

ಮೂರನೆಯದಿನ ಬೆಳಿಗ್ಗೆ ಕುಳ್ಳ ಅಳುತ್ತಾ ಕುಳಿತಿದ್ದ ಮರದ ಹತ್ತಿರಕ್ಕೆ ಯಾರೋ ನಡೆದು ಬರುತ್ತಿರುವಂತೆ ಆಯಿತು. ಕುಳ್ಳ ತಿರುಗಿ ನೋಡಿದ. ಒಬ್ಬ ಗಡ್ಡದ ಮುದುಕ ಒಳ್ಳೆಯ ಋಷಿಯಂತೆ ಇದ್ದ. ಅವನು ಕುಳ್ಳನ ಹತ್ತಿರಕ್ಕೆ ಬಂದ. "ಯಾರಪ್ಪಾ ನೀನು? ಈ ಕಾಡಿನಲ್ಲಿ ಒಬ್ಬನೇ ಯಾಕೆ ಕುಳಿತಿದ್ದೀಯೆ? ಯಾಕೆ ಅಳುತ್ತಿದ್ದೀಯೆ? ಎಂದು ಕೇಳಿದನು. ಕುಳ್ಳನಿಗೆ ತುಂಬಾ ಅಳು ಬಂತು. ಬಿಕ್ಕಿ ಬಿಕ್ಕಿ ಅಳುತ್ತಾ ಇದ್ದನು.ಆಗ ಮುದುಕ ಕುಳ್ಳನನ್ನು ಪೊಟರೆಯಿಂದ ಹೊರಕ್ಕೆ ಎತ್ತಿಕೊಂಡು ಪ್ರೀತಿಯಿಂದ ಮೈ, ಕೈ ತಲೆ ಸವರಿ ಸಮಾಧಾನ ಮಾಡಿ ಪ್ರೀತಿಯಿಂದ ಮತ್ತೆ ಕೇಳಿದನು. "ಅಳಬೇಡ ಮಗು.ನಿನ್ನ ಕಷ್ಟವೇನು ಹೇಳು. ನಾನು ನಿನಗೆ ಸಹಾಯ ಮಾಡುತ್ತೇನೆ. ಧೈರ್ಯವಾಗಿ ನಿನ್ನ ದುಃಖವನ್ನು ನನ್ನೊಂದಿಗೆ ಹೇಳು" ಎಂದನು. ಆಗ ಕುಳ್ಳ ಅಳುತ್ತ ತನ್ನ ಕಥೆಯನ್ನೆಲ್ಲಾ ಮುದುಕನಿಗೆ ಹೇಳಿದನು.ತನಗೆ ಜೀವನ ಬೇಜಾರಾಗಿ ಮನೆಯಿಂದ ಹೊರಟುಬಂದಿದ್ದು, ಬರುವ ದಾರಿಯಲ್ಲಿ ಒಬ್ಬಳು ಸುಂದರಿ ಅವನನ್ನು ಮಾತನಾಡಿಸಿದ್ದು; ಅವಳ ರೂಪಕ್ಕೆ ಇವನು ಬೆರಗಾದದ್ದು, ತನ್ನನ್ನು ಮದುವೆ ಆಗೆಂದು ಅವಳನ್ನು ಕೇಳಿದ್ದು; ಅವಳು ತನ್ನನ್ನು ಹಾಸ್ಯಮಾಡಿ ತಿರಸ್ಕಾರದ ಮಾತನಾಡಿದ್ದು. ಅವಳಿಂದ ಅವಮಾನಿತನಾಗಿ ಕಾಡಿಗೆ ಬಂದದ್ದು; ಆ ಪೊಟರೆಯಲ್ಲಿ ಅಳುತ್ತಾ ಹಸಿವು ಬಾಯಾರಿಕೆ ಹೆದರಿಕೆಗಳಿಂದ ಎರಡು ದಿನ ಇದ್ದದ್ದು ಹೀಗೆ ಎಲ್ಲವನ್ನೂ ಹೇಳಿದನು. ಜೊತೆಗೆ "ನಾನು ಇನ್ನು ಊರಿಗೆ ಹೋಗುವುದಿಲ್ಲ ಊರಿನಲ್ಲಿ ತಾಯಿ ಮತ್ತು ಮೇಷ್ಟ್ರು ಇಬ್ಬರೇ ನನ್ನನ್ನು ಪ್ರೀತಿಸುವವರು. ಉಳಿದವರೆಲ್ಲ ಹಾಸ್ಯಮಾಡುತ್ತಾರೆ. ನನಗೆ ದುಃಖ ಆಗುತ್ತದೆ. ಆದುದರಿಂದ ನಾನು ಇಲ್ಲೆ ಸಾಯುತ್ತೇನೆ." ಎಂದು ದುಃಖದಿಂದ ಹೇಳಿ ಬಿಕ್ಕಿ ಬಿಕ್ಕಿ ಅತ್ತನು.

ಆಗ ಮುದುಕನಿಗೆ ಕುಳ್ಳನ ಬಗ್ಗೆ ತುಂಬಾ ಕನಿಕರ ಉಂಟಾಯಿತು. ಅವನು ಕುಳ್ಳನನ್ನು ಎತ್ತಿಕೊಂಡು ಸಮಾಧಾನ ಮಾಡಿದನು. ತನ್ನ ಚೀಲದಿಂದ ಒಂದು ಪೊಟ್ಟಣವನ್ನು ತೆಗೆದು ಕುಳ್ಳನ ಕೈಗೆ ಕೊಟ್ಟನು. "ಇದರಲ್ಲಿ ಏನಿದೆ ಸ್ವಾಮಿ? ಇದು

ಏತಕ್ಕೆ?" ಎಂದು ಕುಳ್ಳ ಕೇಳಿದನು. ಆಗ ಮುದುಕ ನೋಡಪ್ಪಾ, ಇದರಲ್ಲಿ ಒಂದಿಷ್ಟು ಹಳದಿ ಪುಡಿ ಇದೆ. ಇದನ್ನು ನಿನ್ನ ಮನೆಗೆ ತೆಗೆದುಕೊಂಡು ಹೋಗು. ಅಲ್ಲಿ ಒಲೆಯಲ್ಲಿ ಕೆಂಡಮಾಡಿ ಈ ಪುಡಿಯನ್ನು ಕೆಂಡದ ಮೇಲೆ ಹಾಕು. ಆಗ ತುಂಬಾ ಹೊಗೆ ಉಂಟಾಗುತ್ತದೆ. ತುಂಬಾ ಘಾಟು ವಾಸನೆ ಬರುತ್ತದೆ. ಊರೆಲ್ಲ ಹೊಗೆಯಿಂದ ತುಂಬುತ್ತದೆ. ಊರಿನ ಜನರಿಗೆಲ್ಲ ಉಸಿರಾಡುವುದೇ ಕಷ್ಟವಾಗುತ್ತದೆ. ಆಗ ಊರಿನ ಜನರೆಲ್ಲ ನಿನ್ನ ಬಳಿ ಬರುತ್ತಾರೆ; ಆ ಸಾಹುಕಾರನೂ ಬರುತ್ತಾನೆ. ಹೇಗಾದರೂ ಮಾಡಿ ಈ ಹೊಗೆಯನ್ನು ನಿಲ್ಲಿಸು ಎಂದು ನಿನ್ನನ್ನು ಬೇಡಿಕೊಳ್ಳುತ್ತಾರೆ. ಆಗ ಆ ಸಾಹುಕಾರನ ಮಗಳನ್ನು ನಿನಗೆ ಮದುವೆ ಮಾಡಿಕೊಟ್ಟರೆ ಹೊಗೆ ನಿಲ್ಲಿಸುವುದಾಗಿ ಹೇಳು. ವಿಧಿಯಿಲ್ಲದೆ ಆ ಸಾಹುಕಾರ ತನ್ನ ಮಗಳನ್ನು ನಿನಗೆ ಮದುವೆ ಮಾಡಿಕೊಡಲು ಒಪ್ಪಿಕೊಳ್ಳುತ್ತಾನೆ."ಹೊಗೆಯನ್ನು ಹೇಗೆ ನಿಲ್ಲಿಸಲಿ ಸ್ವಾಮಿ" ಕುಳ್ಳ ಕೇಳಿದನು. ಆಗ ಗಡ್ಡದ ಮುದುಕ ಇನ್ನೊಂದು ಪೊಟ್ಟಣವನ್ನು ಕುಳ್ಳನಿಗೆ ಕೊಟ್ಟು ಹೇಳಿದ. "ಇದರಲ್ಲಿರುವ ಹಸಿರು ಪುಡಿಯನ್ನು ಆ ಕೆಂಡಕ್ಕೆ ಹಾಕಿದರೆ ಹೊಗೆಯೆಲ್ಲ ಮಾಯವಾಗುತ್ತದೆ. ಹಾಗೆ ಮಾಡಿ ನಂತರ ಆ ಸಾಹುಕಾರನ ಮಗಳನ್ನು ಮದುವೆ ಮಾಡಿಕೊಂಡು ಸುಖವಾಗಿರು" ಎಂದು ಹೇಳಿದನು."ಸ್ವಾಮಿ ನಾನು ಕುಳ್ಳನಾಗಿ ಬದುಕಲಾರೆ. ಹಾಗೆ ಬದುಕಿದರೆ ನನಗೆ ನೆಮ್ಮದಿ ಸುಖ ಒಂದೂ ಇಲ್ಲ. ಆದುದರಿಂದ ನನಗೆ ಮದುವೆಯೂ ಬೇಡ, ಏನೂ ಬೇಡ. ಊರಿನಲ್ಲಿ ಕುಳ್ಳನಾಗಿ ಇರುವುದಕ್ಕಿಂತ ಇಲ್ಲಿಯೇ ಸಾಯುವುದು ಲೇಸು" ಎಂದು ಹೇಳಿದನು. ಆಗ ಮುದುಕನು ತನ್ನ ಚೀಲದಿಂದ ಒಂದು ಮಾಯಾದಂಡವನ್ನು ತೆಗೆದ. ಅದರಿಂದ ಕುಳ್ಳನ ಕಾಲಿನಿಂದ ತಲೆಯವರೆಗೂ ಮೂರುಸಲ ಸವರಿದ. ನಂತರ ಅದನ್ನು ಕುಳ್ಳನ ತಲೆಯ ಮೇಲಿಟ್ಟು ಏನೋ ಮಂತ್ರ ಹೇಳಿದ. ಆಶ್ಚರ್ಯವೋ ಆಶ್ಚರ್ಯ! ಕುಳ್ಳ ಸುಂದರವಾದ ತುಂಬುದೇಹದ ಯುವಕನಾಗಿದ್ದ. ಮೈಮೇಲೆ ಸುಂದರ ಉಡುಪು. ನೋಡಿದವರಿಗೆ ಮನ ಸೆಳೆಯುವ ದಿವ್ಯಸುಂದರಮೂರ್ತಿ ಆಗಿದ್ದ. ಕುಳ್ಳನಿಗೆ ತುಂಬಾ ಸಂತೋಷವಾಯಿತು. ಆದರೆ ಮರುಕ್ಷಣವೇ ಮುದುಕ ಒಂದು ಮಾಯಾಟೋಪಿಯನ್ನು ಚೀಲದಿಂದ ತೆಗೆದು ಆ ಸುಂದರ ಯುವಕನ ತಲೆಯ ಮೇಲಿಟ್ಟ, ತಕ್ಷಣ ಅವನು ಮೊದಲಿನ ಮೊಳದುದ್ದ ಕುಳ್ಳನೇ ಆಗಿಬಿಟ್ಟ, ಆಗ ಕುಳ್ಳನಿಗೆ ತಡೆಯಲಾರದ ದುಃಖ ಆಯಿತು. ಜೋರಾಗಿ ಅತ್ತುಬಿಟ್ಟ, "ಸ್ವಾಮಿ, ನನ್ನನ್ನು ಉದ್ದದವನಾಗಿ ಮಾಡಿ" ಎಂದು ಬೇಡಿಕೊಂಡ. ಅದಕ್ಕೆ ಆ ಗಡ್ಡದ ಮುದುಕ "ಈಗ ನೀನು ಊರಿಗೆ ಹೋಗು. ಮನೆಗೆ ಹೋಗು. ನಿನ್ನ ತಾಯಿಗೆ ಸಮಾಧಾನಮಾಡು. ಈ ಟೋಪಿ ನಿನ್ನ ತಲೆಯ ಮೇಲಿರುವಾಗ ನೀನು ಕುಳ್ಳನಾಗೇ ಇರುತ್ತೀಯೆ; ಅದನ್ನು ತೆಗೆದುಬಿಟ್ಟರೆ ಎಲ್ಲರಂತೆ ಉದ್ದದವನಾಗಿ ಇರುತ್ತೀಯೆ. ಹೋಗು ಇನ್ನು ನಿನಗೆ ಸುಖದ ಕಾಲ ಕಾದಿದೆ. ಊರಿಗೆ ಹೋಗಿ ಸುಖವಾಗಿರು" ಎಂದು ಹರಸಿದನು.

ಕುಳ್ಳನು ಮುದುಕನಿಗೆ ನಮಸ್ಕರಿಸಿ ತಲೆಯ ಮೇಲಿನ ಟೋಪಿಯನ್ನು ಹಾಕಿಕೊಂಡು ಕೈಯಲ್ಲಿ ಎರಡು ಪುಡಿಪೊಟ್ಟಣಗಳನ್ನೂ ಹಿಡಿದುಕೊಂಡು ಊರಿನಕಡೆ ಹೊರಟನು. ಮಗ ಮನೆಗೆ ಬಂದುದನ್ನು ಕಂಡು ಕಾಳಮ್ಮನಿಗೆ ತುಂಬಾ ಸಂತೋಷವಾಯಿತು. ಮಗನನ್ನು ಪ್ರೀತಿಯಿಂದ ಬಾಚಿ ತಬ್ಬಿಕೊಂಡಳು. ಮಗನಿಗೆ ಕೈಕಾಲು ತೊಳೆಯಲು ಬಿಸಿನೀರು ಕೊಟ್ಟಳು. ಬಿಸಿ ಬಿಸಿ ಅಡುಗೆ ಮಾಡಿ ಊಟ ಬಡಿಸಿದಳು. ಕುಳ್ಳ ಹೊಟ್ಟೆತುಂಬ ಊಟಮಾಡಿ ಡರ್ ಎಂದು ತೇಗಿದ. ತಾಯಿಯೂ ಊಟಮಾಡಿ ಮಗನ ಬಳಿ ಬಂದು ಕುಳಿತಳು. ಆಗ ಕುಳ್ಳನು "ಅಮ್ಮಾ, ನೀನು ಹೆದರಬೇಡ, ಸುಮ್ಮನೆ ನೋಡುತ್ತಾ ಇರು" ಎಂದನು. ಅಗ್ಗಿಷ್ಟಿಕೆಯಲ್ಲಿ ಕೆಂಡವನ್ನು ತಯಾರಿಸಿದನು. ಅಗ್ಗಿಷ್ಟಿಕೆಗೆ ಎರಡು ಸುತ್ತು ಪ್ರದಕ್ಷಿಣೆ ಹಾಕಿದ. ಅಗ್ನಿಗೆ ಕೈಮುಗಿದು"ನನ್ನನ್ನೂ ನನ್ನ ತಾಯಿಯನ್ನೂ ಕಾಪಾಡು" ಎಂದು ಬೇಡಿಕೊಂಡನು. ಮುದುಕ ಕೊಟ್ಟಿದ್ದ ಹಳದಿಪುಡಿಯನ್ನು ಕೆಂಡಕ್ಕೆ ಹಾಕಿದ. ತಕ್ಷಣ ಕೆಂಡದಿಂದ ಹೊಗೆ ಹೊರಟಿತು. ದಟ್ಟವಾದ ಕಪ್ಪು ಬಣ್ಣದ ಹೊಗೆ ಮನೆಯನ್ನೆಲ್ಲ ತುಂಬಿಕೊಂಡಿತು.ಹೊರಗೆ ರಸ್ತೆಗೂ ಹೋಯಿತು. ಘಾಟು ವಾಸನೆಯ ಕಪ್ಪುಹೊಗೆ ಊರಿನ ಮನೆಮನೆಗೂ ತುಂಬಿಕೊಂಡಿತು. ಆ ಊರಿನ ಜನರ ಕಣ್ಣು ಮೂಗಿನಲ್ಲೆಲ್ಲಾ ನೀರು ತುಂಬಿಕೊಂಡಿತು. ಉಸಿರು ಕಟ್ಟಿತು. ಅದರ ಘಾಟು ತಡೆಯಲಾರದೆ ಜನರೆಲ್ಲಾ ಮನೆಗಳನ್ನು ಬಿಟ್ಟು ಚೆಲ್ಲಾಪಿಲ್ಲಿಯಾಗಿ ಓಡಿದರು. ದಾರಿಯಲ್ಲಿ ಒಬ್ಬರಿಗೊಬ್ಬರು ಡಿಕ್ಕಿಹೊಡೆದುಕೊಂಡುಬಿದ್ದರು. ಚರಂಡಿಗಳಲ್ಲಿ ಬಿದ್ದು ಒದ್ದಾಡಿದರು. ಏನು ಮಾಡಿದರೂ ತೊಂದರೆ ತಪ್ಪಲಿಲ್ಲ. ಸಾಹುಕಾರನ ಮನೆಗೂ ಹೊಗೆ ತುಂಬಿತು. ಎಲ್ಲರಿಗೂ ಉಸಿರು ಕಟ್ಟಿತು. ಹೊಗೆ ಎಲ್ಲಿಂದ ಬರುತ್ತಿದೆ ಎಂದು ನೋಡಲು ಆಳುಗಳನ್ನು ಕಳಿಸಿದ ಸಾಹುಕಾರ. ಆಳುಗಳು ಬಂದು ನೋಡಿದರು ಕುಳ್ಳನ ಮನೆಯಿಂದ ಹೊಗೆ ಬರುತ್ತಿದೆ ಎಂದು ಸಾಹುಕಾರನಿಗೆ ತಿಳಿಸಿದರು. ಆಗ ಸಾಹುಕಾರ ಕುಳ್ಳನ ಮನೆಗೆ ಬಂದು ನೋಡಿದನು. ಅವನ ಕಣ್ಣು ಮೂಗು ಬಾಯಿಗೆಲ್ಲ ಹೊಗೆ ನುಗ್ಗಿ ಅವನಿಗೆ ಅಲ್ಲಿ ನಿಲ್ಲುವುದೇ ಕಷ್ಟವಾಯಿತು. ಆದರೂ ಕಷ್ಟಪಟ್ಟುಕೊಂಡು ಎದುರಿಗೆ ನಿಂತಿದ್ದ ಕುಳ್ಳನಿಗೆ "ಏನಪ್ಪಾ ಕುಳ್ಳ, ಊರಿನ ಜನರೆಲ್ಲ ಹೊಗೆ ಘಾಟಿನಿಂದ ಉಸಿರು ಕಟ್ಟಿ ಕಷ್ಟಪಡುತ್ತಿದ್ದಾರೆ. ಇದನ್ನೇಕೆ ಹಾಕಿದೆ, ಹೇಗಾದರೂ ಮಾಡಿ ಇದನ್ನು ನಿಲ್ಲಿಸಪ್ಪಾ" ಎಂದು ಕೇಳಿಕೊಂಡನು. ಕುಳ್ಳ ನಗುತ್ತಾ ಸುಮ್ಮನೆ ನಿಂತಿದ್ದನು. ಸಾಹುಕಾರ ಪುನಃ ನಿನಗೆಷ್ಟು ಹಣ ಬೇಕಾದರೂ ಕೊಡುತ್ತೇನೆ, ನೀನು ಏನು ಕೇಳಿದರೂ ಕೊಡುತ್ತೇನೆ, ಹೊಗೆ ನಿಲ್ಲಿಸಪ್ಪಾ, ಊರಿನ ಜನರನ್ನು ಕಾಪಾಡು"ಎಂದು ಬೇಡಿಕೊಂಡನು. ಆಗ ಕುಳ್ಳನು "ನೋಡಿ ಸಾಹುಕಾರರೇ, ಈ ಕ್ಷಣ ಬೇಕಾದರೂ ಹೊಗೆ ನಿಲ್ಲಿಸುತ್ತೇನೆ; ನನಗೆ ಹಣ ಬೇಕಾಗಿಲ್ಲ, ಆದರೆ ನೀವು ಹೇಳಿದಂತೆ ನನಗೆ ಬೇಕಾದುದನ್ನು ಕೊಡುತ್ತೀರಾ?" ಎಂದನು."ಮೊದಲು ಹೊಗೆ ನಿಲ್ಲಿಸು. ಈ ಜನರ ಪ್ರಾಣ ಉಳಿಸು. ನೀನು ಕೇಳಿದ್ದನ್ನು ನಿನಗೆ ಬೇಕಾದಷ್ಟನ್ನು ಕೊಡುತ್ತೇನೆ" ಎಂದನು ಸಾಹುಕಾರ. "ಸರಿ. ಹಾಗಾದರೆ, ನಿಮ್ಮ ಮಗಳು ಗೌರಿಯನ್ನು

ನನಗೆ ಕೊಟ್ಟು ಮದುವೆ ಮಾಡಿಕೊಡಲು ನೀವು ಒಪ್ಪಿದರೆ, ಒಂದೇ ಕ್ಷಣದಲ್ಲಿ ಹೊಗೆ ನಿಲ್ಲಿಸುತ್ತೇನೆ. ಇಲ್ಲದಿದ್ದರೆ ಎಷ್ಟು ದಿನವಾದರೂ ಈ ಹೊಗೆ ನಿಲ್ಲುವುದಿಲ್ಲ" ಎಂದನು ಕುಳ್ಳ. ಕುಳ್ಳನ ಮಾತುಗಳನ್ನು ಕೇಳಿ ಸಾಹುಕಾರನಿಗೆ ಕಳವಳ ಉಂಟಾಯಿತು. ಊರಿನ ಜನರ ಪ್ರಾಣ ಉಳಿಯಬೇಕಾದರೆ, ಈ ಕುಳ್ಳನಿಗೆ ಮಗಳನ್ನು ಕೊಟ್ಟು ಮದುವೆ ಮಾಡಬೇಕು. ಮದುವೆಗೆ ಒಪ್ಪಿದರೆ ಮಗಳಿಗೆ ಸರಿಯಾದ ವರ ಅಲ್ಲ. ಅವಳ ಬದುಕೇ ಹಾಳಾಗುತ್ತದೆ. ಏನು ಮಾಡುವುದು ಎಂದು ಚಿಂತಿಸತೊಡಗಿದನು. "ಬೇಗ ಹೇಳಿ ಸಾಹುಕಾರರೇ" ಎಂದು ಕುಳ್ಳ ಒತ್ತಾಯಿಸಿದ. ಸಾಹುಕಾರ ತುಂಬಾ ಯೋಚಿಸಿ ಕೊನೆಗೆ ಊರಿನ ಜನರನ್ನು ಬದುಕಿಸಬೇಕಾದುದರಿಂದ, ತಾನೂ ತನ್ನ ಮನೆಯವರೂ ಬದುಕಬೇಕಾದುದರಿಂದ ಕುಳ್ಳನಿಗೆ "ಆಗಲಪ್ಪಾ, ನನ್ನ ಮಗಳು ಗೌರಿಯನ್ನು ನಿನಗೆ ಈ ದಿನವೇ ಮದುವೆಮಾಡಿ ಕೊಡುತ್ತೇನೆ,ಮೊದಲು ಹೊಗೆನಿಲ್ಲಿಸು" ಎಂದ. ಕೂಡಲೆ ಕುಳ್ಳ ತನ್ನ ಹತ್ತಿರ ಇದ್ದ ಹಸಿರು ಪುಡಿಯನ್ನು ಕೆಂಡಕ್ಕೆ ಹಾಕಿದ. ಏನಾಶ್ಚರ್ಯ! ತಕ್ಷಣವೇ ಹೊಗೆಯೆಲ್ಲ ಮಂಗಮಾಯ! ಊರಿನಲ್ಲೆಲ್ಲ ತಿಳಿಗಾಳಿ, ತಂಪುಹವೆ.ಎಲ್ಲರಿಗೂ ಸಂತೋಷವಾಯಿತು. ಸಾಹುಕಾರನಿಗೆ ಒಂದು ಕಡೆ ಸಂತೋಷ ಆದರೆ ಮಗಳನ್ನು ಈ ಕುಳ್ಳನಿಗೆ ಮದುವೆ ಮಾಡಿಕೊಡಬೇಕಲ್ಲಾ ಎಂಬ ದುಃಖ. ಮನೆಗೆ ಹೋಗಿ ಹೆಂಡತಿ ಮಕ್ಕಳಿಗೆ ಎಲ್ಲ ಸಮಾಚಾರ ಹೇಳಿದನು. ಅವರೂ ದುಃಖದಿಂದ ಅತ್ತರು. ಸಾಹುಕಾರ ಮಾತಿಗೆ ತಪ್ಪಲಾರದೆ ಮಗಳನ್ನು ಅದೇ ದಿನ ಸಾಯಂಕಾಲ ಗೋಧೂಳಿ ಲಗ್ನದಲ್ಲಿ ಕುಳ್ಳನಿಗೆ ಮದುವೆ ಮಾಡಿಕೊಟ್ಟು, ಕುಳ್ಳನ ಮನೆಗೆ ಕಳಿಸಿಕೊಟ್ಟನು. ಗೌರಿ ಹೊಸಮನೆಗೆ ಹೋದ ದಿನ ನೆಂಟರಿಷ್ಟರೆಲ್ಲ ಊಟಕ್ಕೆ ಬಂದಿದ್ದರು. ಕಾಳಮ್ಮ ಸೊಸೆಗೆ ಒಳ್ಳೆಯ ಸೀರೆ ಉಡುಗೊರೆ ತಂದಿದ್ದಳು. ಗೌರಿಯ ತಂದೆ ಎಲ್ಲಾ ಏರ್ಪಾಡುಗಳನ್ನೂ ತಾನೇ ನಿಂತು ಸಂಭ್ರಮದಿಂದ ಮಾಡುತ್ತಿದ್ದ. ಊಟವಾದಮೇಲೆ ಎಲ್ಲರೂ ತಮ್ಮತಮ್ಮ ಮನೆಗಳಿಗೆ ಹೊರಟುಹೋದರು. ಗೌರಿಗೆ ಮಾತ್ರ ಈ ಯಾವ ಸಂಭ್ರಮದಿಂದಲೂ ಸಂತೋಷವಾಗಲಿಲ್ಲ. ತನ್ನನ್ನು ಈ ವಿಚಿತ್ರ ಕುಳ್ಳನಿಗೆ ಮದುವೆ ಮಾಡಿಕೊಟ್ಟರಲ್ಲ ಎಂದು ದುಃಖಿಸುತ್ತಲೇ ಇದ್ದಳು. ಆ ದಿನವೆಲ್ಲ ಗೌರಿ ಯಾರೊಡನೆಯೂ ಮಾತೇ ಆಡಲಿಲ್ಲ, ರಾತ್ರಿ ಆದ ತಕ್ಷಣ ತನ್ನ ಕೊಠಡಿಗೆ ಹೋಗಿ ಮಲಗಿಬಿಟ್ಟಳು. ಕುಳ್ಳ ಹೆಂಡತಿಯನ್ನು ಊಟಕ್ಕೆ ಕರೆದ. ಗೌರಿ ತನಗೆ ಊಟ ಬೇಡ ಎಂದುಬಿಟ್ಟಳು. ಕುಳ್ಳ ರಾತ್ರಿ ಊಟ ಮುಗಿಸಿ ನಗುನಗುತ್ತಾ ಕೊಠಡಿ ಒಳಕ್ಕೆಬಂದು ಬಾಗಿಲು ಹಾಕಿದ. ಮಂಚದ ಪಕ್ಕದಲ್ಲಿ ಹಾಕಿದ್ದ ಮೆಟ್ಟಲುಗಳನ್ನು ಹತ್ತಿ ಮಂಚದ ಮೇಲೇರಿ ಕುಳಿತ. "ಗೌರಿ, ಬಾ ತಿಂಡಿ ತಿನ್ನು, ಹಾಲು ಕುಡಿ, ಹಣ್ಣು ತಿನ್ನು ಎಂದು ಕರೆದ. ಗೌರಿ ಆ ಕಡೆ ತಿರುಗಿಯೂ ನೋಡಲಿಲ್ಲ. ಅಳುತ್ತಲೇ ಇದ್ದಳು. "ನಿನ್ನ ಗಂಡ ಕುಳ್ಳ ಎಂದು ನಿನಗೆ ಬೇಸರ ತಾನೆ? ಈಗ ನೋಡು, ನಿನ್ನ ಗಂಡ ಹೇಗಿದ್ದಾನೆ?" ಎಂದು ಗಟ್ಟಿಯಾಗಿ

ನಗುತ್ತಾ ಹೇಳಿದ ನಾಗರಾಜ. ಗೌರಿ ಸಿಟ್ಟಿನಿಂದಲೇ ಅವನ ಕಡೆ ತಿರುಗಿನೋಡಿದಳು. ನಾಗರಾಜ ತಕ್ಷಣ ತನ್ನ ತಲೆಯಮೇಲಿದ್ದ ಮಾಯದ ಟೋಪಿಯನ್ನು ತೆಗೆದು ಕೆಳಗಿಟ್ಟ. ಗೌರಿಗೆ ಅವನನ್ನು ನೋಡಿ ಆಶ್ಚರ್ಯವಾಯಿತು. ತನ್ನ ಗಂಡ ತನ್ನ ಹಾಗೆಯೇ, ಬೆಳ್ಳಗೆ, ಲಕ್ಷಣವಾಗಿದ್ದಾನೆ! ಎಲ್ಲರಂತೆ ಉದ್ದವಾಗಿದ್ದಾನೆ! ಅವಳಿಗೆ ಅತ್ಯಂತ ಆನಂದವಾಯಿತು. ಸಂತೋಷದಿಂದ ಎದ್ದು ಕುಣಿದಾಡಿದಳು. ಗಂಡನಿಗೆ ನಮಸ್ಕಾರ ಮಾಡಿದಳು. ಅವನ ಪಕ್ಕದಲ್ಲಿ ಕುಳಿತಳು. ಇಬ್ಬರೂ ಅಲ್ಲಿದ್ದ ತಿಂಡಿಗಳನ್ನೂ, ಹಣ್ಣನ್ನೂ ತಿಂದು., ಹಾಲು ಕುಡಿದರು. ಸಂತೋಷದಿಂದ ಮಲಗಿ ನಿದ್ರೆ ಮಾಡಿದರು. ಬೆಳಗಾಯಿತು. ಗೌರಿಗೆ ಇನ್ನೂ ಎಚ್ಚರ ಆಗಿರಲಿಲ್ಲ, ಗಾಢ ನಿದ್ರೆಯಲ್ಲೇ ಇದ್ದಳು. ಕುಳ್ಳ ಎದ್ದು ಮಾಯದ ಟೋಪಿಯನ್ನು ತಲೆಗೆ ಹಾಕಿಕೊಂಡ. ತಕ್ಷಣ ಹಿಂದಿನಂತೆ ಮೊಳದುದ್ದ ಕುಳ್ಳನೇ ಆದ. ಕೊಠಡಿಯಿಂದ ಹೊರಗೆಬಂದು ತನ್ನ ನಿತ್ಯದ ಕೆಲಸಗಳಲ್ಲಿ ತೊಡಗಿದ. ಸ್ವಲ್ಪ ಹೊತ್ತಿಗೆ ಗೌರಿ ಎದ್ದಳು. ಗಂಡ ಆಗಲೇ ಎದ್ದು ಹೋಗಿದ್ದನ್ನು ಕಂಡಳು. ತಾನೂ ಹೊರಗೆ ಬಂದು ನೋಡುತ್ತಾಳೆ, ಗಂಡ ಮತ್ತೆ ಕುಳ್ಳನಾಗಿಯೇ ಓಡಾಡುತ್ತಾ ಇದ್ದಾನೆ. ಕಣ್ಣುಗಳನ್ನು ಉಜ್ಜಿಕೊಂಡು ನೋಡಿದಳು. ತಾನು ಈಗ ನೋಡುತ್ತಿರುವುದು ನಿಜ. ನಾಗರಾಜ ಕುಳ್ಳನೇ ಎಂದು ಸ್ಪಷ್ಟವಾಯಿತು. ಅವಳಿಗೆ ತುಂಬಾ ದುಃಖವಾಯಿತು. ಅಳತೊಡಗಿದಳು. ಕುಳ್ಳ ಮಾತ್ರ ನಗುತ್ತಾ "ಯಾಕೆ ಗೌರಿ, ನಿದ್ರೆ ಹರಿಯಲಿಲ್ಲವೇ? ಇನ್ನೂ ಕನಸೇ? ಎಂದು ಕೇಳಿದನು. ಗೌರಿಗೆ ಏನೂ ಅರ್ಥವಾಗಲಿಲ್ಲ. "ರಾತ್ರಿ ನೀನು ಉದ್ದವಾಗಿದ್ದದ್ದು ಹೇಗೆ, ನಿಜ ಹೇಳು ಎಂದು ಗೋಗರೆದಳು. ಆಗ ನಾಗರಾಜ ತಾಯಿಯನ್ನೂ, ಗೌರಿಯನ್ನೂ ಕೂರಿಸಿಕೊಂಡು ತನ್ನ ಮಾಯಾಟೋಪಿಯ ಮಹತ್ವವನ್ನು ಹೇಳಿದ. ಆ ದಿನ ತಾನು ಬೇಸರದಿಂದ ಮನೆಬಿಟ್ಟು ಹೊರಟಿದ್ದು; ಗೌರಿಯನ್ನು ಕಂಡು ಮಾತನಾಡಿಸಿದ್ದು; ಅವಳು ಹಾಸ್ಯಮಾಡಿ, ನಿಷ್ಠುರದ ಮಾತುಗಳನ್ನಾಡಿದ್ದು; ಕಾಡಿಗೆ ಹೋದದ್ದು; ಮರದ ಪೊಠರೆಯಲ್ಲಿ ಎರಡು ದಿನ ಅನ್ನ ನೀರಿಲ್ಲದೆ ಅತ್ತದ್ದು; ಋಷಿಯ ದರ್ಶನ; ಅವನಿಗೆ ತನ್ನ ದುಃಖವನ್ನೆಲ್ಲ ಹೇಳಿಕೊಂಡದ್ದು; ಋಷಿಯ ಆಶೀರ್ವಾದ; ಮಂತ್ರದ ಪುಡಿಗಳನ್ನು ಕೊಟ್ಟದ್ದು; ಮಾಯದ ಟೋಪಿ ಕೊಟ್ಟದ್ದು; ಊರಿಗೆ ಹಿಂತಿರುಗಿದ್ದು; ಮಂತ್ರದ ಹೊಗೆಹಾಕಿದ್ದು; ಸಾಹುಕಾರ ಬಂದು ಕೇಳಿಕೊಂಡದ್ದು; ಹೊಗೆ ಆರಿಸಿದ್ದು; ಮದುವೆ ಆದದ್ದು; ಟೋಪಿಯ ಮಹತ್ವ ಎಲ್ಲವನ್ನೂ ವಿವರಿಸಿ ಹೇಳಿದ. ಇಬ್ಬರೂ ಎಲ್ಲವನ್ನೂ ಆಶ್ಚರ್ಯದಿಂದ ಕೇಳಿ ತುಂಬಾ ಸಂತೋಷಪಟ್ಟರು.

ಆಗ ಗೌರಿ "ಆ ಹಾಳು ಟೋಪಿಯನ್ನು ತೆಗೆದು ಬಿಸಾಕಿ; ನೀವು ಕುಳ್ಳರಾಗಿರುವುದನ್ನು ನಾನು ನೋಡಲಾರೆ" ಎಂದಳು. ಆಗ ನಾಗರಾಜ "ನಾನು ಕುಳ್ಳನಾಗಿದ್ದುದರಿಂದಲೇ ಅಲ್ಲವೇ ನಿನ್ನನ್ನು ಮದುವೆ ಆದದ್ದು? ಉದ್ದದ ಸಾದಾ ಬಡವನಾಗಿದ್ದರೆ ನೀನು ನನ್ನನ್ನು ಮದುವೆ ಆಗುತ್ತಿದ್ದೆಯಾ; ಆದುದರಿಂದ ನನ್ನ ಕುಳ್ಳರೂಪ ನನಗೆ ಇಷ್ಟ.

ನನಗೆ ಗೌರಿಯನ್ನು ಕೊಡಿಸಿದ ರೂಪ ಇದು. ನಾನು ಹಗಲೆಲ್ಲ ಕುಳ್ಳನಾಗಿಯೇ ಇರುತ್ತೇನೆ. ಹಗಲಿನಲ್ಲಿ ಟೋಪಿ ತೆಗೆಯುವುದಿಲ್ಲ. ರಾತ್ರಿ ಟೋಪಿ ತೆಗೆದು ಉದ್ದವಾಗುತ್ತೇನೆ" ಎಂದನು. ತಾಯಿಗೆ ತನ್ನ ಟೋಪಿ ತೆಗೆದು ಹೊಸರೂಪವನ್ನೊಮ್ಮೆ ತೋರಿಸಿದನು. ಕಾಳಮ್ಮನಿಗೆ ಮಗನ ಸುಂದರ ರೂಪವನ್ನು ನೋಡಿ ತುಂಬಾ ಸಂತೋಷವಾಯಿತು. ಮಗನನ್ನು ಒಮ್ಮೆ ಬಾಚಿ ತಬ್ಬಿಕೊಂಡು ಬಿಟ್ಟಳು. ನಾಗರಾಜ ಮತ್ತೆ ಟೋಪಿಯನ್ನು ತಲೆಯಮೇಲಿಟ್ಟು ಕೊಂಡನು. ಆಶ್ಚರ್ಯ! ಮೊದಲಿನ ಕುಳ್ಳನೇ ಆಗಿದ್ದನು. ಆ ದಿನವೆಲ್ಲ ಗೌರಿ ದುಃಖದಲ್ಲಿಯೇ ಚಿಂತೆಯಲ್ಲಿಯೇ ಕಳೆದಳು. ಗಂಡನೊಡನೆಯೋ, ಅತ್ತೆಯೊಡನೆಯೂ ಹೆಚ್ಚು ಮಾತನಾಡಲಿಲ್ಲ. ಕತ್ತಲಾದ ಕೂಡಲೆ ರಾತ್ರಿ ತನಗೆ ಊಟ ಬೇಡವೆಂದು ಹೇಳಿ, ತನ್ನ ಕೊಠಡಿಗೆ ಹೋಗಿ ಮಲಗಿಕೊಂಡಳು. ಕುಳ್ಳ ಮಾತ್ರ ಊಟ ಮಾಡಿ ಕೊಠಡಿಗೆ ಹೋದನು. ಗೌರಿ ಕಣ್ಣು ಮುಚ್ಚಿಕೊಂಡು ನಿದ್ರೆ ಬಂದವಳಂತೆ ಅಲ್ಲಾಡದೆ ಮಲಗಿದ್ದಳು. ಕುಳ್ಳ ಮಂಚದ ಮೇಲೆ ಕುಳಿತು, ತನ್ನ ಟೋಪಿ ತೆಗೆದು ತಲೆದಿಂಬಿನ ಕೆಳಗಿಟ್ಟು ಮಲಗಿದನು. ಕೊಂಚ ಹೊತ್ತಿಗೆ ಅವನಿಗೆ ಚೆನ್ನಾಗಿ ನಿದ್ರೆ ಬಂದಿತು. ಗೌರಿ ಮೆಲ್ಲಗೆ ಎದ್ದಳು. ಗಂಡನ ಸುಂದರರೂಪ ನೋಡಿ ತುಂಬಾ ಸಂತೋಷವಾಯಿತು ಅವಳಿಗೆ. ತನ್ನ ಗಂಡ ಸದಾಕಾಲ ಹೀಗೆಯೇ ಇರಬೇಕೆಂದು ಆಸೆ ಆಯಿತು. ಅವನನ್ನು ಮೆಲ್ಲಗೆ ಎಬ್ಬಿಸಿದಳು. ಈಗ ಸಮಾಧಾನವಾಯಿತಾ? ನಿನ್ನ ಸಿಟ್ಟು ಹೋಯಿತಾ? ಎಂದು ನಾಗರಾಜ ಕೇಳಿದನು. ಇನ್ನು ಮೇಲೆ ನೀವು ಸದಾ ಹೀಗೇ ಇರೀಪ್ಪ ಎಂದಳು ಗೌರಿ. ಇಬ್ಬರೂ ಹಾಲು ಹಣ್ಣುಮುಗಿಸಿದರು. ನಿದ್ರೆ ಹೋದರು.

ಅರ್ಧರಾತ್ರಿ ಆದ ಮೇಲೆ ಗೌರಿ ಎದ್ದಳು; ಸದ್ದಾಗದಂತೆ ಗಂಡನಿಗೆ ಗೊತ್ತಾಗದಂತೆ ಆ ಮಾಯಾಟೋಪಿಯನ್ನು ಕೈಗೆತ್ತಿಕೊಂಡಳು. ಅದರ ಮೇಲೆ ತುಂಬಾ ಕೋಪಬಂತು. ಅದನ್ನು ತಿರುಗಿಸಿ ನೋಡಿದಳು. ಹೇಗಾದರೂ ಮಾಡಿ ಅದನ್ನು ನಾಶಮಾಡಿಬಿಟ್ಟರೇ ಎಂದು ಯೋಚಿಸಿದಳು. ಮರುಕ್ಷಣವೇ ಗಂಡನಿಗೆ ಸಿಟ್ಟು ಬಂದುಬಿಡುತ್ತದಲ್ಲಾ ಎಂದು ಹೆದರಿದಳು. ತುಂಬಾ ಹೊತ್ತು ಅದನ್ನು ಕೈಯಲ್ಲಿ ಹಿಡಿದುಕೊಂಡು ಯೋಚಿಸುತ್ತಲೇ ಕುಳಿತು ಕಡೆಗೆ ಏನೋ ತೀರ್ಮಾನ ಮಾಡಿಕೊಂಡು ಎದ್ದಳು. ಸದ್ದಾಗದಂತೆ ಹೆಜ್ಜೆ ಹಾಕುತ್ತಾ ರೂಮಿನಿಂದ ಹೊರಗೆ ಬಂದಳು. ಬಚ್ಚಲುಮನೆಗೆ ಹೋದಳು. ಟೋಪಿಗೆ ಕೊಂಚ ಸೀಮೆಎಣ್ಣೆ ಸುರಿದಳು. ಒಲೆ ಒಳಗೆ ಹಾಕಿದಳು. ಬೆಂಕಿಕಡ್ಡಿ ಗೀರಿ ಅದನ್ನು ಹತ್ತಿಸಿಯೇ ಬಿಟ್ಟಳು. ಭಗ್ಗನೆ ಉರಿ ಎದ್ದಿತು. ಒಂದು ಕ್ಷಣದಲ್ಲಿ ಟೋಪಿ ಉರಿದು ಬೂದಿಯಾಯಿತು. ಗೌರಿಗೆ ಒಂದು ಕಡೆ ಸಮಾಧಾನ. ಸಂತೋಷ ಆಯಿತು; ಮತ್ತೊಂದು ಕಡೆ ಹೆದರಿಕೆ. ಗಂಡನಿಗೆ ಸಿಟ್ಟು ಬಂದಾಗ ಏನು ಹೇಳುವುದು? ಎಂದು ಚಿಂತಿಸುತ್ತಾ ಮತ್ತೆ ಕೊಠಡಿಗೆ ಹೋಗಿ ಮಲಗಿದಳು. ಕೊಂಚಹೊತ್ತಿಗೆ ಗೌರಿಗೆ ಒಳ್ಳೆಯ ನಿದ್ರೆ

ಆವರಿಸಿತು. ಬೆಳಗಾಯಿತು. ಕುಳ್ಳನಿಗೆ ಎಚ್ಚರವಾಯಿತು. ಎದ್ದವನೇ ದಿಂಬಿನ ಕೆಳಕ್ಕೆ ಕೈಹಾಕಿದ, ಟೋಪಿಗಾಗಿ ಹುಡುಕಿದ.ಅದು ಸಿಕ್ಕಲೇ ಇಲ್ಲ. ಎಲ್ಲಿಟ್ಟೆ ಎಂದು ಜ್ಞಾಪಿಸಿಕೊಂಡ. ದಿಂಬಿನ ಕೆಳಗೇ ಇಟ್ಟಿದ್ದು ಚೆನ್ನಾಗಿ ಜ್ಞಾಪಕವಾಯಿತು. ಆದರೆ ಈಗ ಅಲ್ಲಿ ಇಲ್ಲ. ತಕ್ಷಣ ಗೌರಿಯ ಮೇಲೆ ಅನುಮಾನ ಬಂತು. ಅವಳನ್ನು ಎಬ್ಬಿಸಿದ; ನನ್ನ ಟೋಪಿ ಏನು ಮಾಡಿದೆ ಎಂದು ಕೇಳಿದ. ಗೌರಿಗೆ ತುಂಬಾ ಹೆದರಿಕೆ ಆಯಿತು. ಆದರೂ ಇದ್ದುದರಲ್ಲಿ ಧೈರ್ಯ ತಂದುಕೊಂಡು "ದಯಮಾಡಿ ಕ್ಷಮಿಸಿ, ನನಗೆ ನಿಮ್ಮ ಆ ವಿಕಾರ ರೂಪ ನೋಡಲಾಗುವುದಿಲ್ಲ. ಆದುದರಿಂದ ನಿಮ್ಮ ಟೋಪಿಯನ್ನು ರಾತ್ರಿ ಮುಗಿಸಿಬಿಟ್ಟೆ. ನನ್ನನ್ನು ಕ್ಷಮಿಸಿಬಿಡಿ, ನನ್ನ ರಾಜ. ಹೀಗೆಯೇ ಇದ್ದುಬಿಡಿ" ಎಂದು ಹೇಳುತ್ತಾ ಅವನನ್ನು ಅಪ್ಪಿಕೊಂಡಳು. ನಾಗರಾಜನಿಗೂ ಸಂತೋಷವೇ ಆಯಿತು. ಆದರೂ ಅದನ್ನು ತೋರ್ಪಡಿಸದೆ "ಎಂಥ ಕೆಲಸ ಮಾಡಿದೆ ಗೌರಿ. ನನಗೆ ಆ ಟೋಪಿ ತುಂಬಾ ಸಹಾಯ ಮಾಡಿತ್ತು, ನಾನು ಅದನ್ನು ತುಂಬಾ ಇಷ್ಟಪಡುತ್ತಿದ್ದೆ. ಹೋಗಲಿ ಅದನ್ನು ಎಲ್ಲಿ ಹಾಕಿದ್ದೀಯೋ ಹೇಳು, ನನಗೆ ಬೇಕಾದಾಗ ಒಂದೊಂದು ಸಲ ಹಾಕಿಕೊಳ್ಳುತ್ತೇನೆ. ಉಳಿದ ವೇಳೆ ಹೀಗೆಯೇ ಇರುತ್ತೇನೆ" ಎಂದನು. ಗಂಡನಿಗೆ ತಾನು ಅಂದುಕೊಂಡಷ್ಟು ಸಿಟ್ಟು ಬಾರದುದನ್ನು ಕಂಡು ಗೌರಿಗೆ ಧೈರ್ಯ ಬಂತು. ಅವನನ್ನು ಕೈಹಿಡಿದು ಬಚ್ಚಲುಮನೆಗೆ ಕರೆದುಕೊಂಡು ಹೋಗಿ ಒಲೆಯಲ್ಲಿ ಟೋಪಿ ಆಕಾರಕ್ಕೆ ಕುಳಿತಿದ್ದ ಬೂದಿಯ ಕಡೆ ಕೈತೋರಿಸಿ "ಅಲ್ಲಿದೆ ನೋಡಿ ನಿಮ್ಮ ಟೋಪಿ" ಎಂದಳು.

ಆ ವೇಳೆಗೆ ತಾಯಿ ಕಾಳಮ್ಮನೂ ಅಲ್ಲಿಗೆ ಬಂದು ಟೋಪಿಯ ಬೂದಿ ನೋಡಿದಳು. ಅವಳಿಗೂ ತುಂಬಾ ಸಂತೋಷವಾಯಿತು. ಅವಳೂ "ಹೋಗಲಿ ಬಿಡು ಮಗಾ. ಇನ್ನು ಮೇಲೆ ನೀನು ಹೀಗೇ ಇರಪ್ಪಾ, ಕಣ್ಣು ತುಂಬಾ ನೋಡಿ ಸಂತೋಷ ಪಡುತ್ತೇನೆ. ಗೌರಿಯ ಮೇಲೆ ಕೋಪಿಸಿಕೊಳ್ಳಬೇಡ" ಎಂದಳು. ಕೂಡಲೆ ಈ ಸಂತೋಷದ ಸುದ್ದಿ ತಿಳಿಸಲು ಕಾಳಮ್ಮ ಸಾಹುಕಾರನ ಮನೆಗೆ ಹೋಗಿ ಅವನ ಹೆಂಡತಿಗೆ ಎಲ್ಲ ಸಮಾಚಾರ ಹೇಳಿದಳು. ಆಕೆ ತಕ್ಷಣ ಗಂಡನಿಗೆ ತಿಳಿಸಿದಳು. ಅವರಿಬ್ಬರೂ ಬೀಗಿತ್ತಿ ಕಾಳಮ್ಮನೊಂದಿಗೆ ಕಾರಿನಲ್ಲಿಯೇ ಬಂದು ಮಗಳು ಅಳಿಯನನ್ನು ಕಂಡು ಹಿರಿಹಿರಿ ಹಿಗ್ಗಿದರು. ಇಬ್ಬರನ್ನೂ ಮನಸಾರೆ ಹರಸಿದರು. ಆ ವೇಳೆಗೆ ನೆರೆಹೊರೆಯವರಿಗೆಲ್ಲ ಈ ಸುದ್ದಿ ಹರಡಿತು. ಎಲ್ಲರೂ ಉದ್ಧವಾದ ಕುಳ್ಳನನ್ನು ನೋಡಲು ಅವನ ಮನೆ ಕಡೆ ಹೊರಟರು. ಕುಳ್ಳನ ಮನೆ ಮುಂದೆ ಊರಿಗೆ ಊರೇ ನೆರೆಯಿತು. ಸಾಹುಕಾರನ ಮನೆಯಲ್ಲಿ ಆ ದಿನ ತುಂಬಾ ಸಂಭ್ರಮ. ಮತ್ತೊಂದು ಮದುವೆಯೇ ನಡೆಯುತ್ತಿದೆಯೋ ಅನ್ನುವಷ್ಟು ಸಡಗರ. ಊರಿನ ಜನರಿಗೆಲ್ಲಾ ಮತ್ತೊಮ್ಮೆ ಸಾಹುಕಾರರ ಮನೆಯಲ್ಲಿ ಊಟ ಆಯಿತು. ಊರಿಗೆ ಊರೇ ಸಂತೋಷದಿಂದ ನಲಿಯಿತು. ಎಲ್ಲರೂ ನಾಗರಾಜು ಗೌರಿ ದಂಪತಿಗಳನ್ನು ಮನಸಾರೆ ಹರಸಿ ತಮ್ಮ ತಮ್ಮ ಮನೆಗಳಿಗೆ ಹೋದರು.

# ಒಗ್ಗಟ್ಟಿನಲ್ಲಿ ಬಲವಿದೆ

ಒಂದು ಕಾಡಿನಲ್ಲಿ ಹಲವಾರು ಪ್ರಾಣಿಗಳಿದ್ದವು. ಅದರಲ್ಲಿ ಆನೆಗಳನ್ನು ಬಿಟ್ಟರೆ ಕಾಡೆಮ್ಮೆಗಳದ್ದೇ ಹೆಚ್ಚಿನ ಸಂಖ್ಯೆ. ಹುಲಿ, ಸಿಂಹ, ಕರಡಿ, ಕಿರುಬ, ನರಿ, ಜಿಂಕೆ ಮೊದಲಾದ ನಾನಾ ವಿಧದ ಪ್ರಾಣಿಗಳಿದ್ದವು. ಮಾಂಸಾಹಾರಿ ಪ್ರಾಣಿಗಳು, ಮೇಯಲು ಕಾಡಿನಂಚಿಗೆ ಬಂದ ದನಕರು, ಆಡುಕುರಿ, ಕೋಳಿ ಮುಂತಾದ ಸಾಕುಪ್ರಾಣಿಗಳನ್ನು ಸಿಕ್ಕಿದಾಗ ತಿಂದುಬಿಡುತ್ತಿದ್ದವು. ಅಂತಹ ಬೇಟೆ ಸಿಗದಿದ್ದಾಗ ಹೊಂಚುಕಾದು ಕಾಡಿನಲ್ಲಿದ್ದ ಜಿಂಕೆ, ಮೊಲ, ಕಾಡುಕೋಳಿ ಮುಂತಾದ ಪ್ರಾಣಿಪಕ್ಷಿಗಳನ್ನು ಕೊಂದು ತಿನ್ನುತ್ತಿದ್ದವು. ಆನೆಗಳ ತಂಟೆಗೆ ಸಿಂಹವೊಂದನ್ನು ಬಿಟ್ಟರೆ ಬೇರಾವ ಪ್ರಾಣಿಯೂ ಹೋಗುತ್ತಿರಲಿಲ್ಲ. ಸಿಂಹ ತಿಂದುಮಿಗಿಸಿದ ಆನೆಮಾಂಸವನ್ನು ಇತರ ಕಾಡುಪ್ರಾಣಿಗಳು ತಿಂದು ಆಸೆ ತೀರಿಸಿಕೊಳ್ಳುತ್ತಿದ್ದವು. ಆದರೆ ಸಿಂಹ ಹುಲಿಗಳಿಂದ ಹಿಡಿದು ಯಾವ ಪ್ರಾಣಿಯೂ ಕಾಡೆಮ್ಮೆಗಳ ತಂಟೆಗೆ ಹೋಗುತ್ತಿರಲಿಲ್ಲ. ಕಾಡೆಮ್ಮೆಗಳ ಗುಂಪು ಕಾಣಿಸಿದರೆ ಸಾಕು, ಎಲ್ಲ ಮಾಂಸಾಹಾರಿ ಕಾಡುಪ್ರಾಣಿಗಳೂ ದೂರ ಓಡಿಹೋಗಿ ಬಿಡುತ್ತಿದ್ದವು. ಇದಕ್ಕೆ ಸಾಕಷ್ಟು ಕಾರಣವೂ ಇತ್ತು. ಅದೇನೆಂದರೆ, ಆ ಕಾಡಿನಲ್ಲಿದ್ದ ಕಾಡೆಮ್ಮೆಗಳು ತಮ್ಮಲ್ಲೇ ನಾಲ್ಕು ಗುಂಪುಗಳನ್ನು ಮಾಡಿಕೊಂಡಿದ್ದವು. ಒಂದೊಂದು ಗುಂಪಿಗೂ ಒಂದೊಂದು ಕಾಡುಕೋಣ ಯಜಮಾನ. ಆ ಯಜಮಾನ ತನ್ನ ಗುಂಪಿನ ಮೇಲೆ ಯಾವ ಕಾಡುಪ್ರಾಣಿಗಳಾಗಲೀ, ಮನುಷ್ಯರಾಗಲೀ ದಾಳಿ ಮಾಡದಂತೆ, ಹಗಲೂ ರಾತ್ರಿ ಕಾವಲಿರುತ್ತಿತ್ತು. ಯಾವುದಾದರೂ

ಶತ್ರುಗಳು ತನ್ನ ಗುಂಪಿನ ಕಾಡೆಮ್ಮೆಗಳಿಗೆ ತೊಂದರೆಕೊಡಲು, ಕೊಲ್ಲಲು ಬಂದರೆ ಸಾಕು, ಯಜಮಾನ ಕೋಣ ಜೋರಾಗಿ ಅಬ್ಬರಿಸುತ್ತಾ ಇತ್ತು. ಇದರಿಂದ ಆ ಗುಂಪಿನ ಎಮ್ಮೆಕೋಣಗಳಿಗೆ ಎಚ್ಚರಿಕೆ ಸಿಗುತ್ತಿತ್ತು. ಉಳಿದ ಮೂರೂ ಗುಂಪುಗಳ ಯಜಮಾನರಿಗೆ ಇದರ ಸಹಾಯಕ್ಕೆ ಬರಲು ಅದೇ ಆಹ್ವಾನ ಆಗಿರುತ್ತಿತ್ತು, ಒಡನೆ ಎಲ್ಲ ಮುಂದಾಳುಗಳೂ ಒಟ್ಟಿಗೆ ಸೇರಿ ಬಂದ ಶತ್ರುವನ್ನು ನಾಲ್ಕೂ ಕಡೆಯಿಂದ ಸುತ್ತುಗಟ್ಟಿ ತಮ್ಮ ಕೊಂಬುಗಳಿಂದ ತಿವಿಯುತ್ತಿದ್ದವು., ಕಾಲುಗಳಿಂದ ಮೆಟ್ಟಿಸೀಳಿ ಸಾಯಿಸಿಯೇಬಿಡುತ್ತಿದ್ದವು. ಹೀಗೆ ಪರಸ್ಪರ ಒಗ್ಗಟ್ಟಿನಿಂದಿದ್ದು ಎಲ್ಲ ಗುಂಪುಗಳ ರಕ್ಷಣೆ ಮಾಡಿಕೊಳ್ಳುತ್ತಿದ್ದವು. ಎಲ್ಲ ಗುಂಪುಗಳೂ ಕ್ಷೇಮವಾಗಿದ್ದವು. ಮೃಗರಾಜ ಸಿಂಹಕ್ಕೆ ತನ್ನ ಅಧಿಕಾರ ಇಡೀ ಕಾಡಿನ ಎಲ್ಲ ಪ್ರಾಣಿಗಳ ಮೇಲೆ ನಡೆದರೂ ಈ ಕಾಡೆಮ್ಮೆಗಳ ಮೇಲೆ ನಡೆಯದಲ್ಲಾ ಎಂಬ ಕೊರಗು. ನರಿ, ತೋಳ ಮುಂತಾದವಕ್ಕೆ ದೊಡ್ಡ ಪ್ರಾಣಿ ಆನೆಯ ಮಾಂಸವಾದರೂ ಒಂದಿಲ್ಲೊಮ್ಮೆ ತಿನ್ನಲು ಸಿಗುತ್ತಿದ್ದು, ಆದರೆ ಕಾಡೆಮ್ಮೆ ಮಾಂಸದ ರುಚಿ ನೋಡಿಲ್ಲವಲ್ಲ ಎಂಬ ಕೊರಗು. ಇದು ಪರಿಹಾರಕಾಣದ ಕೊರಗಾಗಿಯೇ ಉಳಿದಿತ್ತು. ಹೀಗಿರುವಾಗ ಒಮ್ಮೆ ಒಂದು ಜಾಣನರಿಗೆ ಒಂದು ಉಪಾಯ ಹೊಳೆಯಿತು. ಅದು ಧೈರ್ಯಮಾಡಿ ಸಿಂಹರಾಜನ ಬಳಿ ಹೋಯಿತು, ವಿನಯದಿಂದ ವಂದಿಸಿತು. ಮೃಗರಾಜನಿಗೆ ತನ್ನ ಉಪಾಯವನ್ನು ವಿವರಿಸಿತು. ಸಿಂಹಕ್ಕೂ ಕಾಡೆಮ್ಮೆ ಮಾಂಸದ ಆಸೆ ಒಂದುಕಡೆ, ತನ್ನ ರಾಜತ್ವದ ಅಧಿಕಾರದ ಆಸೆ ಒಂದುಕಡೆ. ಹೀಗಾಗಿ ಅದೂ ನರಿಯ ಉಪಾಯಕ್ಕೆ ಒಪ್ಪಿಕೊಂಡಿತು.

ಮರುದಿನ ನರಿ ಸಮಯಕಾದು ಒಂದು ಕಾಡೆಮ್ಮೆ ಗುಂಪಿನ ಬಳಿ ಹೋಯಿತು. ಯಜಮಾನ ಕೋಣನಿಗೆ ವಿನಯದಿಂದ ವಂದಿಸಿತು. ಮಹಿಷರಾಜ, ನೀನು ಬಹಳ ಶಕ್ತಿಶಾಲಿ, ಯುಕ್ತಿಶಾಲಿ, ಧೈರ್ಯಶಾಲಿ ಎಂಬುದು ನನಗೆ ಗೊತ್ತು. ನಿನಗೆ ಒಂದು ಮುಖ್ಯ ವಿಷಯವನ್ನು ತಿಳಿಸಲು ನಾನು ಬಂದಿದ್ದೇನೆ. ನಾನು ಹೇಳುವುದನ್ನು ಮೊದಲು ಕೇಳು. ನಂತರ ನಿನಗೆ ಸರಿ ಎನಿಸದಿದ್ದರೆ ನನಗೆ ಶಿಕ್ಷೆಕೊಡು ಎಂದಿತು. ಯಜಮಾನ ಕೋಣ ಅದೇನು ಹೇಳು ನೋಡೋಣ ಎಂದಿತು. ಆದರ ಅಪ್ಪಣೆಯಿಂದ ಉತ್ತೇಜಿತನಾದ ನರಿ ನಿನ್ನೆ ನಾನು ನಿಮ್ಮ ಪಕ್ಕದ ಗುಂಪಿನ ಯಜಮಾನನೊಡನೆ ಮಾತನಾಡುತ್ತಿದ್ದೆ. ಆಗ ಅದು ಈ ಕಾಡಿಗೆಲ್ಲಾ ನಾನೇ ಬಲಿಷ್ಠ. ನನ್ನ ಗುಂಪಿನ ಕಾಡೆಮ್ಮೆಗಳೆಲ್ಲಾ ನನಗೆ ವಿಧೇಯವಾಗಿವೆ. ಉಳಿದ ಗುಂಪುಗಳಿಗೂ ಏನಾದರೂ ಶತ್ರುಬಾಧೆ ಬಂದಾಗ ನನ್ನ ಸಹಾಯ ಬೇಡುತ್ತವೆ. ನಾನು ಹೋಗಿ ಶತ್ರುವನ್ನು ಸಂಹರಿಸಿ ಕಾಪಾಡುತ್ತೇನೆ. ಮೃಗರಾಜಸಿಂಹ ಸಹಾ ನನಗೆ ಹೆದರುತ್ತದೆ ಎಂದಿತು. ನನಗೇನೋ ಅದು ನಿನ್ನನ್ನು ಹೀಗೆ ಹೀಯಾಳಿಸಿದ್ದು ಸರಿಕಾಣಲಿಲ್ಲ. ಅದಕ್ಕೇ ನಿನಗೆ ತಿಳಿಸಿಹೋಗೋಣ ಎಂದು ಬಂದೆ ಎಂದಿತು. ಇದರಿಂದ ಆ ಯಜಮಾನ ಕೋಣನಿಗೆ ತುಂಬಾ ಸಿಟ್ಟುಬಂದಿತು. ಅಲ್ಲಾ, ತನಗಿಂತ ತುಂಬ ಚಿಕ್ಕ ವಯಸ್ಸಿನದು ಆ ಕೋಣ. ನ್ಯಾಯವಾಗಿ ನಾನು ಈ

ಕಾಡಿನಕೋಣಗಳಿಗೆಲ್ಲಾ ಮುಖಂಡ. ಅಂತಹುದರಲ್ಲಿ ಆ ಕೋಣ ತಾನೇ ಯಜಮಾನ ಎನ್ನಬೇಕಾದರೆ, ಎಷ್ಟು ಸೊಕ್ಕು ಅದಕ್ಕೆ? ಇರಲಿ ಅದಕ್ಕೆ ಸಮಯ ಕಾದು ಸರಿಯಾಗಿ ಬುದ್ಧಿ ಕಲಿಸುತ್ತೇನೆ ಎಂದುಕೊಂಡಿತು. ನರಿ ಇದೇ ರೀತಿ ನಾಲ್ಕು ಗುಂಪುಗಳ ಯಜಮಾನ ಕೋಣಗಳಿಗೂ ಹೇಳಿತು. ಅವೆಲ್ಲ ಪರಸ್ಪರ ದ್ವೇಷಿಸುವಂತೆ ಮಾಡಿತು. ನಂತರ ಮೃಗರಾಜ ಸಿಂಹದ ಬಳಿ ಹೋಯಿತು. ಮೃಗರಾಜ ಈಗ ನೀನು ಧೈರ್ಯಮಾಡು, ಯಾವುದಾದರೊಂದು ಕಾಡೆಮ್ಮೆ ಗುಂಪಿನ ಮೇಲೆರಗು. ಮುಂದಿನ ತಮಾಷೆ ನೋಡುವಂತೆ ಎಂದಿತು.

ಈ ನರಿಯ ಮಾತನ್ನು ನಂಬಿ ನಾನು ಕಾಡೆಮ್ಮೆಗಳ ತಂಟೆಗೆ ಹೋದರೆ, ಹಿಂದೊಮ್ಮೆ ನಮ್ಮ ತಾತ ಹೋಗಿ ಕೋಣಗಳ ಕೈಲಿ ತಿವಿಸಿಕೊಂಡು ಪ್ರಾಣಬಿಟ್ಟಿತ್ತಲ್ಲ, ಹಾಗಾದರೆ ಏನು ಗತಿ? ಎಂದು ಹೆದರಿತು. ನರಿ ತುಂಬಾ ಧೈರ್ಯ ಹೇಳಿದ ಮೇಲೆ ಮೆಲ್ಲಗೆ ಹೋಗಿ ಒಂದು ಗುಂಪಿನ ಹಿಂದುಗಡೆ ಇದ್ದ ಒಂದು ಕಾಡೆಮ್ಮೆ ಕರುವಿನ ಮೇಲೆರಗಿತು. ಅದನ್ನು ಕಚ್ಚಿ ಎಳೆದುಕೊಂಡು ತನ್ನ ಗವಿಗೆ ಬಂದುಬಿಟ್ಟಿತು. ಇದನ್ನು ಕಂಡ ಆ ಗುಂಪಿನ ಯಜಮಾನ ಕೋಣ ಸಹಾಯಕ್ಕಾಗಿ ಗುಟುರು ಹಾಕಿತು. ಆದರೆ ನರಿಯ ಮಾತಿನಿಂದ ಕೋಪಗೊಂಡಿದ್ದ ಇತರ ಗುಂಪುಗಳ ಯಜಮಾನರುಗಳು ಸಹಾಯಕ್ಕೆ ಬರಲೇ ಇಲ್ಲ. ಈ ಯಜಮಾನ ಸಿಂಹಕ್ಕೆ ಹೆದರಿ ಸುಮ್ಮನಾಯಿತು. ಸಿಂಹ ಕಾಡೆಮ್ಮೆ ಕರುವನ್ನು ಕೊಂದು ಅದರ ಮಾಂಸವನ್ನು ತಾನೂ ತಿಂದು ನರಿಗೂ ಕೊಂಚ ಕೊಟ್ಟಿತು. ಇತರ ಗುಂಪುಗಳ ಯಜಮಾನ ಕೋಣಗಳು ಇದನ್ನು ಕಂಡು ಖುಷಿಪಟ್ಟವು. ಆ ಗುಂಪಿನ ಯಜಮಾನನಿಗೆ ನೋಡಿದೆಯಾ, ನೀನೇ ನಮ್ಮೆಲ್ಲರ ಯಜಮಾನ, ರಕ್ಷಕ ಎನ್ನುತ್ತಿದ್ದೆಯಲ್ಲಾ, ಈಗ ನಿನ್ನ ಗುಂಪಿನ ಒಂದು ಕರುವನ್ನೂ ಕಾಪಾಡಲಾಗದ ಹೇಡಿ ನೀನಾದೆ ಎಂದು ಗೇಲಿಮಾಡಿದವು. ಸಿಂಹಗಳ ಈ ರೀತಿಯ ಕಾಡೆಮ್ಮೆಗಳ ಬೇಟೆ ಅವಿರತವಾಗಿ ನಡೆಯತೊಡಗಿತು. ಸಿಂಹ ಮಾತ್ರವಲ್ಲದೆ ಹುಲಿ ಚಿರತೆಗಳೂ ಸಮಯ ಕಾದು ಕೋಣಗಳ ಗುಂಪುಗಳ ಮೇಲೆರಗಿ ತಮ್ಮ ಕೈಲಾಗುವಷ್ಟು ಬೇಟೆ ಆಡುತ್ತಿದ್ದವು. ಹೀಗಾಗಿ ಕಾಡೆಮ್ಮೆಗಳ ಸಂಖ್ಯೆ ಎಲ್ಲ ಗುಂಪುಗಳಲ್ಲೂ ಕಡಿಮೆಯಾಗುತ್ತಾ ಬಂತು. ಇದಕ್ಕೆಲ್ಲಾ ಆ ಕೆಟ್ಟ ನರಿಯ ಮಾತನ್ನು ತಾವು ನಂಬಿದ್ದೇ ಕಾರಣ ಎಂದು ಎಲ್ಲ ಯಜಮಾನ ಕೋಣಗಳಿಗೂ ತಿಳುವಳಿಕೆಬಂತು. ಒಂದು ದಿನ ನಾಲ್ಕೂ ಗುಂಪುಗಳ ಯಜಮಾನ ಕೋಣಗಳೂ ಒಂದೆಡೆ ಸೇರಿದವು. ಈ ರೀತಿ ಆಗಲು ತಾವು ನರಿಯ ಮಾತನ್ನು ನಂಬಿದ್ದೇ ಕಾರಣ ಎಂದು ಮಾತಾಡಿಕೊಂಡವು; ತಾವು ಮತ್ತೆ ಹಿಂದಿನಂತೆ ಒಗ್ಗಟ್ಟಿನಿಂದಿದ್ದು ತಮ್ಮೆಲ್ಲರ ಗುಂಪನ್ನೂ ರಕ್ಷಿಸಿಕೊಳ್ಳಬೇಕೆಂದೂ ನಿರ್ಧರಿಸಿಕೊಂಡವು

ಮರುದಿನ ಒಂದು ಹುಲಿ ಒಂದು ಕಾಡೆಮ್ಮೆ ಗುಂಪಿನ ಒಂದು ಗಬ್ಬದ ಎಮ್ಮೆಯ

ಮೇಲೆರಗಿತು. ಒಡನೆ ಆ ಗುಂಪಿನ ಯಜಮಾನ ಸಹಾಯಕ್ಕಾಗಿ ಗುಟುರುಹಾಕಿತು. ಕ್ಷಣಾರ್ಧದಲ್ಲಿ ಎಲ್ಲ ಗುಂಪಿನ ಮುಖಂಡ ಕೋಣಗಳು ಇತರ ಕೆಲವು ಕೋಣಗಳೊಂದಿಗೆ ಓಡಿಬಂದವು. ಹುಲಿಯನ್ನು ನಾಲ್ಕೂ ದಿಕ್ಕುಗಳಿಂದ ಸುತ್ತುವರಿದವು, ಕೊಂಬುಗಳಿಂದ ತಿವಿದವು, ಕಾಲುಗಳಿಂದ ಮೆಟ್ಟಿದವು. ಹೀಗೆ ಮಾಡಿ ಆ ಹುಲಿಯನ್ನು ಕೊಂದುಹಾಕಿದವು. ಮತ್ತೊಂದು ದಿನ ಬೇಟೆಗೆ ಬಂದ ಒಂದು ಸಿಂಹಕ್ಕೂ ಇದೇ ಗತಿ ಆಯಿತು. ಆಗ ಮೃಗರಾಜ ಸಿಂಹಕ್ಕೆ ತನ್ನ ಜತೆಗಾರ ಸಿಂಹ ಸಾಯಲು ಆ ನರಿಯ ಮಾತನ್ನು ನಂಬಿ ತಾವು ದುಡುಕಿದ್ದೇ ಕಾರಣ ಎಂದು ಅರಿವಾಯಿತು. ಅದು ನೇರವಾಗಿ ಆ ನರಿಯ ಬಳಿಗೆ ಹೋಗಿ ಅದನ್ನು ಮಾತಿಗೆ ಎಳೆದು, ಅದರ ಮೇಲೆರಗಿ ಕೊಂದೇಬಿಟ್ಟಿತು.ಅಲ್ಲಿಂದ ಮುಂದೆ ಆ ಕಾಡಿನ ಎಲ್ಲ ಮಾಂಸಾಹಾರಿ ಪ್ರಾಣಿಗಳೂ ಕಾಡೆಮ್ಮೆಗಳ ಕಂಡರೆ ಸಾಕು ಹಿಂದಿನಂತೆ ಹೆದರುತ್ತಿದ್ದವು. ಆ ಗುಂಪುಗಳಿಂದ ದೂರವೇ ಇರುತ್ತಿದ್ದವು. ಕಾಡೆಮ್ಮೆಗಳ ಬಳಗ ನಿಶ್ಚಿಂತೆಯಿಂದ ಬಾಳುತ್ತಾ ತಮ್ಮ ಬಳಗವನ್ನು ಬೆಳೆಸಿಕೊಂಡು ಅನ್ಯೋನ್ಯತೆಯಿಂದ ಸುಖವಾಗಿದ್ದವು.ಈ ಕಥೆಯಿಂದ "ಒಗ್ಗಟ್ಟಿನಲ್ಲಿ ಬಲವಿದೆ" ಎಂಬ ತತ್ವ ನಮ್ಮ ಮಕ್ಕಳು ಕಲಿಯುವಂತಾಗಲಿ

# ರುದ್ರಾಚಾರಿಯ ಶಿಲ್ಪಗಳು

ಚಿತ್ರದುರ್ಗದ ಬಳಿ ನಾಯಕನಪಾಳ್ಯ ಎಂಬ ಒಂದು ಸಣ್ಣಹಳ್ಳಿ ಇದೆ. ಹಿಂದೆ ಈ ಊರಿನಲ್ಲಿ ರಾಮನಾಯ್ಕನೆಂಬ ಒಬ್ಬ ಶ್ರೀಮಂತ ರೈತನಿದ್ದ. ಒಂದು ದಿನ ಅವನು ಹೊಲ ಉಳುತ್ತಿದ್ದಾಗ ನೇಗಿಲು ಒಂದು ದೊಡ್ಡ ಕಲ್ಲಿಗೆ ಸಿಕ್ಕಿಕೊಂಡಿತು. ಅವನು ಆ ಕಲ್ಲಿನ ಕೆಳಗೆ ಹಿರಿಯರು ಯಾರೋ ಹೂತಿಟ್ಟ ಹಣ ಇರಬಹುದೆಂದು ಯೋಚಿಸಿದ. ಬಹಳ ಆಸೆಯಿಂದ ಕಲ್ಲಿನ ಸುತ್ತ ಮಣ್ಣು ಬಿಡಿಸಿದ ಮತ್ತು ರಾತ್ರಿವೇಳೆ ಕಲ್ಲನ್ನು ಹೊರತೆಗೆದ. ಆದರೆ ಅದರ ಕೆಳಗೆ ಯಾವ ನಿಧಿಯೂ ಇರಲಿಲ್ಲ. ರಾಮನಾಯ್ಕನಿಗೆ ಬಹಳ ನಿರಾಸೆ ಆಯಿತು. ಆ ಕಲ್ಲನ್ನು ಹೊಲದ ಬದುವಿನ ಮೇಲೆ ಒಂದುಕಡೆ ಹಾಕಿಸಿದ.

ಅದೇ ಊರಿನಲ್ಲಿ ರುದ್ರಾಚಾರಿ ಎಂಬ ಒಬ್ಬ ಶಿಲ್ಪಿ ಇದ್ದ. ಒಂದು ದಿನ ಅವನು ರಾಮಾನಾಯ್ಕನ ಹೊಲದ ಬದುವಿನಲ್ಲಿ ಬಿದ್ದಿದ್ದ ಆ ಕಲ್ಲನ್ನು ಕಂಡ. ಅದು ಮೂರ್ತಿ ಕಡೆಯಲು ಉತ್ತಮ ಕಲ್ಲೆನಿಸಿತು ಅವನಿಗೆ . ಕಲ್ಲನ್ನು ನೀರಿನಿಂದ ತೊಳೆದ. ಅಲ್ಲಲ್ಲಿ ಸುತ್ತಿಗೆಯಿಂದ ಹೊಡೆದು ಪರೀಕ್ಷಿಸಿದ, ಉತ್ತಮ ಶಿಲೆಯೆಂದು ನಿರ್ಧರಿಸಿದ. ಆ ಕಲ್ಲನ್ನು ಏತಕ್ಕಾಗಿ ಬದುವಿನ ಮೇಲೆ ಹಾಕಿರುವುದೆಂದು ರಾಮನಾಯ್ಕನನ್ನು ಕೇಳಿದ. ರಾಮನಾಯ್ಕ ಅದರ ಕಥೆಯನ್ನೆಲ್ಲ ಹೇಳಿದ. ಅದರ ಮೇಲೆ ಸಿಟ್ಟನ್ನೂ ಪ್ರಕಟಿಸಿದ. ರುದ್ರಾಚಾರಿ ಆ ಕಲ್ಲನ್ನು ತನಗೆ ಕೊಟ್ಟರೆ ಅದರಿಂದ ಒಂದು ಉತ್ತಮ ವಿಗ್ರಹ ತಯಾರಿಸುವುದಾಗಿ ಹೇಳಿದ. ಕೂಡಲೆ ರಾಮನಾಯ್ಕ ಆಳುಗಳನ್ನು ಕರೆಯಿಸಿದ. ಗಾಡಿ ಕಟ್ಟಿಸಿ ಕಲ್ಲನ್ನು

ಅದರಲ್ಲಿ ಹಾಕಿ ರುದ್ರಾಚಾರಿ ಮನೆಗೆ ಕಳುಹಿಸಿಯೇಬಿಟ್ಟ. ಆಚಾರಿ ಒಂದು ಒಳ್ಳೆಯ ದಿನ ಪೂಜೆಮಾಡಿ ವಿಗ್ರಹ ಕಡೆಯಲಾರಂಭಿಸಿದ. ಅತ್ಯಂತ ಸುಂದರ ವಿಗ್ರಹ ತಯಾರಿಸಬೇಕೆಂದು ತುಂಬು ಶ್ರದ್ಧೆಯಿಂದ ಕೆಲಸಮಾಡುತ್ತಿದ್ದ. ಕಲ್ಲಿನ ಅನೇಕ ಭಾಗಗಳನ್ನು ಉಳಿಸುತ್ತಿಗೆಯಿಂದ ತೆಗೆದುಹಾಕತೊಡಗಿದ. ಆಶ್ಚರ್ಯವೆಂದರೆ ಇವನು ಒಂದೊಂದು ಪೆಟ್ಟು ಹಾಕಿದಾಗಲೂ ಕಲ್ಲು ಸಹಾ ತಾನೊಂದು ಸುಂದರ ವಿಗ್ರಹವಾದೇನೆಂದು ಅರಿತು ಸಂತೋಷದಿಂದ ಹಿಗ್ಗುತ್ತಿದ್ದಂತೆ ಅವನಿಗನ್ನಿಸುತ್ತಿತ್ತು. ಸುಮಾರು ಎರಡು ತಿಂಗಳು ಹೀಗೆಯೇ ಕಳೆಯಿತು. ಕಲ್ಲು ಒಂದು ಪುರುಷಾಕೃತಿ ತಳೆಯುತ್ತಿದೆಯೆಂದು ರುದ್ರಾಚಾರಿಗನ್ನಿಸಿತು. ತಾನೊಂದು ಸುಂದರಮೂರ್ತಿ ಆದೇನೆಂದು ಕಲ್ಲಿಗೂ ತೃಪ್ತಿ ಆದಂತಿತ್ತು.

ಅಷ್ಟರಲ್ಲಿ ಪಕ್ಕದೂರಿನ ಒಬ್ಬ ಶಿಲ್ಪಿ ಆ ಊರಿಗೆ ಬಂದಿದ್ದ. ಅವನು ಈ ವಿಗ್ರಹದ ಕೆತ್ತನೆ ಕೆಲಸವನ್ನು ಗಮನಿಸಿದ. ಅವನಿಗೆ ರುದ್ರಾಚಾರಿ ಬಗೆಗೆ ಮೊದಲಿನಿಂದಲೂ ಹೊಟ್ಟೆಕಿಚ್ಚು. ಇವನ ಈ ಕೃತಿಯನ್ನು ಕೆಡಿಸಬೇಕೆಂದು ನಿರ್ಧರಿಸಿದ. ಕಲ್ಲಿನ ಬಳಿಹೋಗಿ ಕೆಲಸವನ್ನು ಸೂಕ್ಷ್ಮವಾಗಿ ಗಮನಿಸಿದ. ಅದೊಂದು ಅತ್ಯುತ್ತಮ ಮೂರ್ತಿ ಆಗುವುದರಲ್ಲಿ ಸಂಶಯ ಉಳಿಯಲಿಲ್ಲ. ಒಡನೆ ರುದ್ರಾಚಾರಿ ಇಲ್ಲದ ಸಮಯ ನೋಡಿ ಕಲ್ಲಿಗೆ 'ರುದ್ರ ನಿನ್ನಂತಹ ಉತ್ತಮ ಕಲ್ಲನ್ನು ಒಡ್ಡು ಉಳಿ, ದಪ್ಪ ಸುತ್ತಿಗೆಗಳಿಂದ ಹೊಡೆದು ನೋವು ಮಾಡುತ್ತಿದ್ದಾನೆ. ನಮ್ಮೂರಿನಲ್ಲಿ ನೋಡು. ನಾವೆಲ್ಲ ಸಣ್ಣುಳಿಗಳಿಂದ ಸೂಕ್ಷ್ಮವಾಗಿ ಕಡೆದು ಎಂತೆಂತಹ ಸುಂದರಮೂರ್ತಿಗಳನ್ನು ಮಾಡುತ್ತೇವೆ. ಅವನಿಗೆ ನಿನ್ನನ್ನು ಕಂಡರಾಗದು. ಅದಕ್ಕಾಗಿ ನಿನಗೆ ಹೀಗೆ ಹಿಂಸೆ ಮಾಡುತ್ತಿದ್ದಾನೆ. ನಿನ್ನನ್ನು ಕಡಿದು ಹಾಳುಮಾಡುವುದೇ ಅವನ ಗುರಿ' ಎಂದು ದುರ್ಬೋಧನೆ ಮಾಡಿದ. ಇದರಿಂದ ಕಲ್ಲಿನ ಮನಸ್ಸು ಕಲಕಿತು. ರುದ್ರಾಚಾರಿಯ ಬಗ್ಗೆ ಅಸಹನೆ, ದ್ವೇಷ ಬೆಳೆಯಿತು. ಹೊಸಬನೊಡನೆ ಆ ಕಲ್ಲಿನ ಆತ್ಮ ಪಕ್ಕದ ಊರಿಗೆ ಹೋಗಿ ನೋಡಿತು. ಅಲ್ಲಿ ನಾಲ್ಕಾರು ಸುಂದರ ವಿಗ್ರಹಗಳಿದ್ದವು. ಒಬ್ಬ ಆಚಾರಿ ಒಂದು ವಿಗ್ರಹವನ್ನು ಸಣ್ಣ ಉಳಿಯಿಂದ ಸೂಕ್ಷ್ಮವಾಗಿ ಕಡೆಯುತ್ತಿದ್ದ. ಜೋರಾದ ಹೊಡೆತಗಳಿಲ್ಲ. ಎಲ್ಲ ನಯನಾಜೂಕಿನ ಕೆಲಸ. ಮೂರ್ತಿಗಳ ಕೈಗಳಲ್ಲಿ ಕತ್ತುಗಳಲ್ಲಿ ಆಭರಣಗಳು ಸಹಾ ಸುಂದರವಾಗಿ ಕೆತ್ತಲ್ಪಟ್ಟಿದ್ದವು. ಇದನ್ನೆಲ್ಲ ನೋಡಿ ರುದ್ರಾಚಾರಿಯ ಬಗೆಗೆ ಕೋಪ. ದ್ವೇಷಗಳಿಂದ ಕೂಡಿ ಹಿಂತಿರುಗಿತು ಕಲ್ಲಿನ ಆತ್ಮ. ಈ ವೇಳೆ ರುದ್ರಾಚಾರಿ ತನ್ನ ಮಾವನ ಊರಿಗೆ ಹೋಗಿದ್ದ. ಅಲ್ಲಿ ಯಾರೋ ಹಿಂದಿನ ತಲೆಮಾರಿನವರು ಅರ್ಧ ಕಡೆದಿದ್ದ ಒಂದು ವಿಗ್ರಹಬಿದ್ದಿತ್ತು. ಊರ ಮುಂದೆ ದಾರಿ ಪಕ್ಕದಲ್ಲಿ ಬಿದ್ದಿದ್ದ ಅದರ ಮೇಲೆ ಮಕ್ಕಳೆಲ್ಲ ಹೇಸಿಗೆ ಮಾಡುತ್ತಿದ್ದರು. ಆದರೂ ಉತ್ತಮ ಶಿಲ್ಪಿಯಾದವನಿಗೆ ಅದು ಒಳ್ಳೆ ಜಾತಿಯ ಕಲ್ಲೆಂದೂ ಅದನ್ನು ಕಡೆದು ವಿಗ್ರಹ ಮಾಡಿದರೆ ತಾನು ಊರಲ್ಲಿ

ಮಾಡುತ್ತಿರುವ ಮೂರ್ತಿಗೆ ಸರಿ ಜೋಡಿ ಆಗುವುದೆಂದು ತೋಳೆಯಿತು. ಆ ಊರಿನ ಹಿರಿಯರನ್ನು ಕಂಡು ಮಾತನಾಡಿದ ಅವರ ಅನುಮತಿ ಪಡೆದು ಆ ಕಲ್ಲನ್ನು ಗಾಡಿ ಮೇಲೆ ಪೇರಿಸಿಕೊಂಡೇ ಊರಿಗೆ ಬಂದ.ಮರುದಿನ ರುದ್ರಾಚಾರಿ ಕೆಲಸಕ್ಕೆ ಕೈಹಾಕಿದ. ಒಡನೆ ಕಲ್ಲು ಅವನ ಮೇಲೆ ಹೌಹಾರಿತು. ಇವನಿಗೆ ಸಂಶಯ, ಆಶ್ಚರ್ಯ, ಗಾಬರಿ. 'ಕಲ್ಲು ಪಕ್ಕದ ಊರಿನಲ್ಲಿ ಎಷ್ಟು ನಯವಾಗಿ ಕೆಲಸ ಮಾಡುತ್ತಾರೆ. ನೀನು ನನಗೆ ಬೇಕೆಂದೇ ಬಲವಾಗಿ ಹೊಡೆದು ಅಕ್ಕಪಕ್ಕವನ್ನೆಲ್ಲ ಕತ್ತರಿಸಿ ನನ್ನನ್ನು ನೋಯಿಸಿ ವಿಕಾರಗೊಳಿಸುತ್ತಿದ್ದೀಯಾ' ಎಂದು ಹೇಳಿತು. ರುದ್ರಾಚಾರಿ ಸಮಾಧಾನದಿಂದ 'ಪಕ್ಕದ ಊರಿನವರು ಕೆಲಸ ಮಾಡುತ್ತಿರುವುದು ಬಳಪದ ಕಲ್ಲೆಂಬ ಮೃದುಕಲ್ಲಿನಲ್ಲಿ. ಅದು ಮೂರ್ತಿ ಆದಮೇಲೂ ಯಾರಾದರೂ ಕೊಂಚ ತಗಲಿಸಿದರೂ ಭಿನ್ನವಾಗಿಬಿಡುತ್ತದೆ. ಅಷ್ಟು ಮೃದು; ಆದುದರಿಂದ ಅದನ್ನು ಸಣ್ಣ ಉಳಿ, ಚಾಣಗಳಿಂದ ಕಡೆಯುತ್ತಾರೆ. ಆದರೆ ನೀನಾದರೋ ಗಟ್ಟಿ, ಒಮ್ಮೆ ವಿಗ್ರಹವಾಗಿ ಬಿಟ್ಟರೆ ನಂತರ ಶತಶತಮಾನಗಳವರೆಗೂ ತಾಳಿಕೆ ಬರುವಂತಹುದು. ಬಳಪದ ಕಲ್ಲಿನ ಕೆಲಸ ಸುಲಭ, ತಾತ್ಕಾಲಿಕ; ಗಟ್ಟಿಕಲ್ಲಿನ ಕೆಲಸ ಕಷ್ಟ, ಶಾಶ್ವತ ಎಂದೆಲ್ಲ ವಿವರಣೆ ನೀಡಿದ. ಆದರೂ ಕಲ್ಲಿಗೆ ಸಮಾಧಾನ ಆಗಲಿಲ್ಲ. ಅವನ ಬಗೆಗಿನ ದ್ವೇಷ ಆರಲಿಲ್ಲ. ಇನ್ನು ಮುಂದೆ ತನ್ನನ್ನು ರುದ್ರಾಚಾರಿ ಮುಟ್ಟಕೂಡದೆಂದು ಆಣತಿಯನ್ನೇ ಮಾಡಿತು ಕಲ್ಲಿನ ಆತ್ಮ. ರುದ್ರಾಚಾರಿಗೆ ತುಂಬಾ ಬೇಸರವಾಯಿತು. ತನ್ನ ಮನಸ್ಸಿನಲ್ಲಿ ಮೂಡಿಸಿಕೊಂಡ ಸುಂದರ ವಿಗ್ರಹ ಕಡೆಯಲು ಆಗದೇ ಹೋಯಿತಲ್ಲ ಎಂದು ಕೊರಗಿದ. ಎರಡನೆ ಕಲ್ಲನ್ನು ಕೆತ್ತಲು ಉತ್ಸಾಹ ಬರಲಿಲ್ಲ. ಎರಡನ್ನೂ ಹಾಗೆಯೇ ಬಿಟ್ಟ.

ಇತ್ತ ಪಕ್ಕದ ಊರಿನ ಆಚಾರಿ ಇದೇ ಸಂದರ್ಭವನ್ನೇ ಕಾಯುತ್ತಿದ್ದ ರಾಮ ನಾಯಕನಿಗೆ ಹೇಳಿ ಆ ಕಲ್ಲನ್ನು ತಾನು ತೆಗೆದುಕೊಂಡು ಹೋದ. ತನ್ನ ಕಲ್ಪನೆಯಂತೆ ಅದನ್ನು ಕೆತ್ತಲಾರಂಭಿಸಿದ. ಅವನೇನೂ ಉತ್ತಮ ಶಿಲ್ಪಿ ಅಲ್ಲ. ಜೊತೆಗೆ ಗಟ್ಟಿ ಕಲ್ಲಿನ ಕೆತ್ತನೆ ಏನೇನೂ ಬಾರದು. ಹೀಗಾಗಿ ಅದರ ರೂಪ ವಿಕಾರವಾಗತೊಡಗಿತು. ಕಡೆಗೆ ತನಗೇಕೆ ಕೆಟ್ಟಹೆಸರು ಎಂದು ಕೆಲಸವನ್ನೇ ನಿಲ್ಲಿಸಿದ. ನಂತರದಲ್ಲಿ ಊರಿನ ಇತರ ಒಬ್ಬೊಬ್ಬರು ಶಿಲ್ಪಿಗಳು ಕೈ ಆಡಿಸಿ ನೋಡಿದರು. ಒಬ್ಬೊಬ್ಬರ ಕಲ್ಪನೆ ಒಂದೊಂದು, ಕೈಚಳಕ ಒಂದೊಂದು ರೀತಿ. ಹೀಗಾಗಿ ಕಡೆಗೆ ಆ ಕಲ್ಲು ಸುಂದರ ವಿಗ್ರಹವಾಗುವ ಬದಲು, ಒಂದು ಅಕರಾಳ ವಿಕರಾಳ ರೂಪ ಪಡೆಯಿತು. ಅನೇಕರು ರುದ್ರಾಚಾರಿಯೇ ಮುಗಿಸಿದ್ದರೆ ಎಂತಹ ಸುಂದರ ವಿಗ್ರಹವಾಗಿರುತ್ತಿತ್ತು. ಇದರ ರೂಪ ಹೀಗೆ ವಿಕಾರವಾಯಿತಲ್ಲ ಎಂದು ಮರುಗಿದರು. ಕಲ್ಲೂ ಸಹಾ ತಾನೊಂದು ಉತ್ತಮ ಮೂರ್ತಿ ಆಗುವ ಅವಕಾಶ ತಪ್ಪಿಸಿಕೊಂಡೆನಲ್ಲ ಎಂದು ಕೊರಗುತ್ತಾ ಬಿದ್ದಿತ್ತು.

## ಶ್ರದ್ಧಾವಾನ್ ಲಭತೇ ಸರ್ವಂ ಅರ್ಥಾತ್ ಶ್ರದ್ಧೆಯಿಂದ ಸಾಧಿಸಲಾಗದ್ದು ಯಾವುದೂ ಇಲ್ಲ

ಬಹಳ ಹಿಂದಿನ ಕಾಲದಲ್ಲಿ ಒಂದೂರಿನಲ್ಲಿ ಒಬ್ಬ ಜಮೀನುದಾರನಿದ್ದನು. ಅವನಿಗೆ ಹೊಲ, ಗದ್ದೆ, ತೋಟಗಳು ಸಾಕಷ್ಟಿದ್ದವು. ಗೋ ಸಂಪತ್ತಂತೂ ಹೇಳುವುದೇ ಬೇಡ. ಅಷ್ಟು ಇತ್ತು. ಒಳ್ಳೆಯ ಅನುಕೂಲವಾದ ಮನೆ. ದುಡ್ಡು ಕಾಸಿನ ಲೇವಾದೇವಿ ಸಹಾ ಮಾಡುತ್ತಿದ್ದು, ಆ ಸುತ್ತಿಗೇ 'ಸಾಹುಕಾರ' ಎನಿಸಿಕೊಂಡಿದ್ದ ಆತ. ಅವನಿಗೆ ಒಬ್ಬನೇ ಮಗ. ತುಂಬಾ ಮುದ್ದಾಗಿ ಪ್ರೇಮದಿಂದ ಸಾಕಿದ್ದನು. ಅವನಿಂದ ಯಾವ ಕೆಲಸವನ್ನೂ ಮಾಡಿಸುತ್ತಿರಲಿಲ್ಲ. ತುಂಬಾ ಸುಖವಾಗಿಯೇ ಬೆಳೆದ. ಶಾಲೆಗೆ ಸೇರಿಸಿದರೆ, ಉಪಾಧ್ಯಾಯರು ಒಮ್ಮೊಮ್ಮೆ ಶಿಕ್ಷೆ ನೀಡುತ್ತಾರೆಂದು ಹೆದರಿ, ಶಾಲೆಗೇ ಸೇರಿಸಲಿಲ್ಲ. ಹೀಗಾಗಿ ವಿದ್ಯೆ ಒಂದೇ ಕೊರತೆ ಆಗಿತ್ತು, ಆ ಮಗನಿಗೆ. ಅವನು ಪ್ರಾಪ್ತ ವಯಸ್ಕನಾದಾಗ, ಅಂದರೆ 20 ವರ್ಷ ತುಂಬಿದಾಗ ತಂದೆತಾಯಿಗಳು ಅವನ ಮದುವೆ ವಿಚಾರ ಮಾಡತೊಡಗಿದರು. ಅಕ್ಕಪಕ್ಕದ ಅನೇಕ ಕನ್ಯಾಪಿತೃಗಳು ಇವರ ಮಗನಿಗೆ ಹೆಣ್ಣುಕೊಡಬಯಸಿದರು. ಎಲ್ಲರಿಗೂ ಇವರ ಆಸ್ತಿಯ ಮೇಲೇ ದೃಷ್ಟಿ. ಆದರೆ ಹುಡುಗನಿಗೆ ಏನೂ ವಿದ್ಯವೇ ಇಲ್ಲವಲ್ಲ ಎಂದು ಹಿಂದೇಟು. ಆದರೂ ವಿದ್ಯೆ ಇಲ್ಲದಿದ್ದರೇನು? ಆಸ್ತಿ ತುಂಬಾ ಇದೆ. ಹುಡುಗ ರೂಪವಂತ, ಗುಣವಂತ. ತಾಯಿತಂದೆಯರು ಒಳ್ಳೆಯವರು ಎಂಬುದನ್ನು ಗಮನಿಸಿ ಪಕ್ಕದ ಊರಿನ ಒಂದು ಹುಡುಗಿಯೊಡನೆ ಆತನ ಮದುವೆ ಗೊತ್ತಾಯಿತು.

ಮದುವೆ ತುಂಬಾ ಸಂಭ್ರಮದಿಂದಲೇ ಆಯಿತು. ಹುಡುಗಿ ಗಂಡನ ಮನೆಗೆ ಬಂದಳು. ಕೆಲವು ದಿನಗಳು ಅವರು ಸುಖವಾಗಿದ್ದರು.

ಕೆಲವು ದಿನಗಳ ಮೇಲೆ ಆ ಹುಡುಗಿ ತಂದೆಯ ಮನೆಗೆ ಹೋಗಿಬರಲು ಆಸೆಪಟ್ಟಳು. ಜಮೀನುದಾರರು ಎತ್ತಿನಗಾಡಿ ಕಟ್ಟಿಸಿ ಮಗ ಸೊಸೆಯನ್ನು ಕಳಿಸಿಕೊಟ್ಟರು. ದಾರಿಯಲ್ಲಿ ಒಂದು ಕಡೆ ಒಂದು ಮುತ್ತುಗದ ಮರ ಕಾಣಿಸಿತು. ಅದರ ರೆಂಬೆ ಕೊಂಬೆಗಳಲಿಲ್ಲಾ ಕೆಂಪು ಹೂಗಳು. ಮೆತ್ತಿಕೊಂಡಿದ್ದವು. ಒಡನೆ ಆ ಹೂಗಳನ್ನು ತನ್ನ ಹೆಂಡತಿ ತಲೆಗೆ ಮುಡಿದುಕೊಳ್ಳಲು ತಂದುಕೊಡಬೇಕೆನ್ನಿಸಿತು, ಗಂಡನಿಗೆ. ಒಡನೆ ಗಾಡಿ ನಿಲ್ಲಿಸಲು ಹೇಳಿ ನಿಲ್ಲಿಸಿದನು. ಹೆಂಡತಿಯು ಅದೇಕೆಂದು ಕೇಳಿದಳು. ನಿನಗೆ ಮುಡಿಯಲು ಆ ಸುಂದರ ಹೂಗಳನ್ನು ತಂದು ಕೊಡುತ್ತೇನೆ ತಾಳು ಎಂದು ಹೇಳಿದನು. ತಕ್ಷಣ ಹೆಂಡತಿಯು, ನಿಮಗೆ ಏನೂ ತಿಳಿಯದು. ಅದು ವಾಸನೆ ಇಲ್ಲದ ಹೂ. ಅದನ್ನಾರು ಮುಡಿಯುವುದಿಲ್ಲ ನಡಿಯಿರಿ ಎಂದಳು. ಗಾಡಿ ಮುಂದೆ ಹೊರಟಿತು. ಅವರು ಮಾವನ ಮನೆಗೆ ಮುಟ್ಟಿದರು. ಆ ವೇಳೆ ಮಧ್ಯಾಹ್ನವಾಯಿತು. ಎರಡು ದಿನಗಳಿಂದ ಬರುತ್ತಿದ್ದ ಮಳೆ ನಿಂತು ಬಿಸಿಲು ಬಂದಿತ್ತು. ಮನೆ ಕೊಂಚ ಸೋರಿ ಅನೇಕ ವಸ್ತುಗಳು ಕೊಂಚ ನೆನೆದುಹೋಗಿದ್ದವು. ಮನೆಯವರೆಲ್ಲ ಅಂಗಳದಲ್ಲಿ ಚಾಪೆಗಳನ್ನು ಹಾಕಿ ನೆನೆದ ವಸ್ತುಗಳನ್ನೆಲ್ಲಾ ಬಿಸಿಲಲ್ಲಿ ಒಣಗಲು ಹಾಕಿದ್ದರು. ಒಂದು ಚಾಪೆಯ ಮೇಲೆ ನೆನೆದಿದ್ದ ಪುಸ್ತಕಗಳನ್ನು ಒಣಹಾಕಿದ್ದರು.

ಹೊಸ ಅಳಿಯ ಭಾವಮೈದಂದಿರ ಜತೆ ಆ ಚಾಪೆಯ ಮೇಲೆ ಕುಳಿತ. ಒಬ್ಬ ಭಾವಮೈದುನ ಒಂದು ಚಿತ್ರದ ಪುಸ್ತಕವನ್ನು ಭಾವನ ಕೈಗಿತ್ತು ನೋಡಿ ಭಾವ ಹೇಗಿದೆ ಎಂದ. ಇವನು ಅದನ್ನು ಕೈಲಿ ಹಿಡಿದು ಹಾಳೆ ತಿರುಗಿಸಿನೋಡಿ ಚೆನ್ನಾಗಿದೆ ಎಂದುಹೇಳಿ ಹಿಂದಿರುಗಿಸಿದ. ಇನ್ನೊಬ್ಬ ಕೆಲವು ಚಿತ್ರಗಳು, ಕೆಲವು ಕಥೆಗಳು ಇದ್ದ ಒಂದು ಪುಸ್ತಕವನ್ನು ಭಾವನ ಕೈಗೆ ಕೊಟ್ಟ. ಅದನ್ನೂ ತಿರುಗಿಸಿನೋಡಿ ಚೆನ್ನಾಗಿದೆ ಎಂದ ಭಾವ. ಇನ್ನೊಬ್ಬ ಚಿತ್ರವೇ ಇಲ್ಲದ ಒಂದು ಕಾದಂಬರಿ ಪುಸ್ತಕ ಕೊಟ್ಟ, ಇವನ ಅದನ್ನೂ ತಿರುಗಿಸಿನೋಡಿ ಚೆನ್ನಾಗಿದೆ ಎಂದು ಹೇಳಿ ಹಿಂತಿರುಗಿಸಿದ. ಕೊನೆಯಲ್ಲಿ ಚಿಕ್ಕ ಚೂಟಿಯಾಗಿದ್ದ ಹುಡುಗ ಬಂದು ಖಾಲಿ ಪುಸ್ತಕವನ್ನು ಭಾವನ ಕೈಗೆ ಕೊಟ್ಟ, ಇವನು ಅದನ್ನೂ ತಿರುಗಿಸಿ ನೋಡಿ ಚೆನ್ನಾಗಿದೆ ಎಂದ. ಒಡನೆಯೇ ಆ ಚಿಕ್ಕ ಹುಡುಗ ಭಾವನಿಗೆ ಅಕ್ಷರವೇ ಬರುವುದಿಲ್ಲ ಎಂದು ಕೇಕೆಹಾಕಿ ನಗತೊಡಗಿದ. ಉಳಿದ ಹುಡುಗರೂ ನಗುವಿನಲ್ಲಿ ಸೇರಿಕೊಂಡರು. ಆ ವೇಳೆಗೆ ಅಲ್ಲಿಗೆ ಬಂದ ಹುಡುಗಿಯ ತಾಯಿ. ಮಕ್ಕಳನ್ನು ಗದರಿಸಿದ ನಂತರವಷ್ಟೇ ನಗು ನಿಂತಿತು.ಇದನ್ನು ಕಂಡ ಹುಡುಗಿಗೆ ಅಳುವೇ ಬರುವಂತಾಯಿತು. ಅಳಿಯನಿಗೂ ತನಗೆ ವಿದ್ಯೆ ಇಲ್ಲದ್ದರಿಂದ ತಾನು ಅಪಹಾಸ್ಯಕ್ಕೊಳಗಾಗಬೇಕಾಯಿತಲ್ಲ ಎಂದು ಅಪಮಾನ ವ್ಯಥೆ ಆಯಿತು. ರಾತ್ರಿ ಹೇಗೋ ಕಳೆಯಿತು.

ಮರುದಿನ ಬೆಳಿಗ್ಗೆ ಎದ್ದವನೇ ಆ ಅಳಿಯ ಊರಿಗೆಂದು ಹೊರಟು ನಿಂತ. ಅತ್ತೆಮಾವ ಹೆಂಡತಿ ಎಲ್ಲರೂ ಇನ್ನೂ ಕೆಲವು ದಿನ ಇರಿ ಎಂದು ಒತ್ತಾಯ ಮಾಡಿದರೂ ನಿಲ್ಲಲೇ ಇಲ್ಲ. ಮಾವನ ಮನೆಯಿಂದ ಹೊರಟವನು ತನ್ನ ಊರಿಗೆ ಹೋಗಲೇ ಇಲ್ಲ. ಊರಿನ ದಾರಿ ಬಿಟ್ಟು ಬೇರೆ ರಸ್ತೆಹಿಡಿದ. ಬಹುದೂರ ಹೋಗಿ ಒಂದು ಪರಿಚಯ ಇಲ್ಲದ ನಗರಕ್ಕೆ ತಲುಪಿದ. ಅಲ್ಲಿ ಗುರುಕುಲ ಪಾಠಶಾಲೆ ಇದೆಯೇ ಎಂದು ವಿಚಾರಿಸಿದ. ಊರ ಕೊನೆಯಲ್ಲಿದೆ ಎಂದು ಯಾರೋ ಹೇಳಿದರು. ನೇರ ಅಲ್ಲಿಗೆ ಹೋಗಿ ಅಲ್ಲಿನ ಗುರುಗಳನ್ನು ಕಂಡು ತನಗೆ ವಿದ್ಯೆ ಹೇಳಿಕೊಡಬೇಕೆಂದು ಪ್ರಾರ್ಥಿಸಿದ. ಸುಮಾರು 25 ವರ್ಷದ ಪ್ರೌಢನನ್ನು ಗುರುಕುಲಕ್ಕೆ ಸೇರಿಸಿಕೊಳ್ಳಲು ಗುರುಗಳು ನಿರಾಕರಿಸಿದರು. ಆದರೆ ಇವನು ಕಾಡಿಬೇಡಿ ತಾನು ಶ್ರದ್ಧೆಯಿಂದ ಅಭ್ಯಾಸ ಮಾಡುವುದಾಗಿ ಪ್ರಾರ್ಥಿಸಿದನು.. ಗುರುಪತ್ನಿಗೆ ಇವನ ನಮ್ರತೆ, ಛಲ ಕಂಡು ಮನಕರಗಿತು. ಆತನನ್ನು ಸೇರಿಸಿಕೊಂಡು ಸಹಾಯಮಾಡಲು ಗುರುಗಳಿಗೆ ಆಕೆ ವಿನಂತಿಸಿದರು. ಕೊನೆಗೆ ಗುರುಗಳೂ ನಡೆಯಲಿ ಇದೂ ಒಂದು ಪ್ರಯೋಗ ಎಂದು ನಿರ್ಧರಿಸಿ ಅವನನ್ನು ಗುರುಕುಲಕ್ಕೆ ಸೇರಿಸಿಕೊಂಡರು.

ಆ ಕಾಲದಲ್ಲಿ ಗುರುಕುಲಕ್ಕೆ ಸೇರಿದ ಎಲ್ಲ ವಿದ್ಯಾರ್ಥಿಗಳೂ ಗುರುಮನೆಯಲ್ಲೇ ಊಟ,ತಿಂಡಿ ವಸತಿ ವಿದ್ಯಾಭ್ಯಾಸ ಎಲ್ಲ ನಡೆಯುತ್ತಿತ್ತು. ವಿದ್ಯಾರ್ಥಿ ಪಾರಂಗತನಾದಮೇಲೆ ಅಲ್ಲಿಂದ ಹೊರಟು ಹಣಸಂಪಾದಿಸಿ, ತನ್ನ ಕೈಲಾದ ಗುರುದಕ್ಷಿಣೆ ತಂದು ಕೊಡುವ ಪದ್ಧತಿ ಇತ್ತು. ಅದರಂತೆ ಇವನಿಗೂ ಗುರುಕುಲದಲ್ಲಿ ಅನ್ನ ವಸತಿ ವಿದ್ಯೆಗಳನ್ನು ಕಲಿಸಲಾಯಿತು. ಆ ವೇಳೆ ನೆಲದ ಮೇಲೆ ಮಟ್ಟಸವಾಗಿ ಮರಳುಹರಡಿ, ಅದರಮೇಲೆ ಗುರುಗಳು ಅಕ್ಷರ ತಿದ್ದಲು ಹೇಳುತ್ತಿದ್ದರು. ವಿದ್ಯಾರ್ಥಿಗಳು ಅದರ ಮೇಲೆಯೇ ಬೆರಳಿನಿಂದ ತಿದ್ದಿ ಅಕ್ಷರ ಕಲಿಯುತ್ತಿದ್ದರು. ಗುರುಗಳು ಬೇಕೆಂದೇ ನೀರು ತರಲು ಹೋಗುವ ದಾರಿಯಲ್ಲಿ ಮರಳುಹರಡಿ ಅಕ್ಷರ ತಿದ್ದಲು ಹೇಳಿದರು. ಇವನು ತಲೆ ತಗ್ಗಿಸಿಕೊಂಡು ಅಕ್ಷರ ತಿದ್ದತೊಡಗಿದ. ಓಡಾಡುವ ಜನರೆಲ್ಲಾ 'ಇದೇನಾಶ್ಚರ್ಯ 25ವರ್ಷದ ಧಡವ ಅಕ್ಷರ ತಿದ್ದುತ್ತಾ ಕುಳಿತಿದ್ದಾನೆ' ಎಂದು ಹಾಸ್ಯಮಾಡುತ್ತಿದ್ದರು. ಆದರೆ ಈತ ಮಾತ್ರ ಯಾರಮಾತಿಗೂ ಕಿವಿಕೊಡದೇ, ಯಾರನ್ನೂ ನೋಡದೇ, ತನ್ನ ಅಕ್ಷರತಿದ್ದುವ ಕಾಯಕದಲ್ಲಿ ಮಗ್ನನಾಗಿರುತ್ತಿದ್ದ. ಗುರುಗಳು ಹೆಂಡತಿಗೆ ಈ ಯುವಕನಿಗೆ ಊಟದಲ್ಲಿ ಅನ್ನದಮೇಲೆ ತುಪ್ಪದಬದಲು ಬೇವಿನೆಣ್ಣೆ ಬಡಿಸು ಎಂದು ತಾಕೀತುಮಾಡಿದ್ದರು. ಆಕೆ ಅದನ್ನೇ ಮಾಡುತ್ತಿದ್ದರು. ಇವನಾದರೂ ಊಟದ ಹೊತ್ತಿಗೆ ಹೋಗಿ ಎಲೆಮುಂದೆ ಕೂರುತ್ತಿದ್ದ, ಗುರುಪತ್ನಿ ಬಡಿಸಿದ್ದನ್ನು ಗಬಗಬ ತಿಂದು ಹೊರಟುಬಿಡುತ್ತಿದ್ದ. ಸದಾ ಅಭ್ಯಾಸದಲ್ಲಿ ತಲ್ಲೀನನಾಗಿದ್ದ ಅವನಿಗೆ ರುಚಿ, ಖಾರ, ಬಿಸಿ, ತಂಗಳು , ಯಾವುದರ ಪರಿವೆಯೂ ಇರುತ್ತಿರಲಿಲ್ಲ.

ಕೆಲವೇ ದಿನಗಳಲ್ಲಿ ಅಕ್ಷರಗಳನ್ನೆಲ್ಲಾ ಕಲಿತಾಯಿತು. ನಂತರ ಗುರುಕುಲದೊಳಗೆ ಪುಸ್ತಕಗಳಮೂಲಕ ಪಾಠ ಪ್ರಾರಂಭವಾಯಿತು. ಈ ಪ್ರೌಢ ವಿದ್ಯಾರ್ಥಿ ತನಗಿಂತ ಹತ್ತಾರುವರ್ಷ ಕಿರಿಯರೊಡನೆ ಕುಳಿತು ಪಾಠ ಕಲಿಯಬೇಕಾಯಿತು. ಅದು ಅವನಿಗೆ ಅವಮಾನ ಅನ್ನಿಸಲೇ ಇಲ್ಲ. ಗುರುಗಳು ಹೇಳಿಕೊಡುತ್ತಾ ಹೋದರು, ಇವನು ಕಲಿಯುತ್ತಾ ಹೋದನು. ಇವನು ವಿದ್ಯೆಯಲ್ಲಿ, ನಡತೆಯಲ್ಲಿ, ಶಿಸ್ತಿನಲ್ಲಿ ಇತರರಿಗಿಂತ ಉತ್ತಮ ಮಟ್ಟದಲ್ಲೇ ಇರುತ್ತಿದ್ದನು. ಹೀಗೆಯೇ 12–13 ವರ್ಷಕಾಲ ಇವನ ವಿದ್ಯಾಭ್ಯಾಸ ಮುಂದುವರೆಯಿತು. ಅತ್ಯಂತ ಬುದ್ಧಿವಂತನೂ ಆದ. ಗುರುಗಳೂ ತಮಗೆ ತಿಳಿದಿದ್ದುದೆಲ್ಲವನ್ನೂ ಅವನಿಗೆ ಕಲಿಸಿಕೊಟ್ಟರು. ಇನ್ನು ಹೇಳಿಕೊಡಲು ಅವರಲ್ಲಿ ಏನೂ ಉಳಿದಿರಲಿಲ್ಲ. ಇವನೋ ಗುರುಗಳಿಗೆ ಸಮಾನವಾದ ವಿದ್ಯಾವಂತನಾದ. ಒಂದು ದಿನ ಸಂಜೆ ಗುರುಗಳು ಇವನನ್ನು ಹತ್ತಿರಕರೆದು, 'ಅಪ್ಪಾ ನನಗೆ ತಿಳಿದಿದ್ದ ಸಕಲ ವಿದ್ಯೆಗಳನ್ನೂ ನಿನಗೆ ಕಲಿಸಿದ್ದೇನೆ. ಈಗ ನೀನೂ ನನ್ನಷ್ಟೇ ಪಂಡಿತನಾಗಿರುವೆ. ಇನ್ನು ಈ ಗುರುಕುಲದಲ್ಲಿ ಕಲಿಯಬೇಕಾದುದು ಏನೂ ಇಲ್ಲ. ನಾಳೆ ನೀನು ನಿನ್ನ ಮನೆಗೆ ವಾಪಸುಹೋಗಬಹುದು' ಎಂದರು. ಇವನಿಗೂ ಸಂತೋಷವಾಯಿತು. ಗುರುಗಳಿಗೆ ನಮಸ್ಕರಿಸಿ 'ಗುರುಗಳೇ, ಮನೆಗೆ ಹೋಗಿ ನನಗೆ ನೀವು ಅನುಗ್ರಹಿಸಿರುವ ಪಾಂಡಿತ್ಯದಿಂದ ಧನಾರ್ಜನೆಮಾಡಿ, ನಿಮಗೆ ಸೂಕ್ತ ಗುರುದಕ್ಷಿಣೆ ತಂದು ಅರ್ಪಿಸುತ್ತೇನೆ' ಎಂದನು. ಎಂದಿನಂತೆ ಅಂದು ರಾತ್ರಿ ಊಟಕ್ಕೆ ಕುಳಿತನು. ಗುರುಪತ್ನಿ ಅನ್ನ ಬೇವಿನ ಎಣ್ಣೆ ಸಾರುಬಡಿಸಿದರು. ಇವನು ಅನ್ನ ಕಲಸಿ ಬಾಯಿಗಿಟ್ಟ, ಕಹಿವಿಷ. ಸಂಕೋಚದಿಂದ 'ಅಮ್ಮ , ಇಂದೇಕೋ ಅನ್ನ ಕಹಿಯಾಗಿದೆ, ನನಗೆ ಊಟ ಬೇಡ' ಎಂದ. ತಕ್ಷಣ ಆ ತಾಯಿ, 'ಹೌದೇನಪ್ಪಾ, ಏನೋ ಹೆಚ್ಚು ಕಡಿಮೆ ಆಗಿರಬೇಕು, ಈಗ ಎದ್ದುಬಿಡು. ಬೇರೆ ಎಲೆ ಹಾಕಿ ಬಡಿಸುತ್ತೇನೆ' ಎಂದರು. ಇವನು ಎದ್ದು ಕೈತೊಳೆದು ಬೇರೆ ಎಲೆ ಮುಂದೆ ಕುಳಿತು ಗುರುಪತ್ನಿ ಬಡಿಸಿದ ಅನ್ನ ಸಾರು ತುಪ್ಪ ತೃಪ್ತಿಯಿಂದ ಊಟಮಾಡಿ ಎದ್ದ. ನಂತರ ಗುರುಪತ್ನಿ ಈ ವಿಷಯವನ್ನು ತನ್ನ ಗುರುಗಳಿಗೆ ಅರುಹಿದಳು. ಗುರುಗಳು ಇಷ್ಟು ದಿನ ಅವನು ಕಲಿಯುವುದರಲ್ಲಿ ನಿರತನಾಗಿದ್ದ, ಅವನಿಗೆ ಊಟ ನಿದ್ದೆಗಳ ಪರಿವೆಯೇ ಇರಲಿಲ್ಲ. ಆದ್ದರಿಂದ ಬೇವಿನ ಎಣ್ಣೆಯ ಕಹಿ ಅವನ ನಾಲಿಗೆಗೆ ತಿಳಿಯಲೇ ಇಲ್ಲ. ಇಂದು ಅವನ ವಿದ್ಯಾಭ್ಯಾಸ ಮುಗಿದಿದೆ. ಅವನು ನನಗೆ ಸಮಾನನಾದ ಪಂಡಿತನಾಗಿದ್ದಾನೆ. ಆದುದರಿಂದ ನಾಲಿಗೆಗೆ ರುಚಿಯ ಜ್ಞಾನ ಉಂಟಾಗಿದೆ ಅಷ್ಟೇ ಎಂದರು.

ಮರುದಿನ ಅವನು ಗುರುವಿಗೂ, ಗುರುಪತ್ನಿಗೂ ವಂದಿಸಿ, ವಿದ್ಯಾರ್ಥಿಗಳಿಗೆ ಶುಭಕಾಮನೆ ಹೇಳಿ ಮನೆಯತ್ತ ನಡೆದ. ಇತ್ತ ಅವನ ಮನೆಯಲ್ಲೂ ಅವನ ಮಾವನಮನೆಯಲ್ಲೂ ಹತ್ತಾರು ವರ್ಷಗಳಿಂದ ಅವನ ಸುಳಿವೇ ಇರಲಿಲ್ಲ. ಹಾಗಾಗಿ ಅವನು ಅವಮಾನ ತಾಳಲಾರದೆ ಹಿಂತಿರುಗಿಬಾರದಂತೆ ದೇಶಾಂತರ ಹೋಗಿಬಿಟ್ಟಿದ್ದಾನೆ

ಇಲ್ಲವೇ ಸತ್ತುಹೋಗಿದ್ದಾನೆ ಎಂದುಕೊಂಡು ಬಿಟ್ಟಿದ್ದರು. ಇವನು ಮಹಾಪಂಡಿತನಾಗಿ ಹಿಂತಿರುಗಿದ್ದು ಕಂಡು ಎಲ್ಲರಿಗೂ ಮಹದಾನಂದವಾಯಿತು. ಅವನ ತಂದೆತಾಯಿಗಳು ಊರಿಗೆಲ್ಲ ಹಬ್ಬಮಾಡಿಸಿ ತಮ್ಮ ಸಂತಸ ಹಂಚಿಕೊಂಡರು. ಅತ್ತ ಹೆಂಡತಿಯ ತಂದೆತಾಯಿಯರೂ ಅಳಿಯಮಗಳನ್ನು ತಮ್ಮೂರಿಗೆ ಕರೆದೊಂಡುಹೋಗಿ ಅವರಿಗೆ ನಡೆದುದನ್ನೆಲ್ಲ ಕೇಳಿ ಸಂತಸಗೊಂಡರು. ಅವರೂ ಊರಿಗೆಲ್ಲ ಹಬ್ಬ ಮಾಡಿಸಿದರು.

ನಂತರ ಇವನು ಆ ರಾಜ್ಯದ ರಾಜಾಸ್ಥಾನಕ್ಕೆ ಹೋಗಿ ತನ್ನ ಪಾಂಡಿತ್ಯವನ್ನು ಪ್ರದರ್ಶಿಸಿ ಹೇರಳವಾಗಿ ಹಣಗಳಿಸಿ ಗುರುಕುಲಕ್ಕೆ ಹೋಗಿ ಅದನ್ನೆಲ್ಲ ಗುರುಗಳ ಪಾದಕ್ಕೆ ಅರ್ಪಿಸಿ ಕೃತಾರ್ಥನಾಗಿ ಮನೆಗೆ ಹಿಂತಿರುಗಿದನು. ಅಂತೆಯೇ ಶ್ರದ್ಧಾ ಸರ್ವತ್ರ ಸಾಧನಂ

# ಸ್ವರ್ಗ ನರಕ

ಬಹಳ ಹಿಂದಿನ ಕಾಲದಲ್ಲಿ ಒಂದೂರಿನಲ್ಲಿ ಒಬ್ಬ ಗ್ರಾಮ ಸಭಾಧ್ಯಕ್ಷ ಇದ್ದನು. ಅವನು ತುಂಬಾ ಒಳ್ಳೆಯವನು. ತನ್ನ ಕುಟುಂಬದ ಯೋಗಕ್ಷೇಮವನ್ನು ಗಮನಿಸಿದಂತೆಯೇ ತನ್ನ ಗ್ರಾಮದ ಒಳಿತಿನ ಅಭಿವೃದ್ಧಿಯ ಚಿಂತನೆಯನ್ನು ಸದಾ ಮಾಡುತ್ತಿದ್ದ. ಗ್ರಾಮದ ಎಲ್ಲ ಜನರೂ ಒಳ್ಳೆಯವರಾಗಿ ಸುಖವಾಗಿ ಬಾಳಬೇಕೆಂಬುದೇ ಅವನ ಮಹದಾಸೆ ಆಗಿತ್ತು. ಜನರಿಗೆ ಎಷ್ಟು ತಿಳುವಳಿಕೆ ಹೇಳಿದರೂ ಅವರಲ್ಲಿ ಸಾಕಷ್ಟು ಬದಲಾವಣೆ ಕಾಣುತ್ತಿರಲಿಲ್ಲ. ಅಕ್ಕ ಪಕ್ಕದ ಊರುಗಳಲ್ಲಿನ ಜನರಂತೆಯೇ ಅವರಲ್ಲೂ ಸೋಮಾರಿತನ, ದ್ವೇಷ, ಅಸೂಯೆಗಳು ನೆಲಸಿಬಿಟ್ಟಿದ್ದವು. ಇದನ್ನು ಕಂಡು ಮರುಗಿದ ಅಧ್ಯಕ್ಷ, ಆ ಊರಿನ ಚಿಕ್ಕಮಕ್ಕಳಿಗಾದರೂ ಒಳ್ಳೆಯ ಸ್ವಭಾವ ಬೆಳೆಯುವಂತೆ ಮಾಡಬೇಕೆಂದು ಯೋಚಿಸುತ್ತಿದ್ದ. ಒಂದು ದಿನ ಅವನಿಗೆ ಒಂದು ಒಳ್ಳೆಯ ಯೋಚನೆ ಹೊಳೆಯಿತು. ಒಡನೆ ಅದನ್ನು ಕಾರ್ಯರೂಪಕ್ಕೆ ತಂದುಬಿಟ್ಟ. ಅದು ಹೀಗಿತ್ತು. ಊರಿನ ಉತ್ತರ ಭಾಗದಲ್ಲಿ ಕೊಂಚ ದೂರದಲ್ಲಿ ಎರಡು ಹಣ್ಣು, ತರಕಾರಿಗಳ ತೋಟ ಮಾಡಿಸಿದ. ಒಂದೊಂದು ತೋಟಕ್ಕೆ 50 ಜನ ಕೆಲಸಗಾರರನ್ನು ನೇಮಿಸಿದ. ಅವರಿಗೆಲ್ಲ ಊಟ ವಸತಿಗಳ ಏರ್ಪಾಟುಮಾಡಿದ. ಒಂದಕ್ಕೆ ಸ್ವರ್ಗ ಎಂದೂ ಇನ್ನೊಂದಕ್ಕೆ ನರಕ ಎಂದೂ ಹೆಸರಿಟ್ಟ. ಪ್ರತಿ ವರ್ಷವೂ ಶಾಲೆಗೆ ಹೊಸದಾಗಿ ಸೇರುವ ಮಕ್ಕಳನ್ನು, ಉಪಾಧ್ಯಾಯರು ಎರಡೂ ತೋಟಗಳಿಗೆ ಕರೆದುಕೊಂಡು ಹೋಗಿ ತೋರಿಸಿದ ಪರಿಣಾಮ ಅಲ್ಲಿ ಕಲಿತ ಮಕ್ಕಳು ಪರಸ್ಪರ ದ್ವೇಷ ಭಾವನೆಯವರಾಗದೆ ಒಳ್ಳೆಯ ಸ್ವಭಾವ

ಬೆಳೆಸಿಕೊಳ್ಳುತ್ತಿದ್ದರು. ಸಹಕಾರ ಭಾವನೆ, ಇತರರ ಕಷ್ಟಗಳಲ್ಲಿ ನೆರವಾಗುವುದು ಮುಂತಾದ ಗುಣಗಳನ್ನು ಬೆಳೆಸಿಕೊಂಡು ಸೋಮಾರಿತನ ತೊರೆದು ಉತ್ತಮ ಕೆಲಸಗಾರರಾಗಿ ಸುಖವಾಗಿ ಬದುಕುವಂತಾಗಿದ್ದರು. ಇದನ್ನು ಕಂಡ ಸುತ್ತಮುತ್ತಲ ಗ್ರಾಮಗಳ ಉಪಾಧ್ಯಾಯರುಗಳೂ ತಮ್ಮ ಶಾಲೆಯ ಮಕ್ಕಳನ್ನು ಸ್ವರ್ಗ ನರಕಕ್ಕೆ ಕೊಂಡೊಯ್ದು ತೋರಿಸಿ ಅವರಲ್ಲಿ ಉನ್ನತ ಉದಾತ್ತ ಗುಣಗಳು ಬೆಳೆಯುವಂತೆ ಮಾಡುತ್ತಿದ್ದರು.

ಒಂದು ವರ್ಷ ಶಾಲೆಗೆ ಮಕ್ಕಳನ್ನು ಸೇರಿಸಿಕೊಳ್ಳುವ ಕೆಲಸ ಮುಗಿದಿತ್ತು. ಉಪಾಧ್ಯಾಯರು ಮಕ್ಕಳಿಗೆ ನೀವು ಒಳ್ಳೆಯವರಾಗಿ, ನೆರೆಯವರ ಕಷ್ಟಗಳಲ್ಲಿ ನೆರವಾಗಿ, ಸೋಮಾರಿತನ ಬಿಟ್ಟು ಚಟುವಟಿಕೆಯಿಂದ ಕೆಲಸ ಮಾಡುವವರಾದರೆ ಸ್ವರ್ಗ ಸೇರುತ್ತೀರಿ. ದ್ವೇಷ, ಅಸೂಯೆ, ಸ್ವಾರ್ಥ, ಸೋಮಾರಿತನ ಬೆಳೆಸಿಕೊಂಡರೆ ನರಕ ಸೇರುತ್ತೀರಿ ಎಂದರು. ಮಕ್ಕಳು ಸ್ವರ್ಗ-ನರಕಗಳ ವ್ಯತ್ಯಾಸ ಅರಿಯದೆ ಗೊಂದಲಕ್ಕೊಳಗಾದರು. ಗುರುಗಳೂ ಮಾತಿನಲ್ಲಿ ವಿವರಿಸಲು ತಿಣುಕಿಸೋತರು. ಕೊನೆಗೆ ಸ್ವರ್ಗ-ನರಕಗಳೆರಡಕ್ಕೂ ಉದಾಹರಣೆ ನಮ್ಮ ಊರ ಹತ್ತಿರವೇ ಇದೆ. ಮುಂದಿನ ಭಾನುವಾರ ಅಲ್ಲಿಗೆ ಹೋಗಿ ನೀವೇ ನೋಡುವಿರಂತೆ ಎಂದರು. ಮಕ್ಕಳು ಆ ಭಾನುವಾರಕ್ಕಾಗಿ ಕಾತುರದಿಂದ ಕಾದರು. ಭಾನುವಾರ ಬೆಳಗ್ಗೆ 8 ಘಂಟೆಗೆ ಸರಿಯಾಗಿ ಮಕ್ಕಳೆಲ್ಲಾ ಶಾಲೆಯ ಬಳಿ ಬಂದು ಸೇರಿದರು. ಗುರುವೃಂದವೂ ಸಿದ್ಧವಾಗಿತ್ತು. ಎಲ್ಲರೂ ಹೊರಟರು. ಮೊದಲು ಸ್ವರ್ಗ ನೋಡೋಣವೋ, ನರಕವನ್ನೋ ಎಂದು ಗುರುಗಳು ಕೇಳಿದರು. ಮಕ್ಕಳಿಗೆ ಸ್ವರ್ಗ ಸುಖದ ಜಾಗ ನರಕ ದುಃಖದ ಜಾಗ ಎನ್ನಿಸಿತು. ಕೆಲವರು ಮೊದಲು ಸ್ವರ್ಗ ಎಂದರೆ, ಇನ್ನುಳಿದವರು ಮೊದಲು ನರಕ ನೋಡೋಣ ಎಂದರು. ಗುರುಗಳು ಮೊದಲು ನರಕ ನೋಡಿಬಿಡೋಣ. ನಂತರ ನೋಡಿದ ಸ್ವರ್ಗದ ನೆನಪು ಬಹಳ ಕಾಲ ನೆನಪಿನಲ್ಲಿ ಉಳಿಯುತ್ತದೆ ಎಂದರು. ಮಕ್ಕಳೆಲ್ಲಾ ಇದಕ್ಕೆ ಒಪ್ಪಿದರು.

ಊರಿಂದ ಕೊಂಚದೂರ ಹೋದಮೇಲೆ ರಸ್ತೆ ಎಡಬಲಕಡೆಗಳಿಗೆ ಒಡೆಯಿತು. ಎಡಗಡೆ ನರಕಕ್ಕೆ ದಾರಿ ಎಂದು ಒಂದು ಬೋರ್ಡ್ ಬರೆಯಲಾಗಿತ್ತು. ಬಲಗಡೆ ಸ್ವರ್ಗಕ್ಕೆ ದಾರಿ ಎಂದು ಬರೆದಿತ್ತು. ಗುರುಶಿಷ್ಯರೆಲ್ಲಾ ಎಡಗಡೆಯ ದಾರಿ ಹಿಡಿದರು. ಕೊಂಚ ದೂರ ಹೋದಮೇಲೆ ಅಲ್ಲಿ ಒಂದು ತೋಟಕಾಣಿಸಿತು. ಹಲವಾರು ಜನ ಕೆಲಸ ಮಾಡುತ್ತಿದ್ದರು. ಎಲ್ಲರೂ ಬಡಕಲು ಶರೀರದವರು. ಬಲವಂತಕ್ಕೆ ದುಡಿಯುತ್ತಿದ್ದರು. ಗಿಡ, ಮರ, ಬಳ್ಳಿಗಳೆಲ್ಲ ಬಾಡಿಕೊಂಡಿದ್ದವು. ಹಣ್ಣು, ಹೂ ಕಾಯಿಗಳು ಅಲ್ಲೊಂದು ಇಲ್ಲೊಂದು ಕಾಣುತ್ತಿದ್ದವು. ಇದೇಕೆ ಹೀಗೆ ಎಂದು ಮಕ್ಕಳಿಗೆ ತಿಳಿಯಲಿಲ್ಲ.

ಅವರೆಲ್ಲಾ ಸೋಮಾರಿಗಳಿರಬೇಕೆಂದು ಮಕ್ಕಳು ಯೋಚಿಸುತ್ತಿದ್ದರು. ಅಷ್ಟರಲ್ಲಿ ಕೆಲಸಗಾರರ ಊಟದ ಸಮಯಬಂತು. ಊಟದ ಘಂಟೆ ಹೊಡೆಯಿತು. ಎಲ್ಲರೂ ಕೆಲಸ ನಿಲ್ಲಿಸಿದರು. ಕೈಕಾಲು ಮುಖ ತೊಳೆದರು. ಊಟಕ್ಕೆ ಕುರ್ಚಿ ಮೇಜುಗಳ

ಏರ್ಪಾಟಾಗಿತ್ತು. ಎಲ್ಲರೂ ಅದರ ಬಳಿ ಹೋಗಿ ಸಾಲಾಗಿ ನಿಂತರು. ಮೇಜಿನ ಮೇಲೆ ಅನ್ನ, ಹುಳಿ, ಸಾರು, ಪಲ್ಯ, ರಾಯತ, ಮೊಸರು, ಹಚ್ಚಿದ ಹಣ್ಣುಗಳು ಎಲ್ಲವನ್ನೂ ಸಿದ್ಧಪಡಿಸಿಟ್ಟಿದ್ದರು. ಬಡಿಸುವ ಜನರೂ ಸಿದ್ಧರಾಗಿ ಕಾದಿದ್ದರು. ಕೆಲಸಗಾರರು ಸಾಲಾಗಿ ನಿಂತಿದ್ದ ಕಡೆ, ಒಂದು ಸಣ್ಣ ಮೇಜಿನ ಮೇಲೆ ಸುಮಾರು ಎರಡಡಿ ಉದ್ದದ ಅನೇಕ ಬಿದಿರು ದಬ್ಬೆಗಳು, ಅವನ್ನು ಕಟ್ಟಲು ಬೇಕಾದ ಹುರಿಗಳು ಇದ್ದವು. ಇವೇಕೆಂದು ಮಕ್ಕಳಿಗೆ ತಿಳಿಯಲಿಲ್ಲ. ಸಾಲಾಗಿ ನಿಂತಿದ್ದ ಒಬ್ಬೊಬ್ಬ ಕೆಲಸಗಾರನೂ ತನ್ನ ಕೈಗಳೆರಡನ್ನೂ ಮುಂದಕ್ಕೆ ಚಾಚಿ ನಿಲ್ಲುತ್ತಿದ್ದ. ಅಲ್ಲಿದ್ದ ಒಬ್ಬ ಸೇವಕ ಅವರ ಕೈಗಳೆರಡಕ್ಕೂ ಒಂದೊಂದು ದಬ್ಬೆ ಇಟ್ಟು ಮೊಣಕೈ ಬಾಗದಂತೆ ಕೈ ಮಡಿಸಲಾಗದಂತೆ ಹಗ್ಗದಿಂದ ಕಟ್ಟಿಬಿಡುತ್ತಿದ್ದ. ಎಲ್ಲರ ಕೈಗಳೂ ಕಟ್ಟಿದ ಮೇಲೆ ಎಲ್ಲರೂ ಊಟದ ಮೇಜುಗಳ ಮುಂದಿದ್ದ ಕುರ್ಚಿಗಳ ಮೇಲೆ ಕುಳಿತರು. ಮೇಜಿನಮೇಲೆ ಎಲ್ಲರ ಮುಂದೂ ತಟ್ಟೆ ಲೋಟಗಳನ್ನಿಟ್ಟರು. ಊಟದ ಎಲ್ಲ ವಸ್ತುಗಳನ್ನೂ ತಟ್ಟೆಗಳಲ್ಲಿ ಬಡಿಸಿದರು. ಬಡಿಸುವವರ ಮುಂದಾಳು, ಈಗ ಊಟ ಶುರುಮಾಡಿ ಎಂದ. ಎಲ್ಲರೂ ತಟ್ಟೆಗಳಲ್ಲಿದ್ದ ಅನ್ನ ಸಾರು, ಹುಳಿ ಪಲ್ಯ ಹಾಕಿ ಕಲಸಿದರು. ಅಂಗೈಗಳಲ್ಲಿ ತುತ್ತು ತೆಗೆದುಕೊಂಡರು. ಆದರೆ ಬಾಯಿಗೆ ಹಾಕಿಕೊಳ್ಳಲು ಕೈ ಮಡಿಸಲಾಗುತ್ತಿರಲಿಲ್ಲ. ದಬ್ಬೆ ಕಟ್ಟಿದ್ದು ಅಡ್ಡಿ ಮಾಡುತ್ತಿತ್ತು. ಹಾಗೆಯೇ ತಲೆಯ ಮೇಲಕ್ಕೆ ಕೈಎತ್ತಿ ತುತ್ತುಗಳನ್ನು ಬಾಯಿಯ ಕಡೆಗೆ ಎಸೆದುಕೊಳ್ಳುತ್ತಿದ್ದರು. ಅದು ಒಮ್ಮೊಮ್ಮೆ ಬಾಯಿಗೆ, ಮತ್ತೊಮ್ಮೆ ಮುಖದಮೇಲೆ, ತಲೆಯಮೇಲೆ, ಮೈಮೇಲೆ ಬೀಳುತ್ತಿತ್ತು. ಬಾಯಿಗೆ ಬಿದ್ದಷ್ಟನ್ನು ತಿಂದು ಮುಗಿಸುತ್ತಿದ್ದರು. ಎಲ್ಲರ ತಟ್ಟೆಗಳೂ ಖಾಲಿ ಆದವು. ಯಾರಿಗೂ ಅರ್ಧಂಬರ್ಧವೂ ಹೊಟ್ಟೆ ತುಂಬಲಿಲ್ಲ. ಮೈಮೇಲೆಲ್ಲಾ ಅನ್ನಸಾರು ಬಿದ್ದು ಗಲೀಜಾಯಿತು. ನಂತರ ಊಟ ಮುಗಿಸಿದ ಗಂಟೆ ಹೊಡೆಯಲಾಯಿತು. ಎಲ್ಲರೂ ಕೈತೊಳೆಯಲು ನಲ್ಲಿಗಳ ಬಳಿ ತೆರಳಿದರು. ಅಲ್ಲಿದ್ದ ಒಬ್ಬ ಸೇವಕ ಅವರ ಕೈಗಳಿಗೆ ಕಟ್ಟಿದ್ದ ದಬ್ಬೆಗಳನ್ನು ಬಿಚ್ಚುತ್ತಿದ್ದ. ನಂತರ ಅವರು ಕೈಬಾಯಿ ಮುಖ ತಲೆ ಎಲ್ಲ ತೊಳೆದುಕೊಂಡರು. ಅಲ್ಲಿಂದ ಕೆಲಸದ ಸ್ಥಳಕ್ಕೆ ದುಃಖದಿಂದ ತೆರಳಿದರು. ಯಾರಿಗೂ ಹೊಟ್ಟೆ ತುಂಬಿರಲಿಲ್ಲ. ವಿಧಿ ಇಲ್ಲದೆ ಕೆಲಸಕ್ಕೆ ತೊಡಗಿದರು. ಗುರುಗಳು ಇಂದು ನಿಮಗೂ ಊಟದ ಸಮಯ ಆಗಿದೆ. ನಾಳೆ ಸ್ವರ್ಗಕ್ಕೆ ಹೋಗಿ ನೋಡೋಣ ಎಂದರು. ಎಲ್ಲರೂ ಮನೆಗಳಿಗೆ ಹಿಂತಿರುಗಿದರು. ತಾವು ಊಟಮಾಡುವಾಗ ನರಕದ ಕೆಲಸಗಾರರು ಹೇಗೆ ತಮ್ಮ ಮುಂದೆ ಊಟ ಇದ್ದರೂ ತಿನ್ನಲಾರದೆಹೋದರೆಂದು ಚಿಂತಿಸುತ್ತಾ ಊಟ ಮಾಡಿದರು.

ಮರುದಿನವೂ ಗೊತ್ತಾದ ವೇಳೆಗೆ ಗುರುಗಳೂ ಮಕ್ಕಳೂ ಶಾಲೆಯ ಬಳಿ ಸೇರಿದರು. ಮಕ್ಕಳ ಉತ್ಸಾಹ ಇಮ್ಮಡಿಯಾಗಿತ್ತು. ಎಲ್ಲರೂ ಸ್ವರ್ಗ ನೋಡುವ ಕಾತುರತೆಯಲ್ಲಿದ್ದರು. ಕೂಡುದಾರಿಯ ಜಾಗ ಬಂದೊಡನೆಯೇ ಬಲಬದಿಗೆ ತಿರುಗಿ

ನಡೆದರು. ಸ್ವಲ್ಪವೇ ದೂರದಲ್ಲಿ ಅವರು ಹಿಂದಿನದಿನ ಕಂಡಂತಹುದೇ ತೋಟ ಕಾಣಿಸಿತು. ಹಣ್ಣು ಹೂ ಕಾಯಿಗಳೆಲ್ಲಾ ತುಂಬ ಚೆನ್ನಾಗಿ ಬೆಳೆದಿದ್ದವು. ಅಲ್ಲಿಯೂ ಹಲವಾರು ಜನ ಕೆಲಸಮಾಡುತ್ತಿದ್ದರು. ಅವರೆಲ್ಲ ನರಕದ ತೋಟದವರಂತೆ ಬಡಕಲಾಗಿರಲಿಲ್ಲ. ಎಲ್ಲರೂ ದಷ್ಟಪುಷ್ಟ ಆಗಿದ್ದರು. ಸಂತೋಷ ಅವರ ಮುಖದಲ್ಲಿ ತಾಂಡವವಾಡುತ್ತಿತ್ತು. ಮಕ್ಕಳು ತೋಟದೊಳಗೆ ಹೋಗಿ ನೋಡುತ್ತ ನಿಂತರು. ಊಟದ ಸಮಯದ ಘಂಟೆ ಹೊಡೆಯಿತು. ಕೆಲಸ ನಿಲ್ಲಿಸಿ ಎಲ್ಲರೂ ಕೈಕಾಲು ಮುಖ ತೊಳೆದರು. ಊಟದ ಮೇಜಿನ ಬಳಿ ಎಲ್ಲರೂ ನರಕದ ತೋಟದಲ್ಲಿದ್ದಂತೆಯೇ ಏರ್ಪಾಡಾಗಿತ್ತು. ಮಕ್ಕಳು ಇಲ್ಲಿ ಊಟಮಾಡುವಾಗ ಕೈಗೆ ದಬ್ಬೆ ಕಟ್ಟುವುದಿಲ್ಲ. ಆದ್ದರಿಂದ ಇವರೆಲ್ಲ ಹೊಟ್ಟೆ ತುಂಬ ಊಟಮಾಡಿ ದಷ್ಟಪುಷ್ಟರಾಗಿದ್ದಾರೆ ಎಂದು ಯೋಚಿಸುತ್ತಿದ್ದರು. ಆದರೆ ಅಷ್ಟೊತ್ತಿಗಾಗಲೇ ಎಲ್ಲರ ಕೈಗಳಿಗೂ ನರಕದಲ್ಲಿ ಕಟ್ಟಿದಹಾಗೆಯೇ ದಬ್ಬೆಗಳನ್ನು ಕಟ್ಟಿಬಿಟ್ಟರು. ಎಲ್ಲರೂ ಊಟದ ಕುರ್ಚಿಗಳ ಮೇಲೆ ಕುಳಿತುಕೊಂಡರು.ಎಲ್ಲರಿಗೂ ನರಕದ ತೋಟದಂತೆಯೇ ಎಲ್ಲ ವಸ್ತುಗಳನ್ನು ಬಡಿಸಿದರು. ಮಕ್ಕಳಿಗೆ ತುಂಬಾ ಆಶ್ಚರ್ಯ. ಕುತೂಹಲದಿಂದ ಮುಂದೇನು ಆಗುವುದು ನೋಡೋಣ ಎಂದು ತವಕಪಡುತ್ತಿದ್ದರು. ಎಲ್ಲರೂ ತಮ್ಮ ತಮ್ಮ ಕೈಗಳಲ್ಲಿ ಅನ್ನ ಕಲಸಿದರು. ಅಂಗೈಯಲ್ಲಿ ತುತ್ತು ತೆಗೆದುಕೊಂಡರು. ತುತ್ತನ್ನು ತಾವೇ ತಿನ್ನಲು ಕೈ ಮಡಿಸಲಾಗುತ್ತಿರಲಿಲ್ಲ. ಒಬ್ಬರು ಕೈಲಿದ್ದ ತುತ್ತನ್ನು ಕೈ ಮಡಿಸದೆಯೇ ಪಕ್ಕದವನ ಬಾಯಿಗೆ ಕೊಟ್ಟ, ಅವನೂ ತನ್ನ ಪಕ್ಕದವನಿಗೆ ಕೊಟ್ಟ, ಹೀಗೆ ಎಲ್ಲರೂ ತಮ್ಮ ತಮ್ಮ ಪಕ್ಕದಲ್ಲಿದ್ದವರಿಗೆ ತಿನ್ನಿಸುತ್ತಾ ಬಂದರು. ಎಲ್ಲರೂ ಹೊಟ್ಟೆ ತುಂಬಾ ಊಟಮಾಡಿದರು. ಊಟ ಆದಮೇಲೆ ಎಲ್ಲರ ಕೈಗಳ ದಬ್ಬೆಗಳನ್ನೂ ಬಿಚ್ಚಲಾಯಿತು. ಎಲ್ಲರೂ ಕೈಬಾಯಿ ತೊಳೆದರು. ಮತ್ತೆ ಕೆಲಸಕ್ಕೆ ನಲಿವು ಉತ್ಸಾಹಗಳೊಡನೆ ಹೊರಟರು. ಹುಡುಗರ ಮನಸ್ಸಿನಲ್ಲೆದ್ದಿದ್ದ ಅನುಮಾನ ಪರಿಹಾರವಾಯಿತು.

ಗುರುಗಳು ಮಕ್ಕಳನ್ನು ಕುರಿತು ನೋಡಿದಿರಾ ಮಕ್ಕಳೇ, ಮೊದಲನೆಯ ತೋಟದಲ್ಲಿ ಒಬ್ಬೊಬ್ಬರೂ ತಾವೇ ತಿನ್ನಬೇಕೆಂದು ಆಸೆಪಟ್ಟರು. ಸರಿಯಾಗಿ ಊಟಮಾಡದೆಯೇ ಮೈಮೇಲೆಲ್ಲಾ ಊಟ ಚೆಲ್ಲಿಕೊಂಡರು. ಬಾಯಿಗೆ ಬಿದ್ದ ಅಲ್ಪ ಸ್ವಲ್ಪದಿಂದಲೇ ಊಟ ಮುಗಿಸಿದರು. ಎರಡನೇ ತೋಟದಲ್ಲಿ ಪ್ರತಿಯೊಬ್ಬರೂ ತಮ್ಮ ಪಕ್ಕದವರಿಗೆ ತಿನ್ನಿಸಿದರು. ಆದುದರಿಂದ ಎಲ್ಲರೂ ಹೊಟ್ಟೆತುಂಬಾ ತಿನ್ನುವಂತಾಯಿತು. ಇದರಿಂದ ನಾವು ಕಲಿಯಬೇಕಾದದ್ದು ಏನೆಂದರೆ, ನಾನು ನನ್ನದು ನನಗೆ ಎಂಬ ಸ್ವಾರ್ಥ ಬೆಳೆಸಿಕೊಂಡರೆ ಸುಖಕ್ಕಿಂತ ಕಷ್ಟಕ್ಲೇಶಗಳೇ ಹೆಚ್ಚು. ನಾವು, ನಮ್ಮದು, ನಮಗೆ ಎಂಬ ವಿಶಾಲ ಭಾವನೆ ಬೆಳೆಸಿಕೊಂಡರೆ, ಎಲ್ಲರಿಗೂ ಸುಖ, ಸಂತೋಷ, ನೆಮ್ಮದಿ ಸಿಗುತ್ತದೆ. ಆದುದರಿಂದ ನೀವುಗಳೂ ನಿಮ್ಮ ಜೀವನದಲ್ಲಿ ಪರಸ್ಪರ ಪ್ರೀತಿ ವಿಶ್ವಾಸ, ಸಹಕಾರದಿಂದ ಬದುಕಿದರೆ, ಎಲ್ಲರಿಗೂ ಒಳ್ಳೆಯದು ಎಂಬುದನ್ನು ಈ ಸ್ವರ್ಗ–ನರಕಗಳ ದರ್ಶನದಿಂದ ಕಲಿಯಬೇಕು ಎಂದು ತಿಳಿಸಿದರು.

ಗುರುಶಿಷ್ಯರೆಲ್ಲ ಊರಿಗೆ ಹಿಂತಿರುಗಿದರು. ಇಂದಿನ ಮಕ್ಕಳು ಮುಂದೆ ಒಳ್ಳೆಯ ಪ್ರಜೆಗಳಾಗಲಿ. ಮಾರ್ಗದರ್ಶನಕ್ಕಾಗಿ ಊರಹಿರಿಯರು ಈ ಏರ್ಪಾಡು ಮಾಡಿದ್ದರಿಂದ ತಮ್ಮ ಊರೇ ಅಲ್ಲದೆ ಸುತ್ತಮುತ್ತಲ ಪ್ರದೇಶದ ಯುವಕರೆಲ್ಲಾ ಒಳ್ಳೆಯ ಪ್ರಜೆಗಳಾಗಿ ರೂಪುಗೊಳ್ಳಲು ನೆರವಾಯಿತು.

# ಉದ್ಭವ ಲಿಂಗ

ಬಹಳ ಹಿಂದೆ ಕಮಲಾಪುರವೆಂಬ ಊರಿನಲ್ಲಿ ರಂಗ ಎಂಬ ಒಬ್ಬ ಬಡ ಚಮ್ಮಾರನಿದ್ದನು. ಊರಿನ ಜನರಿಗೆಲ್ಲ ಅವನೇ ಸತ್ತ ದನ, ಎಮ್ಮೆಗಳ ಚರ್ಮ ಸಂಸ್ಕರಿಸಿ ಹದಮಾಡಿ ಅದರಿಂದ ತಾನೇ ತಯಾರಿಸಿದ ಚಪ್ಪಲಿಗಳನ್ನು ಒದಗಿಸುತ್ತಿದ್ದನು. ರೈತರು ಸುಗ್ಗಿಯಲ್ಲಿ ಸ್ವಲ್ಪದವಸ ಕೊಡುತ್ತಿದ್ದರು. ಉಳಿದವರು ಹಣಕೊಟ್ಟು ಚಪ್ಪಲಿಗಳನ್ನು ಕೊಳ್ಳುತ್ತಿದ್ದರು. ಹಳೆಯದಾದ, ಕಿತ್ತುಹೋದ ಚಪ್ಪಲಿಗಳನ್ನು ರಿಪೇರಿಮಾಡಿಕೊಡುವ ಕೆಲಸವೂ ಅವನ ಪಾಲಿನ ಕೆಲಸವೇ ಆಗಿತ್ತು. ಅದರ ಕೂಲಿಗೂ ಕಾಳು, ಕಾಸು ದೊರಕುತ್ತಿತ್ತು.

ಊರ ಮುಂದಿನ ರಸ್ತೆ ಬದಿಯಲ್ಲಿ ಬೆಳೆದಿದ್ದ ಒಂದು ಹೊಂಗೆಮರದ ಕೆಳಗೆ ಅವನು ಪ್ರತಿದಿನ ತನ್ನ ಹತಾರಗಳೊಂದಿಗೆ ಬಂದು ಕೂರುತ್ತಿದ್ದನು. ಓಡಾಡುವ ಜನರ ಮುಖವನ್ನು ನೋಡದಿದ್ದರೂ, ಅವರ ಕಾಲುಗಳನ್ನು ಗಮನಿಸುತ್ತಿದ್ದನು. ಅವರ ಚಪ್ಪಲಿಗಳನ್ನು ಬದಲಾಯಿಸಬೇಕೇ ಎಂಬುದರತ್ತಲೇ ಅವನ ಗಮನ. ಕೆಲವರು ತಾವಾಗಿಯೇ ಇವನ ಬಳಿಬಂದು, ಚಪ್ಪಲಿ ದುರಸ್ತಿ ಮಾಡಿಸಿಕೊಂಡು ಆಣೆ ಪಾವಲಿ ಕೊಟ್ಟು ಹೋಗುತ್ತಿದ್ದರು. ಗುರುತಿನವರಾದರೆ ಇವನೇ ಕರೆದು ಸಕಾಲದಲ್ಲಿ ರಿಪೇರಿ ಮಾಡಿಕೊಡುತ್ತಿದ್ದನು. ಹೀಗಾಗಿ ಆ ದಾರಿಯಲ್ಲಿ ಓಡಾಡುವವರಿಗೆಲ್ಲ ಇವನು ಪರಿಚಿತನೂ, ಆತ್ಮೀಯನೂ ಆಗಿದ್ದನು. ಇವನ ಜೀವನಕ್ಕೆ ಎಂದೂ ದವಸದ ಹಣದ ಅಭಾವ ಆಗುತ್ತಲೇ ಇರಲಿಲ್ಲ. ಸುಗ್ಗಿಯಲ್ಲಿ 8–10 ಚೀಲ ದವಸ ಸಿಕ್ಕುತ್ತಿತ್ತಾಗಿ ವರ್ಷದ ಅನ್ನಕ್ಕೆ ಅಭಾವವೇ ಇರಲಿಲ್ಲ. ಒಂದು ಬಗೆಯ ಸಂತೃಪ್ತ ಜೀವನ ಅವನ

ಸಂಸಾರದ್ದಾಗಿತ್ತು. ಮನೆಯಲ್ಲಿ ಅವನ ಹೆಂಡತಿ ರಂಗಮ್ಮ ಮತ್ತು ಇಬ್ಬರು ಶಾಲೆಗೆ ಹೋಗುವ ಮಕ್ಕಳು, ಮುದುಕಿ ತಾಯಿ ನೆಮ್ಮದಿಯಿಂದ ಬಾಳುತ್ತಿದ್ದರು. ಅವನು ತನ್ನ ಧರ್ಮ ಕಾಯುವ ಉಳಿ ಮಸೆಯಲು (ಹರಿತಮಾಡಲು) ಒಂದು ಕರಿಯ ಉಜ್ಜುಕಲ್ಲನ್ನು ಬಳಸುತ್ತಿದ್ದನು. ದಿನವೂ ಕೆಲಸ ಮುಗಿದಮೇಲೆ ಹತಾರಗಳನ್ನೆಲ್ಲ ಒಂದು ಚರ್ಮದ ಚೀಲದಲ್ಲಿ ತುಂಬಿಕೊಂಡು ಮಸೆಕಲ್ಲನ್ನು ಹೊಂಗೆ ಗಿಡದ ಬುಡಕ್ಕೆ ಎತ್ತಿಟ್ಟು ಹೋಗುತ್ತಿದ್ದನು.

ಒಮ್ಮೆ ಅಲ್ಲಿಂದ 20 ಮೈಲಿದೂರದ ಚುಂಚಘಟ್ಟದಲ್ಲಿದ್ದ ಅವನ ಮಾವನಿಗೆ ಖಾಯಿಲೆ ಆಯಿತು. ಇವನ ಇಡೀ ಸಂಸಾರ ಚುಂಚಘಟ್ಟಕ್ಕೆ ಹೊರಟರು. ತನ್ನ ಮಸೆಕಲ್ಲನ್ನು ಯಾರಾದರೂ ಕೊಂಡುಹೋದಾರು ಎಂದು ಚಿಂತಿತನಾದ ರಂಗ ಒಂದು ಮೊಳ ಗುಂಡಿತೋಡಿ ಅದರೊಳಗಿಟ್ಟುಅದರ ಮೇಲೆ ಮಣ್ಣುಮುಚ್ಚಿಟ್ಟು ಹೋದನು. ಮಾವನ ಖಾಯಿಲೆ ಬೇಗ ವಾಸಿಯಾಗಲಿಲ್ಲ, ಮಾವ ಸಾಯಲೂ ಇಲ್ಲ. ಇವನ ಸಂಸಾರ ಅಲ್ಲಿ ತಿಂಗಳಾನುಗಟ್ಟಲೆ ನಿಲ್ಲಬೇಕಾಯಿತು. ಕೊನೆಗೆ ಇವನು ಚುಂಚಘಟ್ಟಕ್ಕೆ ಹೋದ ಒಂದೂವರೆ ವರ್ಷದ ಮೇಲೆ ಒಂದು ದಿನ ಇವನ ಮಾವ ಸತ್ತುಹೋದ. ಅವನ ತಿಥಿಕರ್ಮ ಮುಗಿದಮೇಲೆ ಚಮ್ಮಾರ ಕಮಲಾಪುರಕ್ಕೆ ಸಂಸಾರಸಮೇತ ಹಿಂತಿರುಗಿದ. ಆ ವೇಳೆಗೆ ಕಮಲಾಪುರದಲ್ಲಿ ಸಾಕಷ್ಟು ಬದಲಾವಣೆಗಳಾಗಿದ್ದವು. ಆದರೂ ಜನ ಇವನನ್ನು ಹಿಂದಿನ ವಿಶ್ವಾಸ, ಪ್ರೇಮಗಳಿಂದಲೇ ಮಾತನಾಡಿಸಿದರು. ಮರುದಿನ ಬೆಳಿಗ್ಗೆ ಮನೆಯಲ್ಲಿ ತಿಂಡಿತಿಂದು ಆಯುಧಗಳ ಚೀಲ ಹೊತ್ತುಕೊಂಡು ರಸ್ತೆಬದಿಯ ಹೊಂಗೆಮರದತ್ತ ಹೊರಟ. ಏನಾಶ್ಚರ್ಯ ಅಲ್ಲಿ ಹೊಂಗೆಮರವೇ ಇಲ್ಲ. ಆ ಜಾಗದ ಅಚೀಚೆಯಲ್ಲಿ ಹುಡುಕಿದರೂ ಮರದ ಪತ್ತೆಯೇ ಇಲ್ಲ. ಸರಿಯಾಗಿ ಗಮನಿಸಿದ ಮೇಲೆ ಮರ ಇದ್ದಕಡೆ ಒಂದು ಗುಡಿ ಕಾಣಿಸಿತು. ಊರಿನ ಪರಿಚಿತನೊಬ್ಬನನ್ನು ಇದ್ಯಾವುದು ಹೊಸಗುಡಿ? ಎಂದು ಕೇಳಿದ. ಅದಕ್ಕವನು ನಿನಗೆ ಗೊತ್ತಿಲ್ಲವೋ? ನೀನು ಮಾವನ ಮನೆಗೆ ಹೋಗಿ ಬಹಳ ದಿನ ಆಯಿತು. ಈ ಬಾರಿಯ ಮಳೆಗಾಲದಲ್ಲಿ ಇಲ್ಲಿದ್ದ ಹೊಂಗೆಮರದ ಕೆಳಗೆ ಪಾತಾಳಲಿಂಗ ಉದ್ಭವಾಗಿದ್ದು, ಊರಹಿರಿಯರು ಬಂದು ನೋಡಿ, ನಮ್ಮೂರಿಗೆ ಶಿವ ಬಂದಿದ್ದಾನೆ, ಲಿಂಗ ಉದ್ಭವ ಆಗಿದೆ, ಅದೂ ಊರಿನ ಪೂರ್ವದಿಕ್ಕಿನಲ್ಲಿ, ನಮ್ಮೂರಿನ ಅದೃಷ್ಟ ಎಂದು ತಿಳಿದು ಆ ಲಿಂಗಕ್ಕೆ ಪೂಜೆಮಾಡಿದರು. ಜೋಯಿಸರನ್ನು ಕರೆಸಿ ಉದ್ಭವಲಿಂಗ ತೋರಿಸಿ ಅವರು ಒಳಿತು ಕೆಡುಕುಗಳನ್ನು ಕೇಳಿದರು. ಜೋಯಿಸರು ಶಿವ ನಿಮ್ಮೂರಿಗೆ ಒಲಿದು ಬಂದಿದ್ದಾನೆ. ಆದು ಶಿವರಾತ್ರಿ ಮುಂದಾಗಿ, ಒಡನೆ ಗುಡಿಕಟ್ಟಿಸಿ ಪೂಜೆಗೆ ವ್ಯವಸ್ಥೆಮಾಡಿರಿ. ಊರಿಗೆ ಮಂಗಳವಾಗುತ್ತದೆ ಎಂದು ತಿಳಿಸಿದರು ಸರಿ. ಊರವರೆಲ್ಲ ಪಂಚಾಯಿತಿ ಸೇರಿ ಗುಡಿಗೆ ಹಣ ವಸೂಲುಮಾಡಿ ಈ ಗುಡಿ ಕಟ್ಟಿಸಿದ್ದಾರೆ. ಗುಡಿ ಕಟ್ಟುವಾಗ ಅಲ್ಲಿದ್ದ

ಹೊಂಗೆಮರ ಕಡಿದುಹಾಕಿದರು. ಅದಕ್ಕೆ ಬದಲಾಗಿ ಗುಡಿಹಿಂದೆ ಬಿಲ್ವಪತ್ರೆ ಮರ ನೆಟ್ಟಿದ್ದಾರೆ. ನೋಡು ಅದೂ ಎಷ್ಟು ಚೆನ್ನಾಗಿ ಚಿಗುರಿದೆ. ಪೂಜೆಗೆ ಒಬ್ಬ ಬ್ರಾಹ್ಮಣ ಹುಡುಗನನ್ನು ನೇಮಿಸಿದ್ದಾರೆ. ದಿನವೂ ಒಂದೊಂದು ಮನೆಯವರು ಪೂಜೆಮಾಡಿಸುತ್ತಿದ್ದಾರೆ. ಅಕ್ಕಪಕ್ಕದ ಹಳ್ಳಿಗಳಿಂದಲೂ ಭಕ್ತರು ಬಂದು ಪೂಜೆ ಮಾಡಿಸಿಕೊಂಡು ಹೋಗುತ್ತಿದ್ದಾರೆ. ಲಿಂಗ ಉದ್ಭವ ಆಗಿ ಗುಡಿಕಟ್ಟಿಸಿದ ಮೇಲೆ ಎಲ್ಲರಿಗೂ ಒಳ್ಳೆಯದೇ ಆಗುತ್ತಿದೆ ಎಂದನು. ರಂಗನಿಗೆ ತಾನೂ ಲಿಂಗದರ್ಶನ ಮಾಡಬೇಕೆಂಬ ಆಸೆ ಉಂಟಾಯಿತು. ಆದರೆ ಹರಿಜನನಾದ ತಾನು ಒಳಗೆ ಹೋಗಬಹುದೇ ಎಂಬ ಅನುಮಾನವಾಯಿತು. ಅಷ್ಟರಲ್ಲಿ ಪೂಜಾರಿ ಬಂದು ಗುಡಿಬಾಗಿಲು ತೆಗೆದ. ಗುಡಿಯನ್ನೆಲ್ಲ ಗುಡಿಸಿದ. ಹಿಂದಿನದಿನ ಪೂಜೆಮಾಡಿದ್ದ ಹೂ, ಪತ್ರಗಳನ್ನೆಲ್ಲ ತೆಗೆದುಹಾಕಿದ. ಪೂಜೆಗೆ ನೀರುತರಲು ಕೊಡ ತೆಗೆದುಕೊಂಡು ಊರಬಾವಿಯ ಕಡೆಗೆ ಹೊರಟ. ಆಗ ರಂಗ ಗುಡಿಯ ಬಾಗಿಲ ಬಳಿ ಹೋಗಿ ಲಿಂಗವನ್ನು ನೋಡಿದ. ಅವನಿಗೆ ತಕ್ಷಣ ಹೊಳೆಯಿತು. ಇದು ತಾನು ಉಳಿಮಸೆಯುತ್ತಿದ್ದ ಕಲ್ಲು! ತಾನು ಚುಂಬಘಟ್ಟಕ್ಕೆ ಹೋಗುವಾಗ ಗುಂಡಿ ತೋಡಿ ಹೂತಿಟ್ಟಿದ್ದ ಕಲ್ಲು ಇದೇ ಎಂದು ಖಾತ್ರಿಯಾಯಿತು. ದೂರದಲ್ಲಿ ಪೂಜಾರಿ ಬರುತ್ತಿರುವುದನ್ನು ಕಂಡು ಅಲ್ಲಿಂದ ಹೊರಟುಬಂದು ಗುಡಿ ಎದುರಿಗೆ ಕುಳಿತ.

ಅಲ್ಲೇ ಹೊಸಜಾಗ ಮಟ್ಟಮಾಡಿಕೊಂಡು ಚಪ್ಪಲಿ ರಿಪೇರಿಗೆಕುಳಿತ. ಹಿಂದಿನಂತೆಯೇ ವ್ಯಾಪಾರ ಶುರುವಾಯಿತು. ಮೊದಮೊದಲು ನೆರಳಿಗಾಗಿ ತನ್ನ ಮಾವನಮನೆಯಿಂದ ತಂದಿದ್ದ ಹಳೆ ಛತ್ರಿಯನ್ನು ಒಂದು ಬಿದಿರಿನ ಕಡ್ಡಿಗೆ ಕಟ್ಟಿಕೊಂಡು ಕ್ರಮೇಣ ಒಂದು ಗಸಗಸೆ ಛತ್ರಿಮರವನ್ನೇ ನೆಟ್ಟು ಬೆಳೆಸಿದ. ಉಳಿ ಮಸೆಯಲು ಬೇರೊಂದು ಕಲ್ಲನ್ನು ಹುಡುಕಿ ಇಟ್ಟುಕೊಂಡನು. ಉದ್ಭವ ಪಾತಾಳೇಶ್ವರನ ದಯೆಯಿಂದ ಇವನ ವ್ಯಾಪಾರವೂ ಹೆಚ್ಚಿತು. ಇವನೂ ತಿಂಗಳಿಗೊಮ್ಮೆ ಪೂಜೆಗೆಂದು ಪೂಜಾರಿಗೆ ಹಣಕೊಡತೊಡಗಿದ. ದಿನವೂ ಲಿಂಗಕ್ಕೆ ಪೂಜೆಮಾಡಿ ಮಂಗಳಾರತಿ ಮಾಡುವಾಗ ಭಕ್ತಿಯಿಂದ ಕೈಮುಗಿದು ತನ್ನ ಭಕ್ತಿಯನ್ನು ಸಲ್ಲಿಸುತ್ತಿದ್ದ. ಮನಸ್ಸಿನಲ್ಲಿ ಮಾತ್ರ ಯಾವ ಕಲ್ಲಿನಲ್ಲಿ ಯಾವ ಕಾಲಕ್ಕೆ ಯಾವ ಶಕ್ತಿಯೋ ಎಂದುಕೊಳ್ಳುತ್ತಿದ್ದ. ಗುಡಿ ಕಾಲಕ್ರಮದಲ್ಲಿ ಜಿಲ್ಲೆಯ ದೊಡ್ಡ ಶ್ರೀಕ್ಷೇತ್ರವಾಗಿ ಆ ಸುತ್ತಿಗೆಲ್ಲ ಪ್ರಸಿದ್ಧವಾಯಿತು.

# ಗಾಂಧೀಜಿ ಕಥೆ

ಎಡಗೈಲೊಂದು ರಾಟೆ, ಬಲಗೈಲೊಂದು ಗೀತೆ ।
ಅಂತಹವರಾರು ಗೊತ್ತೇ, ಅವರೇ ನಮ್ಮ ಗಾಂಧಿ ।
ಪರಮಪೂಜ್ಯ ಗಾಂಧಿ ಈ ಮಹಾತ್ಮ ಗಾಂಧಿ ॥
ಬಲಗೈಲೊಂದು ಕೋಲು, ಅವರಿಗಿಲ್ಲ ಸೋಲು ।
ಅಂತಹವರಾರು ಗೊತ್ತೇ, ಅವರೇ ನಮ್ಮ ಗಾಂಧಿ ।
ಪರಮಪೂಜ್ಯ ಗಾಂಧಿ ಈ ಮಹಾತ್ಮ ಗಾಂಧಿ ॥
ಮಕ್ಕಳಿಗೆಲ್ಲ ತಾತ, ವಿಶ್ವಕ್ಕೆಲ್ಲ ಧಾತ ।
ಅಂತಹವರಾರು ಗೊತ್ತೇ, ಅವರೇ ನಮ್ಮ ಗಾಂಧಿ ।
ಪರಮಪೂಜ್ಯ ಗಾಂಧಿ ಈ ಮಹಾತ್ಮ ಗಾಂಧಿ ॥

## ಬಾಲ್ಯ & ವಿದ್ಯಾಭ್ಯಾಸ

ಮಹಾತ್ಮ ಗಾಂಧಿಯವರ ಪೂರ್ಣಹೆಸರು ಮೋಹನ್‌ದಾಸ್ ಕರಮಚಂದ ಗಾಂಧಿ. ಅವರು 1869 ಅಕ್ಟೋಬರ್ 2 ರಂದು ಗುಜರಾತ್ ರಾಜ್ಯದ ಪೋರ್‌ಬಂದರ್ ಎಂಬ ಊರಿನಲ್ಲಿ ಹುಟ್ಟಿದರು. ಇವರ ತಂದೆ ಕರಮಚಂದ ಗಾಂಧಿ, ತಾಯಿ ಪುತಳೀಬಾಯಿ. ಇವರ ತಂದೆ ಪೋರ್‌ಬಂದರ್ ಸಂಸ್ಥಾನದಲ್ಲಿ ಕೆಲವುಕಾಲ ಪ್ರಧಾನ ಮಂತ್ರಿಯಾಗಿದ್ದರು. ಅವರು ಸತ್ಯವಂತರೂ ಉದಾರಿಗಳು, ನ್ಯಾಯಸಂಪನ್ನರೂ, ರಾಜಭಕ್ತರೂ ಆಗಿದ್ದರು. ತಾಯಿ ಪುತಲೀಬಾಯಿ ಪರಮಭಕ್ತೆ, ಧರ್ಮಪಾರಾಯಣೆ. ಗಾಂಧೀಜಿಯವರಿಗೆ ತಂದೆತಾಯಿಯರಿಂದ ಹೆಚ್ಚಿನ ಆಸ್ತಿ ಪಾಸ್ತಿ ಬರಲಿಲ್ಲ. ಆದರೆ ಸದ್ಗುಣಗಳ ಭಂಡಾರವೇ ಸಿಕ್ಕಿತ್ತು. ಈ

ಸದ್ಗುಣಗಳನ್ನು ಅವರು ಜೀವನದುದ್ದಕ್ಕೂ ಬೆಳೆಸಿಕೊಂಡು 'ಮಹಾತ್ಮ ಗಾಂಧಿ' ಆದರು. ಗಾಂಧೀಜಿ ಅವರು ಚಿಕ್ಕಂದಿನಲ್ಲಿ ಒಂದೆರಡು ಬಾರಿ ಕೆಟ್ಟ ಆಸೆಗಳಿಗೆ ಬಲಿಬಿದ್ದರು. ಸ್ನೇಹಿತರೊಡನೆ ಸೇರಿ ಬೀಡಿಸೇದಿದರು, ಮಾಂಸ ತಿಂದರು. ಇದರ ಖರ್ಚಿಗೆ ಅಣ್ಣನ ಚಿನ್ನದ ಕಡಗದಿಂದ ಒಂದು ಚೂರನ್ನು ಕದ್ದು ಮಾರಿದರು. ಆದರೆ ಬೇಗನೆ ತಾನು ಮಾಡಿದ ತಪ್ಪನ್ನು ತಿಳಿದುಕೊಂಡರು. ಕಾಯಿಲೆಯಿಂದ ಮಲಗಿದ್ದ ಅಪ್ಪನ ಮುಂದೆ ತಮ್ಮ ತಪ್ಪನ್ನು ಒಪ್ಪಿಕೊಂಡರು. ತಂದೆಯವರು ಕ್ಷಮಿಸಿದರು.. ಮುಂದೆಂದೂ ಅಂತಹ ತಪ್ಪು ಮಾಡುವುದಿಲ್ಲ ಎಂದು ತಂದೆಗೆ ಮಾತುಕೊಟ್ಟರು ಗಾಂಧೀಜಿ.ಗಾಂಧೀಜಿಗೆ ಕೇವಲ 14 ವಯಸ್ಸಿನಲ್ಲೇ ಕಸ್ತೂರಬಾ ಅವರೊಡನೆ ಮದುವೆ ಆಯಿತು. 16 ವರ್ಷವಾಗಿದ್ದಾಗ ಅವರ ತಂದೆ ತೀರಿಕೊಂಡರು. ಹೈಸ್ಕೂಲ್ ಓದಿದ ನಂತರ ಅವರು ಇಂಗ್ಲೆಂಡಿಗೆ ಹೋಗಿ ಬಾರ್ ಅಟ್ ಲಾ ಓದಿದರು.

ವಿದೇಶಕ್ಕೆ ಹೋಗುವಮುಂದೆ ತಾವು ಅಲ್ಲಿ ಮದ್ಯ, ಮಾಂಸ ಹೆಣ್ಣುಗಳನ್ನು ಮುಟ್ಟುವುದಿಲ್ಲವೆಂದು ತಾಯಿಗೆ ಭಾಷೆಕೊಟ್ಟು ಹೊರಟರು. ಗಾಂಧೀಜಿಯವರು ಇಂಗ್ಲೆಂಡಿನಲ್ಲಿದ್ದಾಗ ಮೊದಮೊದಲು ವೇಷಭೂಷಣ ವ್ಯವಹಾರಗಳಲ್ಲಿ ಇಂಗ್ಲೀಷರನ್ನು ಅನುಕರಿಸಲು ಹೊರಟರು. ಆದರೆ ಅದರಿಂದ ಯಾವ ಪ್ರಯೋಜನವೂ ಇಲ್ಲ , ಅದು ಅವಶ್ಯಕವೂ ಅಲ್ಲ ಎಂದು ಮನಗಂಡು ಅದನ್ನು ಬಿಟ್ಟುಬಿಟ್ಟರು. ತಾಯಿಗೆ ಕೊಟ್ಟಮಾತು ನೆನಪಾಗುತ್ತಿತ್ತು. ಹೀಗಾಗಿ ಅವರು ಅಲ್ಲಿದ್ದಾಗ ಸಸ್ಯಾಹಾರದ ವಿಷಯದಲ್ಲಿ ಹೆಚ್ಚಿನ ಅಧ್ಯಯನ ನಡೆಸಿದರು. ಅಲ್ಲಿನ ಜನರು ತುಂಬಾ ದೊಡ್ಡವರಾದಮೇಲೆ ಮದುವೆಯಾಗುತ್ತಿದ್ದರು. ಆದ್ದರಿಂದ ತಮ್ಮ ಚಿಕ್ಕಂದಿನ ಮದುವೆ ವಿಷಯ ತಿಳಿಸಲು ಇವರಿಗೆ ನಾಚಿಕೆಯಾಯಿತು. ತಮಗಿನ್ನೂ ಮದುವೆಯಾಗಿಲ್ಲ ಎಂದು ಹೇಳಿಕೊಂಡರು. ಆದರೆ ಅದು ಅಸತ್ಯ ಎಂದು ನೆಸಪಾಯಿತು. ಒಡನೆ ತಮ್ಮ ಮದುವೆ ಆಗಿದೆ ಎಂದು ತಮ್ಮ ಆತ್ಮೀಯರಿಗೆ ತಿಳಿಸಿಬಿಟ್ಟರು. ಗಾಂಧೀಜಿ ಇಂಗ್ಲೆಂಡಿನಲ್ಲಿದ್ದಾಗ ಅನೇಕ ಧರ್ಮಗಳ ಗ್ರಂಥಗಳನ್ನು ಅಭ್ಯಾಸ ಮಾಡಿದರು. ಗೀತೆಯ ಬಗ್ಗೆ ಹೆಚ್ಚು ತಿಳಿದುಕೊಂಡರು. ಕಡೆಗೆ 1891 ರಲ್ಲಿ ಬ್ಯಾರಿಸ್ಟರ್ ಆಗಿ ಭಾರತಕ್ಕೆ ಹಿಂತಿರುಗಿದರು. ಅವರು ಇಂಗ್ಲೆಂಡಿನಲ್ಲಿದ್ದಾಗಲೇ ಅವರ ತಾಯಿ ಸತ್ತುಹೋಗಿದ್ದರು. ಭಾರತಕ್ಕೆ ಬಂದನಂತರ ಆ ಸುದ್ದಿ ಅವರಿಗೆ ತಿಳಿಯಿತು. ತುಂಬಾ ದುಃಖಪಟ್ಟರು. 22 ವರ್ಷದ ಯುವಕ ಬ್ಯಾರಿಸ್ಟರ್ ಗಾಂಧಿ ಮೊದಲಿಗೆ ರಾಜಕೋಟ್‌ನಲ್ಲಿ ನಂತರ ಮುಂಬಯಿಯಲ್ಲಿ ವಕೀಲವೃತ್ತಿ ಆರಂಭಿಸಿದರು. ಆದರೆ ಅದರಲ್ಲಿ ಯಶಸ್ಸು ಸಿಕ್ಕಲಿಲ್ಲ. ಅದೇ ಸಮಯಕ್ಕೆ ಪೋರ್‌ಬಂದರಿನ ಒಂದು ವ್ಯಾಪಾರಿ ಸಂಸ್ಥೆಯವರು ತಮ್ಮ ಸಂಸ್ಥೆಯ ಒಂದು ವಿಟ್ಲೆ ನಡೆಸಲು ಗಾಂಧಿ ಅವರನ್ನು ದಕ್ಷಿಣ ಆಫ್ರಿಕಾಕ್ಕೆ ಕರೆದರು. ಗಾಂಧೀಜಿ ಅದನ್ನೊಪ್ಪಿಕೊಂಡು 1893 ರಲ್ಲಿ ದಕ್ಷಿಣ ಆಫ್ರಿಕಾಕ್ಕೆ ಹೊರಟರು.

**ದಕ್ಷಿಣ ಆಫ್ರಿಕಾದಲ್ಲಿ ಭಾರತೀಯ ಸೇವಕ:**

ಗಾಂಧೀಜಿಗೆ ದಕ್ಷಿಣ ಆಫ್ರಿಕಾದ ಅನುಭವ ಹಿತಕರವಾಗಿರಲಿಲ್ಲ. ಅಲ್ಲೆಲ್ಲಾ ಬಿಳಿಯರು ಕರಿಯರೆಂಬ ವರ್ಣದ್ವೇಷ ತಾಂಡವವಾಡುತ್ತಿತ್ತು. ಅಲ್ಲಿನ ಸರ್ಕಾರ ಭಾರತೀಯರನ್ನು ತುಂಬಾ ಕೀಳಾಗಿಕಾಣುತ್ತಿತ್ತು. ಬಿಳಿಯರು ಇವರನ್ನು 'ಕೂಲಿ ಬ್ಯಾರಿಸ್ಟರ್' ಎಂದು ಕರೆಯಲಾರಂಭಿಸಿದರು. ಒಮ್ಮೆ ಗಾಂಧೀಜಿ ಡರ್ಬಾನ್ ಎಂಬಲ್ಲಿಂದ ಪ್ರಿಟೋರಿಯಾಕ್ಕೆ ರೈಲಿನಲ್ಲಿ ಮೊದಲನೆಯ ದರ್ಜೆಯಲ್ಲಿ ಪ್ರಯಾಣಮಾಡುತ್ತಿದ್ದರು. ಮೊದಲನೆಯ ದರ್ಜೆ ಟಿಕೇಟ್ ಇತ್ತು ಅವರಲ್ಲಿ. ಆದರೂ ಇವರ ಕಪ್ಪು ಬಣ್ಣ ಕಂಡ ರೈಲ್ವೆ ಅಧಿಕಾರಿ ಇವರನ್ನು ಗಾಡಿಯಿಂದ ಹೊರಕ್ಕೆ ತಳ್ಳಿಬಿಟ್ಟನು. ಇವರ ಪ್ರತಿಭಟನೆ ಫಲಿಸಲಿಲ್ಲ. ಇನ್ನೊಂದು ಸಲ ಕೋಚ್ ಗಾಡಿಯಲ್ಲಿ ಬಾಡಿಗೆಕೊಟ್ಟು ಪ್ರಯಾಣ ಮಾಡುತ್ತಿದ್ದಾಗ ಆ ಗಾಡಿಯ ಐರೋಪ್ಯ ಕಂಡಕ್ಟರ್ ಇವರನ್ನು ತನ್ನ ಕಾಲಬಳಿ ಕೂರಲುಹೇಳಿದ. ಇವರು ನಿರಾಕರಿಸಿದರು. ಕೊನೆಗೆ ಇವರಿಗೆ ಏಟುಗಳುಬಿದ್ದವು. ಆದರೂ ಗಾಂಧಿಯವರು ಈ ಪ್ರಸಂಗಗಳಲ್ಲಿ ತುಂಬಾ ಶಾಂತಿ ಸಮಾಧಾನದಿಂದ ವರ್ತಿಸಿದರು. ಪರಿಣಾಮವಾಗಿ ವಕೀಲರಾಗಿ ದಕ್ಷಿಣ ಆಫ್ರಿಕಾಕ್ಕೆ ಹೋದ ಗಾಂಧೀಜಿ ಸಮಾಜಸೇವೆಯಲ್ಲಿ ತೊಡಗಿದರು. ದಕ್ಷಿಣ ಆಫ್ರಿಕಾದಲ್ಲಿ ಬೇರೆಬೇರೆ ಧರ್ಮಗಳ, ಬೇರೆಬೇರೆ ಜಾತಿಗಳ ಭಾರತೀಯರಿದ್ದರು. ಗಾಂಧೀಜಿ ಅವರೆಲ್ಲರನ್ನು ಒಂದುಗೂಡಿಸಿದರು. ಎಲ್ಲರೂ ಅನ್ಯೋನ್ಯತೆಯಿಂದ ಅಣ್ಣ ತಮ್ಮಂದಿರಂತೆ ಬಾಳಲು ಕಲಿಸಿದರು. ಇದನ್ನು ಸಾಧಿಸಲು ಎಲ್ಲ ಧರ್ಮದ ಗ್ರಂಥಗಳನ್ನೂ ಅಧ್ಯಯನ ಮಾಡಿದರು. ಗಾಂಧೀಜಿ ದಕ್ಷಿಣ ಆಫ್ರಿಕಾಗೆ ಹೋಗಿದ್ದ ಮುಖ್ಯ ಉದ್ದೇಶ ಒಂದು ಮೊಕದ್ದಮೆಯಲ್ಲಿ ವಾದಿಸುವುದು. ಆ ಮೊಕದ್ದಮೆಯ ಎರಡೂ ಪಕ್ಷದವರನ್ನೂ ಕೂಡಿಸಿ ರಾಜಿಮಾಡಿಸಿದರು. ನಂತರ ಭಾರತಕ್ಕೆ ಹಿಂದಿರುಗಲು ಸಿದ್ಧರಾದರು. ಆ ಸಂದರ್ಭದಲ್ಲಿ ದರ್ಬಾನ್ ಎಂಬ ಊರಿನಲ್ಲಿ ಬೀಳ್ಕೊಡುಗೆ ಸಮಾರಂಭ ಏರ್ಪಾಡಾಯಿತು. ಆ ಸಮಾರಂಭದಲ್ಲಿದ್ದಾಗ ಅಲ್ಲಿನ 'ನೇಟಾಲ್ ಮರ್ಕ್ಯುರಿ' ಎಂಬ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಒಂದು ಸುದ್ದಿ ಓದಿದರು. ಅದರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರ ಮತದಾನದ ಹಕ್ಕನ್ನು ಕಸಿದುಕೊಳ್ಳುವ ಒಂದು ಮಸೂದೆ ಅಲ್ಲಿನ ಪಾರ್ಲಿಯಮೆಂಟಿನ ಮುಂದೆ ಬರುವ ಸುದ್ದಿ ಪ್ರಕಟವಾಗಿತ್ತು. ಆ ಮಸೂದೆ ಅಂಗೀಕೃತವಾಗಿ ಕಾನೂನಾದರೆ ಅಲ್ಲಿದ್ದ ಭಾರತೀಯರ ಅಸ್ತಿತ್ವಕ್ಕೇ ಪೆಟ್ಟುಬೀಳುತ್ತಿತ್ತು. ಸಮಾರಂಭದಲ್ಲಿದ್ದ ಗಣ್ಯರಿಗೆ ಈ ಸುದ್ದಿಯನ್ನು ಗಾಂಧೀಜಿ ವಿವರಿಸಿದರು. ಆಗ ಅವರೆಲ್ಲರೂ ಒಂದೇ ಧ್ವನಿಯಲ್ಲಿ 'ನೀವು ಇಲ್ಲೇ ನಿಂತು ಈ ಆಪತ್ತಿನ ಸಮಯದಲ್ಲಿ ನಮಗೆ ಸಹಾಯಮಾಡಬೇಕು' ಎಂದು ಗಾಂಧಿ ಅವರನ್ನು ಕೇಳಿಕೊಂಡರು. ಗಾಂಧೀಜಿಯವರೂ ಒಪ್ಪಿಕೊಂಡರು. ಪ್ರಯಾಣ ನಿಂತಿತು.ಸರ್ಕಾರದ ಮಸೂದೆಯ ವಿರುದ್ಧ ಒಂದು ಅರ್ಜಿ ತಯಾರಿಸಿದರು. ಸಾವಿರಾರು ಭಾರತೀಯರು ಅದಕ್ಕೆ

ರುಜುಹಾಕಿದರು. ಗಾಂಧೀಜಿ ರಾಜಕೀಯ ಪರಿಸ್ಥಿತಿಯನ್ನು ವಿವರಿಸಿದರು. ನಂತರ 'ನೇಟಾಲ್ ಇಂಡಿಯನ್ ಕಾಂಗ್ರೆಸ್' ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. 'ನೇಟಾಲ್ ವಿದ್ಯಾಸಂಸ್ಥೆ' ಪ್ರಾರಂಭವಾಯಿತು. ನೇಟಾಲಿನ ಭಾರತೀಯರಸೇವೆಯಲ್ಲಿ ಗಾಂಧಿ ನಿರತರಾದರು. ಅದಕ್ಕಾಗಿ ಉರ್ದು, ತಮಿಳು ಭಾಷೆಗಳನ್ನು ಕಲಿತರು.ದಕ್ಷಿಣ ಆಫ್ರಿಕಾದಲ್ಲಿ ಪ್ರಾರಂಭಿಸಿದ ಜನಸೇವೆ ಬಹಳ ದಿನಗಳ ಕಾಲ ಮುಂದುವರೆಯತಕ್ಕದೆಂದು ಗಾಂಧೀಜಿಗೆ ಎನಿಸಿತು. ಆದ್ದರಿಂದ ಅಲ್ಲಿಯೇ ಮನೆಮಾಡಿ ಭಾರತದಿಂದ ಹೆಂಡತಿ ಮಕ್ಕಳನ್ನು ಕರೆತರುವುದಕ್ಕಾಗಿ ಭಾರತಕ್ಕೆ ಬಂದರು.

**ಹಿಂಸಿಸಿದವರಿಗೂ ದಯೆಯ ಪ್ರತಿಫಲ:**

ಗಾಂಧೀಜಿ ಭಾರತದಲ್ಲಿ ದಕ್ಷಿಣ ಆಫ್ರಿಕಾದ ಭಾರತೀಯರ ಸ್ಥಿತಿಯನ್ನು ಕುರಿತು ಅನೇಕ ಭಾಷಣಗಳನ್ನು ಮಾಡಿದರು. ಕೆಲವು ಸಣ್ಣ ಪುಟ್ಟ ಪುಸ್ತಕಗಳನ್ನು ಅಚ್ಚುಮಾಡಿಸಿ ಹಂಚಿದರು. ನಂತರ ಹೆಂಡತಿ ಮಕ್ಕಳೊಡನೆ ದಕ್ಷಿಣ ಆಫ್ರಿಕಾಕ್ಕೆ ಹೊರಟರು. ಆ ವೇಳೆಗೆ ಗಾಂಧೀಜಿ ಅವರು ಭಾರತದಲ್ಲಿ ಮಾಡಿದ ಭಾಷಣಗಳ ಹಾಗೂ ಪ್ರಕಟಿಸಿದ ಪುಸ್ತಕಗಳ ಸಾರಾಂಶವನ್ನೆಲ್ಲಾ ದಕ್ಷಿಣ ಆಫ್ರಿಕಾದ ಪತ್ರಿಕೆಗಳು ವಿಕೃತಗೊಳಿಸಿ ಪ್ರಕಟಿಸಿದ್ದವು. ಇದರಿಂದ ಅಲ್ಲಿನ ಕೆಲವು ಬಿಳಿಜನರಿಗೆ ಗಾಂಧೀಜಿ ಮೇಲೆ ತುಂಬಾ ಕೋಪಬಂದಿತ್ತು. ಗಾಂಧೀಜಿ ದರ್ಬಾನಿನಲ್ಲಿ ಹಡಗಿನಿಂದ ಇಳಿದ ಕೂಡಲೇ ಆ ಬಿಳಿಜನರು ಇವರ ಮೇಲೆ ಹಲ್ಲೆ ಮಾಡಿದರು. ಅಲ್ಲಿನ ಪೋಲೀಸ್ ಅಧಿಕಾರಿಯೊಬ್ಬರ ಹೆಂಡತಿ ಬಲು ಜಾಣತನದಿಂದ ಇವರನ್ನು ರಕ್ಷಿಸಿದರು. ಇವರನ್ನೂ ಇವರ ಹೆಂಡತಿ ಮಕ್ಕಳನ್ನೂ ಕ್ಷೇಮವಾಗಿ ಮನೆಗೆ ತಲುಪಿಸಿದರು. ಬ್ರಿಟೀಷ್ ಸರ್ಕಾರ ದಾಳಿಮಾಡಿದವರನ್ನು ಗುರುತಿಸಿ ಅವರ ಮೇಲೆ ಮೊಕದ್ದಮೆ ಹಾಕಲು ಗಾಂಧೀಜಿಯವರಿಗೆ ತಿಳಿಸಿತು. ಆ ಕೆಲಸದಲ್ಲಿ ಇವರಿಗೆ ನೆರವುನೀಡಲೂ ಮುಂದೆಬಂದಿತು. ಆದರೆ ಗಾಂಧೀಜಿ ತಪ್ಪು ಆ ವ್ಯಕ್ತಿಗಳದ್ದಲ್ಲ, ನಾಯಕರದ್ದು. ಆದ್ದರಿಂದ ಆ ವ್ಯಕ್ತಿಗಳಮೇಲೆ ಕ್ರಮಕೈಗೊಳ್ಳುವ ಅವಶ್ಯಕತೆಯೇ ಇಲ್ಲ ಎಂದುಬಿಟ್ಟರು. ಇದರಿಂದ ಗಾಂಧೀಜಿಯವರ ಗೌರವ ಹೆಚ್ಚಿತು. ಇವರ ಮೇಲೆ ಹಲ್ಲೆನಡೆಸಿದವರೂ ವಿಷಾದ ವ್ಯಕ್ತಪಡಿಸಿದರು. ಗಾಂಧೀಜಿ ಶಾಂತ ಚಿತ್ತದಿಂದ ಅಲ್ಲಿನ ಭಾರತೀಯರ ಸೇವೆಯಲ್ಲಿ ತೊಡಗಿದರು. ಕೆಲವು ದಿನಗಳ ನಂತರ ಅಲ್ಲಿ ಬೋಯರ ಯುದ್ಧ ಪ್ರಾರಂಭವಾಯಿತು. ಆ ಯುದ್ಧದಲ್ಲಿ ಗಾಯಾಳುಗಳ ಚಿಕಿತ್ಸೆಗೆ ಸ್ವಯಂ ಸೇವಕರ ಒಂದು ದಳವನ್ನೇ ತಯಾರಿಸಿದರು ಗಾಂಧೀಜಿ. ಅವರ ಸೇವೆ ಮಾಡಿದರು. ಸೈನ್ಯದ ಅಧಿಕಾರಿಗಳಿಗೆ ತುಂಬಾ ಸಂತೋಷವಾಯಿತು. ದಕ್ಷಿಣ ಆಫ್ರಿಕಾದಲ್ಲಿ ತಮ್ಮ ಕೆಲಸ ಒಂದು ಘಟ್ಟಕ್ಕೆಮುಟ್ಟಿದೆ ಎನ್ನಿಸಿತು ಗಾಂಧೀಜಿಯವರಿಗೆ. ಭಾರತಕ್ಕೆ ಹಿಂತಿರುಗಲು ನಿರ್ಧರಿಸಿದರು. ಅಲ್ಲಿನ ಭಾರತೀಯರು ಇವರಿಗೆ ಅನೇಕ ಬೆಲೆಬಾಳುವ ಒಡವೆವಸ್ತುಗಳ ಉಡುಗೊರೆಕೊಟ್ಟರು. ಆದರೆ ಗಾಂಧೀಜಿ ಯಾವುದನ್ನೂ ಮುಟ್ಟಲಿಲ್ಲ. ಜನಸೇವೆಗೆ

ಪ್ರತಿಯಾಗಿ ಏನನ್ನೂ ತೆಗೆದುಕೊಳ್ಳುವುದಿಲ್ಲ ಎಂದು ಸ್ಪಷ್ಟವಾಗಿ ತಿಳಿಸಿದರು. ಅದನ್ನೆಲ್ಲ ಅಲ್ಲಿಯೇ ಒಂದು ವಿಶ್ವಸ್ಥನಿಧಿಯಾಗಿಮಾಡಿ ಅಲ್ಲಿನ ಭಾರತೀಯರ ಸೇವೆಗೆ ಮುಡಿಪಾಗಿಟ್ಟರು. 1901 ರಲ್ಲಿ ಭಾರತಕ್ಕೆ ಹಿಂತಿರುಗಿದರು.

**ಭಾರತದಲ್ಲಿ ಬಹುಮುಖ ಸೇವಾಕಾರ್ಯ – ಸತ್ಯಾಗ್ರಹ:**

ಗುಜರಾತ್ ರಾಜ್ಯದ ಅಹಮದಾಬಾದ್ ನಗರದ ಬಳಿ ಸಾಬರಮತಿ ನದಿದಡದಲ್ಲಿ ಒಂದು ಆಶ್ರಮ ಸ್ಥಾಪಿಸಿದರು. ದೇಶಾದ್ಯಂತವೂ ಸಂಚರಿಸಿದರು. ಸ್ವಾಮಿ ಶ್ರದ್ಧಾನಂದ, ರವೀಂದ್ರನಾಥ ಠಾಕೂರ್ ಮುಂತಾದವರೊಡನೆ ಸ್ನೇಹಬೆಳೆಸಿದರು. ಸಾಬರಮತಿಯ ಆಶ್ರಮಕ್ಕೆ 'ಸತ್ಯಾಗ್ರಹ ಆಶ್ರಮ' ಎಂದು ಹೆಸರಾಯಿತು. ಸತ್ಯ, ಅಹಿಂಸೆ, ಬ್ರಹ್ಮಚರ್ಯ, ಅಸಂಗ್ರಹ ಮುಂತಾದ ಹನ್ನೊಂದು ವ್ರತಗಳು ಆಶ್ರಮವಾಸಿಗಳಿಗೆ ನಿಯಮಿತವಾದವು. ಇಂತಹ ವ್ರತನಿಷ್ಠರಾದ ರಚನಾತ್ಮಕ ಕೆಲಸಗಳಲ್ಲಿ ತೊಡಗಿದ ಸತ್ಯಾಗ್ರಹಿಗಳನ್ನು ತಯಾರಿಸುವುದರ ಜೊತೆಗೇ ದೇಶದಲ್ಲಿ ನಡೆಯುತ್ತಿದ್ದ ಅನ್ಯಾಯಗಳ ವಿರುದ್ಧ ಸಣ್ಣ ಸಣ್ಣ ಸತ್ಯಾಗ್ರಹಗಳನ್ನೂ ನಡೆಸುತ್ತಿದ್ದರು ಗಾಂಧೀಜಿ. ಆ ಕಾಲದಲ್ಲಿ ಭಾರತದಿಂದ ಫಿಜಿ ದ್ವೀಪಕ್ಕೆ ಒಪ್ಪಂದದ ಕೂಲಿಕಾರರನ್ನು ಕಳುಹಿಸುವ ರೂಢಿ ಇತ್ತು. ಅಲ್ಲಿ ಅವರು ಗುಲಾಮರಂತೆ ಜೀವಿಸಬೇಕಾಗಿತ್ತು. ಇದರ ವಿರುದ್ಧ ಗಾಂಧೀಜಿ ಹೋರಾಡಿ ಆ ಪದ್ಧತಿಯನ್ನು ತಪ್ಪಿಸಿದರು. ಬಿಹಾರದ ಚಂಪಾರಣ್ಯ ಪ್ರದೇಶದಲ್ಲಿ ನೀಲಿಗಿಡಗಳ ವ್ಯವಸಾಯ ನಡೆದಿತ್ತು. ಅಲ್ಲಿನ ರೈತರಿಗೆ ಜಮೀನ್ದಾರರು ತುಂಬಾ ತೊಂದರೆಕೊಡುತ್ತಿದ್ದರು. ಆ ರೈತರ ಕಷ್ಟಗಳನ್ನು ತಿಳಿದುಕೊಳ್ಳಲು ಗಾಂಧೀಜಿ ಅಲ್ಲಿಗೆ ಹೋದರು. ಇವರನ್ನು ಅಲ್ಲಿಂದ ಹೊರಟುಹೋಗಲು ಸರ್ಕಾರ ಅಪ್ಪಣೆಮಾಡಿತು. ಆದರೆ ಗಾಂಧೀಜಿ ಅದನ್ನು ಮನ್ನಿಸಲಿಲ್ಲ. ಅದೇ ಪ್ರಾಂತದವರಾದ ಬಾಬು ರಾಜೇಂದ್ರಪ್ರಸಾದ್ ಎಂಬ ಪ್ರಸಿದ್ಧ ವಕೀಲರು ತಮ್ಮ ವೃತ್ತಿಯನ್ನು ಬಿಟ್ಟು ಗಾಂಧೀಜಿ ಅವರೊಡನೆ ಸೇರಿಕೊಂಡರು. ಆ ರೈತರ ನಡುವೆ ಅನೇಕ ಕಾರ್ಯಕರ್ತರ ನೆರವಿನಿಂದ ರಚನಾತ್ಮಕ ಕೆಲಸಗಳನ್ನೂ ಆರಂಭಿಸಿದರು. ಕಡೆಗೆ ಸರ್ಕಾರ ವಿಧಿಯಿಲ್ಲದೆ ಒಂದು ವಿಚಾರಣೆ ನಡೆಸಿ ರೈತರಿಗೂ ಕೂಲಿಕಾರರಿಗೂ ಆಗುತ್ತಿದ್ದ ತೊಂದರೆಯನ್ನು ತಪ್ಪಿಸಿದರು.

ಗುಜರಾತ್ ರಾಜ್ಯದ ಖೇಡಾ ಜಿಲ್ಲೆಯಲ್ಲಿ ಮಳೆಯಿಲ್ಲದೆ ಬರಗಾಲ ಉಂಟಾಯಿತು. ರೈತರು ಆ ವರ್ಷ ಕಂದಾಯವನ್ನು ಮನ್ನಾಮಾಡಬೇಕೆಂದು ಸರ್ಕಾರಕ್ಕೆ ವಿನಂತಿಸಿದರು. ಸರ್ಕಾರ ಒಪ್ಪಲಿಲ್ಲ. ಗಾಂಧೀಜಿ ರೈತರಪರನಿಂತು ಸತ್ಯಾಗ್ರಹ ನಡೆಸಿದರು. ಆ ಪ್ರದೇಶದವರೇ ಆದ ವಲ್ಲಭಭಾಯಿ ಪಟೇಲರು ಗಾಂಧೀಜಿಯವರ ಜೊತೆ ಕೂಡಿಕೊಂಡರು. ಸತ್ಯಾಗ್ರಹಕ್ಕೆ ವಿಜಯವಾಯಿತು. ಮುಂದೆ ಪಟೇಲರು ಗಾಂಧೀಜಿಯವರೊಡನೆಯೇ ನಿಂತರು. ತಮ್ಮ ಜೀವನವನ್ನೆಲ್ಲಾ ದೇಶಸೇವೆಯಲ್ಲಿಯೇ ಕಳೆದರು. ಖೇಡಾ ಸತ್ಯಾಗ್ರಹ ನಡೆದಿದ್ದ ಕಾಲದಲ್ಲೇ ಯೂರೋಪಿನಲ್ಲಿ ಮೊದಲನೇ

ಮಹಾಯುದ್ಧ ಆರಂಭವಾಯಿತು. ಭಾರತದ ವೈಸ್‌ರಾಯರು ಯುದ್ಧದ ನೆರವಿಗಾಗಿ ಪ್ರಮುಖರ ಒಂದು ಸಭೆ ನಡೆಸಿದರು. ಗಾಂಧೀಜಿಯವರು ಯುದ್ಧಕ್ಕೆ ಜನರನ್ನು ಕೂಡಿಸುವಲ್ಲಿ ತುಂಬಾ ನೆರವುನೀಡಿದರು. ಯುದ್ಧದಲ್ಲಿ ಬ್ರಿಟೀಷರಿಗೆ ಜಯವಾಯಿತು.

**ಹಿಂಸೆಯ ವಿರುದ್ಧ ಅಹಿಂಸಾತ್ಮಕ ಅಸಹಕಾರ:**

ಭಾರತದ ಜನರು ಬ್ರಿಟೀಷರ ವಿಜಯಕ್ಕಾಗಿ ಪ್ರಾಣದಾಸೆತೊರೆದು ಹೋರಾಡಿದರು. ಆದರೂ ಸರ್ಕಾರ ಭಾರತೀಯರ ಮೇಲೆ ದಬ್ಬಾಳಿಕೆ ನಡೆಸಬಯಸಿತು. ಅದಕ್ಕಾಗಿ ರೌಲೆಟ್ ಮಸೂದೆಯನ್ನು ಜಾರಿಗೆ ತಂದಿತು. ಗಾಂಧೀಜಿ ಇದರ ವಿರುದ್ಧ ಚಳುವಳಿ ನಡೆಸಿದರು. ಇಡೀ ದೇಶ ರೊಚ್ಚಿಗೆದ್ದಿತು. ಹಿಂದೂ ಮುಸ್ಲೀಮರು ಒಂದಾಗಿ ಸರ್ಕಾರದ ದಬ್ಬಾಳಿಕೆಯನ್ನು ಎದುರಿಸಿದರು. ಸರ್ಕಾರ ಅತ್ಯಂತ ಕ್ರೂರವಾಗಿ ನಡೆದುಕೊಂಡಿತು. ಅಮೃತಸರದ ಬಳಿ ಜಲಿಯನ್‌ವಾಲಾಬಾಗ್ ಎಂಬಲ್ಲಿ ನೂರಾರು ಜನರನ್ನು ಗುಂಡಿಟ್ಟುಕೊಂದಿತು. ನಿರಪರಾಧಿಗಳಿಗೆ ಬಹಿರಂಗವಾಗಿ ಛಡಿ ಏಟಿನ ಶಿಕ್ಷೆ ವಿಧಿಸಿತು. ಚಳುವಳಿಕಾರರು ರಸ್ತೆಯಲ್ಲಿ ಮಂಡಿಯೂರಿ ನಡೆಯುವಂತೆಮಾಡಿತು. ಈ ದಬ್ಬಾಳಿಕೆ ಎದುರಿಸಲು ಗಾಂಧೀಜಿ ಅಸಹಕಾರ ಆಂದೋಳನ ನಡೆಸಲು ನಿರ್ಧರಿಸಿದರು.

ಅಸಹಕಾರ ಆಂದೋಳನ ಆರಂಭವಾಯಿತು. ಆ ವೇಳೆಗೆ ಲೋಕಮಾನ್ಯ ತಿಳಕರು ತೀರಿಕೊಂಡಿದ್ದರು. ಆದ್ದರಿಂದ ಇಡೀ ದೇಶದ ಮಾರ್ಗದರ್ಶನದ ಹೊಣೆ ಗಾಂಧೀಜಿಯವರ ಮೇಲೆಯೇ ಬಿತ್ತು. ಜನರಿಗೆ ವಿಚಾರ ತಿಳಿಸಲು, ಶಿಕ್ಷಣ ಕೊಡಲು ಗಾಂಧೀಜಿ 'ಯಂಗ್ ಇಂಡಿಯಾ' ಮತ್ತು 'ನವಜೀವನ' ಎಂಬ ವಾರಪತ್ರಿಕೆಗಳನ್ನು ಆರಂಭಿಸಿದರು. ಇಡೀ ದೇಶದಲ್ಲಿ ಈ ಚಳುವಳಿ ಭರದಿಂದ ಸಾಗಿತು. ಸರ್ಕಾರೀ ನೌಕರರು ಕೆಲಸಬಿಟ್ಟು ಚಳುವಳಿಗೆ ಸೇರಿದರು. ವಿದ್ಯಾರ್ಥಿಗಳು ಶಾಲಾ ಕಾಲೇಜು ತೊರೆದರು. ವಕೀಲರು ನ್ಯಾಯಾಲಯ ಬಹಿಷ್ಕರಿಸಿದರು. ಸ್ವದೇಶಿ ವ್ರತಹಿಡಿದರು. ರಾಷ್ಟ್ರೀಯ ವಿದ್ಯಾಲಯಗಳು ಆರಂಭವಾಗಿ ಸಾವಿರಾರು ತರುಣರು ತರಬೇತಿಪಡೆದು ರಚನಾತ್ಮಕ ಕೆಲಸಗಳಲ್ಲಿ ತುಂಬ ಉತ್ಸಾಹದಿಂದ ತೊಡಗಿದರು. ಸುಮಾರು 30 ಲಕ್ಷ ಚರಖಿಗಳು ಹರಡಿದವು. ತಿಲಕರ ಸ್ವರಾಜ್ಯನಿಧಿ ಸಂಗ್ರಹವಾಯಿತು. ಒಂದು ಕೋಟಿ ರೂ. ಸೇರಿತು. ಈ ರೀತಿ ಅಸಹಕಾರ ಆಂದೋಲನ ಭರದಿಂದ ಬೆಳೆಯಿತು.

ಅಹಮದಾಬಾದಿನಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಮಹಾಸಭೆ ಸೇರಿತು. ಗಾಂಧೀಜಿಯ ಚಳುವಳಿಗೆ ಸಂಪೂರ್ಣ ಬೆಂಬಲ ವ್ಯಕ್ತವಾಯಿತು. ರಾಷ್ಟ್ರದ ಜನತೆ ತಮ್ಮೊಡನೆ ಸರಿಯಾಗಿ ಸಹಕರಿಸಿದರೆ ಒಂದೇ ವರ್ಷದಲ್ಲಿ ಸ್ವರಾಜ್ಯ ಸಿಗುವುದೆಂದು ಗಾಂಧೀಜಿ ಘೋಷಿಸಿದರು. ಬಾರ್ಡೋಲಿ ಎಂಬಲ್ಲಿ ಸಾಮೂಹಿಕ ಸತ್ಯಾಗ್ರಹ ಆರಂಭವಾಯಿತು.ಅಷ್ಟರಲ್ಲಿ ಉತ್ತರಪ್ರದೇಶದ ಚೌರಿಚೌರಾ ಎಂಬಲ್ಲಿ ಹಿಂಸಾಚಾರ ನಡೆಯಿತು. ಅದನ್ನು ಕಂಡು ಗಾಂಧೀಜಿ ಸಾಕಷ್ಟು ಸಿದ್ಧತೆಯಿಲ್ಲದೇ ಅಹಿಂಸಾತ್ಮಕ ಚಳುವಳಿ ಪ್ರಾರಂಭಿಸುವುದು

ಸರಿಯಾಗದೆಂದು ಅರಿತರು. ಸತ್ಯಾಗ್ರಹ ನಿಲ್ಲಿಸಲು ತಿಳಿಸಿದರು. ಜನರೆಲ್ಲಾ ರಚನಾತ್ಮಕ ಕೆಲಸಗಳಲ್ಲಿ ತೊಡಗಲು ಕರೆಕೊಟ್ಟರು. ಇದರಿಂದ ಮುಖಂಡರಿಗೂ ಜನರಿಗೂ ತುಂಬಾ ನಿರಾಸೆ ಆಯಿತು.

ಗಾಂಧೀಜಿ ಅವರ ನಾಯಕತ್ವದ ಪರಿಚಯ, ಅವರ ಸಾಮರ್ಥ್ಯದ ಅರಿವು ಸರ್ಕಾರಕ್ಕೆ ಆಯಿತು. ಆದ್ದರಿಂದ ಅವರನ್ನು ಸೆರೆಹಿಡಿದು ಆರು ವರ್ಷ ಶಿಕ್ಷೆವಿಧಿಸಿದರು. ಆದರೂ ಜನತೆ ದುಡುಕದೆ ಗಾಂಧೀಜಿ ಅವರ ಮಾತಿಗೆ ಬೆಲೆಕೊಟ್ಟು ರಚನಾತ್ಮಕ ಕೆಲಸಗಳನ್ನೆಲ್ಲಾ ಮುಂದುವರೆಸಿತು. ಈ ರೀತಿ 1922 ರಲ್ಲಿ ಗಾಂಧೀಜಿ ಸೆರೆಮನೆ ಸೇರಿದರು. ಇತ್ತ ಕಾಂಗ್ರೆಸ್‌ನಲ್ಲಿ ಎರಡು ಗುಂಪಾಯಿತು. ಮೋತಿಲಾಲ್ ನೆಹರು, ಚಿತ್ತರಂಜನ್ ದಾಸ್ ಮೊದಲಾದ ಹಿರಿಯರು ಅಸಹಕಾರ ಚಳುವಳಿಯಿಂದ ಹಿಂದೆ ಸರಿಯಬೇಕೆಂಬ ವಿಚಾರವನ್ನಿಟ್ಟರು. ಸರ್ದಾರ್ ವಲ್ಲಭಭಾಯಿ ಪಟೇಲ್, ಸಿ.ರಾಜಗೋಪಾಲಾಚಾರಿ, ಗಂಗಾಧರರಾವ್ ದೇಶಪಾಂಡೆ, ಮುಂತಾದ ಯುವಕರು ಚಳುವಳಿಮುಂದುವರೆಸಬೇಕೆಂದು ಬಯಸಿದರು.

ಗಯಾದಲ್ಲಿ ಕಾಂಗ್ರೆಸ್ ಮಹಾಸಭೆ ಕೂಡಿತು. ಚಳುವಳಿ ಬೇಡೆನ್ನುವವರಿಗೂ ಬೇಕೆನ್ನುವವರಿಗೂ ತಿಕ್ಕಾಟ ಪ್ರಾರಂಭವಾಯಿತು. ಅದೇವೇಳೆಗೆ ಅಲ್ಲಲ್ಲಿ ನಡೆದ ಮತೀಯ ಗಲಭೆಗಳಿಂದ ಹಿಂದೂ ಮುಸ್ಲಿಂ ಒಡಕು ಸಹಾ ಆರಂಭವಾಯಿತು. ಕಾಂಗ್ರೆಸ್ ಸಂಸ್ಥೆಯೇ ಒಡೆಯುವ ಪರಿಸ್ಥಿತಿ ಏರ್ಪಟ್ಟಿತು. ಗಾಂಧೀಜಿ ಅವರನ್ನು ಸರ್ಕಾರ ಅನಾರೋಗ್ಯದ ಕಾರಣದಿಂದ ಬಿಡುಗಡೆಮಾಡಿತು.

ಇಂತಹ ಸಂದಿಗ್ಧಸಮಯದಲ್ಲಿ 1924 ರಲ್ಲಿ ಕರ್ನಾಟಕದ ಬೆಳಗಾವಿಯಲ್ಲಿ ಕಾಂಗ್ರೆಸ್ ಅಧಿವೇಶನ ಸೇರಿತು. ಗಾಂಧೀಜಿ ಇದರ ಅಧ್ಯಕ್ಷರು. ಶಾಸನಸಭೆಗಳಿಗೆ ಪ್ರವೇಶಿಸಿ ತನ್ಮೂಲಕ ಬ್ರಿಟೀಷ್ ಆಡಳಿತವನ್ನು ಎದುರಿಸಬೇಕೆಂದು ಕೆಲವರು ಬಯಸಿದರು. ಈ ವಿಚಾರಕ್ಕೆ ಬೆಳಗಾವಿ ಸಮ್ಮೇಳನದಲ್ಲಿ ಸಮ್ಮತಿ ದೊರಕಿತು. ಈ ಅಭಿಪ್ರಾಯದ ಜನರು 'ಸ್ವರಾಜ್ಯ ಪಕ್ಷ' ಎಂಬ ಪಕ್ಷವನ್ನು ಕಟ್ಟಿದರು. ರಚನಾತ್ಮಕ ಕೆಲಸಗಳನ್ನೇ ಮುಂದುವರೆಸಬೇಕೆನ್ನುವವರಿಗೆ ಗಾಂಧೀಜಿ ಒತ್ತಾಸೆಯಾಗಿ ನಿಂತರು. ಕೆಲವೇ ದಿನಗಳಲ್ಲಿ ಶಾಸನಸಭೆಗಳಲ್ಲಿ ಹೋಗಿ ನಡೆಸಿದ ಹೋರಾಟದಿಂದ ಪ್ರಯೋಜನ ಕಾಣದೇ ಆ ಜನರೂ ಮತ್ತೆ ಗಾಂಧೀಜಿ ಅವರ ಮಾರ್ಗದರ್ಶನವನ್ನೇ ಬಯಸಿದರು.

**ತೀವ್ರ ಅಹಿಂಸಾತ್ಮಕ ಹೋರಾಟ:**

1929ರಲ್ಲಿ ಪಂಡಿತ್ ಜವಹರಲಾಲ್ ನೆಹರು ಅವರ ಅಧ್ಯಕ್ಷತೆಯಲ್ಲಿ ಲಾಹೋರಿನಲ್ಲಿ ಕಾಂಗ್ರೆಸ್ ಅಧಿವೇಶನ ನಡೆಯಿತು. ಸಂಪೂರ್ಣ ಸ್ವಾತಂತ್ರ್ಯ ಗಳಿಸುವುದೇ ಕಾಂಗ್ರೆಸ್ಸಿನ ಗುರಿ ಎಂಬ ನಿರ್ಧಾರ ಆಯಿತು. ಇದನ್ನು ಸಾಧಿಸುವ ಹೊಣೆ ಗಾಂಧೀಜಿ ಅವರದಾಯಿತು. ಸ್ವರಾಜ್ಯ ಸಿಗುವವರೆಗೆ ಮತ್ತೆ ಆಶ್ರಮಕ್ಕೆ ಹಿಂತಿರುಗುವುದಿಲ್ಲ ಎಂದು ತೀರ್ಮಾನಿಸಿ

ಗಾಂಧೀಜಿ ಸಾಬರಮತಿ ಆಶ್ರಮದಿಂದ ಹೊರಟರು. ಆ ಕಾಲದಲ್ಲಿ ಬ್ರಿಟೀಷರು ತಮ್ಮ ದೇಶದಿಂದ ಉಪ್ಪನ್ನು ತಂದು ಭಾರತದಲ್ಲಿ ಮಾರುತ್ತಿದ್ದರು. ಇಲ್ಲಿಯೇ ತಯಾರಾಗುವ ಉಪ್ಪಿನ ಮೇಲೆ ತುಂಬ ಸುಂಕವನ್ನು ಹಾಕುತ್ತಿದ್ದರು. ಇದನ್ನು ವಿರೋಧಿಸಲು ಗಾಂಧೀಜಿ ನಿರ್ಧರಿಸಿದರು. ದಂಡಿ ಎಂಬಲ್ಲಿಗೆ 78 ಜನ ಸಹಕಾರ್ಯಕರ್ತರೊಂದಿಗೆ ಪಾದಯಾತ್ರೆಯಲ್ಲಿ ಹೋಗಿ ತಾವೇ ಸ್ವತಃ ಉಪ್ಪನ್ನು ತಯಾರಿಸಿದರು. ಸುಂಕಕೊಡದೇ ಅದನ್ನು ಮಾರಿದರು. ಈ ರೀತಿ ಸರ್ಕಾರದ ಅನಿಷ್ಟ ಖಾಯಿದೆಯನ್ನು ಮುರಿದು ಉಪ್ಪಿನ ಸತ್ಯಾಗ್ರಹ ಆರಂಭಿಸಿದರು. ದೇಶಾದ್ಯಂತ ಸಾವಿರಾರು ಜನರು ಉಪ್ಪಿನ ಸತ್ಯಾಗ್ರಹ ನಡೆಸಿದರು. ಸರ್ಕಾರ ಸತ್ಯಾಗ್ರಹಿಗಳ ಮೇಲೆ ತುಂಬಾ ಕಠಿಣವಾಗಿ ವರ್ತಿಸಿತು. ಗಾಂಧೀಜಿ ಅವರ ಬಂಧನವಾಯಿತು. ದೇಶಾದ್ಯಂತ ಸಹಸ್ರಾರು ಜನರು ಬಂಧಿಸಲ್ಪಟ್ಟರು. ಆದರೂ ಜನ ಹಿಂದೆಗೆಯಲಿಲ್ಲ. ಸರ್ಕಾರಕ್ಕೆ ಭೂ ಕಂದಾಯವನ್ನು ಕೊಡುವುದಿಲ್ಲ ಎಂಬ ಕರನಿರಾಕರಣೆಯ ಚಳುವಳಿಯೂ ಆರಂಭವಾಯಿತು. ಕಡೆಗೆ ಸರ್ಕಾರ ಮಣಿಯಲೇಬೇಕಾಯಿತು.

ಗಾಂಧೀಜಿ ಮತ್ತು ಇತರ ಮುಖಂಡರ ಬಿಡುಗಡೆಯಾಯಿತು. ಗಾಂಧೀ - ಇರ್ವಿನ್ ಒಪ್ಪಂದ ಆಯಿತು. ಚಳುವಳಿ ನಿಂತಿತು.ಈ ಒಪ್ಪಂದಕ್ಕೆ ಕಾಂಗ್ರೆಸ್‌ನ ಒಪ್ಪಿಗೆಪಡೆಯಬೇಕಾಗಿತ್ತು. ಕರಾಚಿಯಲ್ಲಿ ಕಾಂಗ್ರೆಸ್ ಅಧಿವೇಶನ ಕೂಡುವುದಿತ್ತು. ಆ ವೇಳೆಗೆ ಸರ್ಕಾರ ಭಗತ್ ಸಿಂಗ್ ಎಂಬ ವೀರಾಗ್ರಣಿಯನ್ನು ಗಲ್ಲಿಗೇರಿಸಿತ್ತು. ಜನ ಮತ್ತೆ ಕೋಪಗೊಂಡರು. ಕಾಂಗ್ರೆಸ್ಸಿನಲ್ಲಿ ಮತ್ತೆ ಒಡಕು ಕಾಣಿಸಿಕೊಂಡಿತು.ಆದರೆ ಗಾಂಧೀಜಿ ಚಾಕಚಕ್ಯತೆಯಿಂದ ವರ್ತಿಸಿ ಒಡಕನ್ನು ತಪ್ಪಿಸಿದರು. ಕರಾಚಿ ಕಾಂಗ್ರೆಸ್‌ನಲ್ಲಿ ಗಾಂಧಿ - ಇರ್ವಿನ್ ಒಪ್ಪಂದಕ್ಕೆ ಮನ್ನಣೆ ದೊರೆಯಿತು. ಇದರ ಫಲವಾಗಿ ಗಾಂಧೀಜಿ ದುಂಡುಮೇಜಿನ ಪರಿಷತ್ತಿಗಾಗಿ ಲಂಡನ್ನಿಗೆ ಹೋದರು ಭಾರತಕ್ಕೆ ಸಂಪೂರ್ಣ ಸ್ವಾತಂತ್ರ್ಯ ಕೊಡಬೇಕು. ಇದಕ್ಕೆ ಭಾರತದ ಮುಸ್ಲೀಮರು ಒಪ್ಪಬೇಕು. ಅವರ ಹಿತರಕ್ಷಣೆಗೆ ಸಾಧ್ಯವಾದುದನ್ನೆಲ್ಲ ಗಾಂಧೀಜಿ ಮಾಡಬೇಕು. ದುಂಡುಮೇಜಿನ ಪರಿಷತ್ತಿನಲ್ಲಿ ಇದು ಗಾಂಧೀಜಿ ಅವರ ವಿಚಾರಸರಣಿ ಆಗಿತ್ತು.

**ಉಪವಾಸ ಸತ್ಯಾಗ್ರಹ:**

ಗಾಂಧೀಜಿಯವರ ವಿಚಾರ ಇಂಗ್ಲೆಂಡಿನ ಆಳರಸರಿಗೆ ಒಪ್ಪಿಗೆ ಆಗಲಿಲ್ಲ ಸಂಧಾನ ಮುರಿದುಬಿತ್ತು. ಗಾಂಧೀಜಿ ಬರಿಗೈಲಿ ಹಿಂತಿರುಗಿಬಂದರು. ಅವರು ಭಾರತ ತಲುಪಿದ ಒಡನೆ ಸರ್ಕಾರ ಅವರನ್ನೂ, ಇತರ ಕಾಂಗ್ರೆಸ್ ಹಿರಿಯರನ್ನೂ ಬಂಧಿಸಿತು. ದೇಶದಲ್ಲಿ ಪುಂಡು ಗಂದಾಯ ವಿಧಿಸಿತು. ಎಲ್ಲೆಲ್ಲೂ ದಬ್ಬಾಳಿಕೆ ಪ್ರಾರಂಭವಾಯಿತು. ಬಂಗಾಲ ಹಾಗೂ ಸರಹದ್ದು ಪ್ರಾಂತಗಳಲ್ಲಂತೂ ಜನರಿಗೆ ವಿಚಿತ್ರ ಹಿಂಸೆ ಕೊಡತೊಡಗಿತು. ಸರ್ಕಾರ ಅನೇಕರನ್ನು ಬಂಧಿಸಿತು. ಹಲವರನ್ನು ಗಡೀಪಾರುಮಾಡಿತು. ಹಿಂದೂಗಳು

ಮನೆಯಿಂದ ಹೊರಗೆ ಓಡಾಡುವಾಗ ಪರಿಚಯಪತ್ರವನ್ನು ಜೊತೆಗೆ ಇಟ್ಟುಕೊಂಡಿರಬೇಕೆಂದು ನಿಯಮಮಾಡಿತು. ಇಂತಹುದೇ ಉಡುಪು ಧರಿಸಬೇಕೆಂಬ ನಿರ್ಬಂಧ ಸಹಾ ಉಂಟಾಯಿತು. ಶಾಲಾಕಾಲೇಜುಗಳನ್ನು ಮುಚ್ಚಿಬಿಟ್ಟರು. ರಸ್ತೆಗಳಲ್ಲಿ ಸೈಕಲ್ ಮೇಲೆ ಹೋಗುವುದು ಸಹಾ ಅಪರಾಧವೆಂದು ಸರ್ಕಾರ ಸಾರಿತು. ಹೀಗೆ ನಾನಾಬಗೆಯ ದಬ್ಬಾಳಿಕೆ ನಡೆಯಿತು. ಆದರೂ ಜನತೆ ಕಾಂಗ್ರೆಸ್ ಚಳುವಳಿಯನ್ನು ಧೈರ್ಯದಿಂದ ಮುಂದುವರೆಸಿತು. 1932ನೇ ಆಗಸ್ಟ್ 17ರಂದು ಇಂಗ್ಲೆಂಡಿನ ಪ್ರಧಾನಮಂತ್ರಿ ರಾಮ್ಸೆ ಮ್ಯಾಕ್ಡೊನಾಲ್ಡ್‌ರವರು ಭಾರತಕ್ಕೆ ಜಾತಿವಾರು ಪ್ರಾತಿನಿಧ್ಯನೀಡುವುದಾಗಿ ಸಾರಿದರು. ಇದರ ಪ್ರಕಾರ ಅಸ್ಪೃಶ್ಯರನ್ನು ಹಿಂದೂಗಳಲ್ಲವೆಂದು ಪರಿಗಣಿಸಿದರು. ಅವರಿಗೆ ಪ್ರತ್ಯೇಕ ವೋಟಿನ ಹಕ್ಕನ್ನು ಕೊಟ್ಟರು. ಇದರಿಂದ ಹಿಂದೂಧರ್ಮದ ಅಸ್ತಿತ್ವಕ್ಕೇ, ಹಿಂದೂಗಳ ಐಕ್ಯತೆಗೇ ಭಂಗ ಬರುವಂತಾಯಿತು. ಹರಿಜನರಿಗೂ ಅನ್ಯಾಯವಾದಂತಾಯಿತು. ದುಂಡುಮೇಜಿನ ಪರಿಷತ್ತಿನ ವೇಳೆಯಲ್ಲೇ ಇಂಗ್ಲೇಂಡಿನಲ್ಲೇ ಈ ಪ್ರಸ್ತಾಪಬಂದಿತ್ತು. ಈ ತೀರ್ಮಾನ ಜಾರಿಗೆ ಬರುವುದಾದರೆ ತಾವು ಅದನ್ನು ವಿರೋಧಿಸುವುದಾಗಿ ಗಾಂಧೀಜಿ ಅಲ್ಲೇ ತಿಳಿಸಿದ್ದರು. ಈ ಸುದ್ದಿ ತಿಳಿದೊಡನೆ ಗಾಂಧೀಜಿ ಬ್ರಿಟೀಷ್ ಪ್ರಧಾನಮಂತ್ರಿಗೆ ಪತ್ರ ಬರೆದರು. 'ಈ ಖಾಯಿದೆಯನ್ನು ರದ್ದುಮಾಡದೇಹೋದರೆ ನಾನು ಆಮರಣಾಂತ ಉಪವಾಸಮಾಡುತ್ತೇನೆ' ಎಂದು ತಿಳಿಸಿದರು. ಗಾಂಧೀಜಿಯವರ ಪತ್ರಕ್ಕೆ ಬ್ರಿಟೀಷ್ ಸರ್ಕಾರ ಯಾವ ಗಮನವನ್ನೂ ಕೊಡಲಿಲ್ಲ. ಗಾಂಧೀಜಿಯವರು ಉಪವಾಸ ಪ್ರಾರಂಭಿಸಿಯೇಬಿಟ್ಟರು. ದೇಶದಲ್ಲೆಲ್ಲಾ ಹಾಹಾಕಾರ ಎದ್ದಿತು. ದೇಶದ ಎಲ್ಲ ಪಕ್ಷ ಪಂಗಡದ ಹಿರಿಯರು ಪಂಡಿತ ಮಾಲವೀಯರ ಹಿರಿತನದಲ್ಲಿ ಸೇರಿ ಈ ಖಾಯಿದೆಯನ್ನು ವಿರೋಧಿಸಿದರು. ಹರಿಜನ ಧುರೀಣರಾದ ಅಂಬೇಡ್ಕರರೂ ಈ ಪ್ರತ್ಯೇಕ ಮತಾಧಿಕಾರ ಬೇಡವೆಂದು ಸಾರಿದರು. ಕಡೆಗೆ ಬ್ರಿಟೀಷ್ ಸರ್ಕಾರ ಜನಮತಕ್ಕೆ ಮಣಿದು ಆ ಖಾಯಿದೆಯನ್ನು ರದ್ದುಮಾಡುವ ತೀರ್ಮಾನವನ್ನು ಪಾರ್ಲಿಮೆಂಟಿನಲ್ಲಿ ಅಂಗೀಕರಿಸಿತು. 1933ರ ಮೇ 8ರಂದು ಗಾಂಧೀಜಿ ಹರಿಜನರಲ್ಲದವರ ಹಿಂದೂಗಳ ಹೃದಯ ಪರಿವರ್ತನೆಗಾಗಿ 21 ದಿನಗಳ ಉಪವಾಸ ಆರಂಭಿಸಿದರು. ಅದೇ ದಿನ ಸರ್ಕಾರ ಗಾಂಧೀಜಿ ಅವರನ್ನೂ ಜೈಲಿನಿಂದ ಬಿಡುಗಡೆಮಾಡಿತು. ರಾಜಕೀಯ ಬಂದಿಗಳೆಲ್ಲರನ್ನೂ ಬಿಡುಗಡೆ ಮಾಡಲು ಗಾಂಧೀಜಿ ವಿನಂತಿಸಿದರು. ಮೇ 29ಕ್ಕೆ ಗಾಂಧೀಜಿಯವರ ಉಪವಾಸ ಮುಕ್ತಾಯವಾಯಿತು. ಆ ವೇಳೆಗೆ ಸತ್ಯಾಗ್ರಹವೂ ನಿಂತಿತ್ತು. ಗಾಂಧೀಜಿ ಹರಿಜನಸೇವೆಗಾಗಿ ದೇಶಾದ್ಯಂತ ಪ್ರವಾಸ ಕೈಗೊಂಡರು. ಅನೇಕ ಜನ ಹರಿಜನ ಸೇವಾಕಾರ್ಯವನ್ನು ಒಂದು ಆಂದೋಲನವಾಗಿ ಕೈಗೊಂಡರು. ಕೆಲವು ಕಡೆ ಸನಾತನಿಗಳು ವಿರೋಧ ವ್ಯಕ್ತಮಾಡಿದರು. ಆದರೂ ದೇಶಾದ್ಯಂತ ಅಸ್ಪೃಶ್ಯತಾ ಭಾವನೆಗೆ ದೊಡ್ಡ ಗದಾಪ್ರಹಾರ ಬಿದ್ದಂತಾಯಿತು. ಹರಿಜನ ಕಲ್ಯಾಣನಿಧಿಗೆ ಲಕ್ಷಾಂತರ ರೂಪಾಯಿ ಸಂಗ್ರಹವಾಯಿತು.

1934ರಲ್ಲಿ ಗಾಂಧೀಜಿ ಮಹಾರಾಷ್ಟ್ರದ ವಾರ್ಧಾ ಬಳಿ ಬಂದುನಿಂತರು. ಶ್ರೀ ಜಮನಲಾಲ ಬಜಾಜ್‌ರ ನೆರವಿನಿಂದ ಅಲ್ಲಿ ಸೇವಾಗ್ರಾಮ ಆಶ್ರಮ ಸ್ಥಾಪನೆಗೊಂಡಿತು. ಗಾಂಧೀಜಿ ಅವರ ಗಮನವೆಲ್ಲಾ ಖಾದಿ ಗ್ರಾಮೋದ್ಯೋಗಗಳ ಅಭಿವೃದ್ಧಿ, ಅವುಗಳ ಸಾಧನ ಸಲಕರಣೆಗಳನ್ನು ಸುಧಾರಿಸುವುದು, ಭಾರತಕ್ಕೆ ಬೇಕಾದಂತಹ ಕೆಲಸಗಳ ಮೂಲಕ ಸ್ವಾವಲಂಬಿ ಶಿಕ್ಷಣ ಯೋಜನೆ, ರಾಷ್ಟ್ರಭಾಷಾ ಪ್ರಚಾರ, ಹರಿಜನ ಗಿರಿಜನ ಸೇವೆ ಮುಂತಾದ ಗ್ರಾಮಾಭಿವೃದ್ಧಿ ರಚನಾತ್ಮಕ ಕೆಲಸಗಳಲ್ಲಿ ವಿನಿಯೋಗವಾಯಿತು

**ಮಾಡು ಇಲ್ಲವೇ ಮಡಿ : ಭಾರತಬಿಟ್ಟು ತೊಲಗಿ:**

1940ರಲ್ಲಿ ಎರಡನೆ ಮಹಾಯುದ್ಧ ನಡೆಯುತ್ತಿತ್ತು. ಗಾಂಧೀಜಿ ಬ್ರಿಟೀಷ್ ಸರ್ಕಾರದೊಂದಿಗೆ ಭಾರತದ ಸ್ವಾತಂತ್ರ್ಯದ ಬಗ್ಗೆ ಸಂಧಾನ ನಡೆಸಿದರು. ಎಲ್ಲವೂ ವಿಫಲವಾಯಿತು. ಅದೇ ವರ್ಷ ಅಕ್ಟೋಬರ್ 17ರಂದು, ಗಾಂಧೀಜಿ ಯುದ್ಧವನ್ನು ವಿರೋಧಿಸುವ ವೈಯುಕ್ತಿಕ ಸತ್ಯಾಗ್ರಹ ಆರಂಭಿಸಿದರು. ವಿನೋಬಾ ಭಾವೆ ಮೊದಲನೆ ಸತ್ಯಾಗ್ರಹಿ. ಜವಹರಲಾಲ್ ಎರಡನೆ ಸತ್ಯಾಗ್ರಹಿ. ಸರ್ಕಾರ ಸತ್ಯಾಗ್ರಹಿಗಳನ್ನು ಬಂಧಿಸಿತು. ದೇಶಾದ್ಯಂತ ಸಾವಿರಾರು ಜನ ಯುದ್ಧವಿರೋಧಿ ಘೋಷಣೆ ಮಾಡಿ ಸತ್ಯಾಗ್ರಹ ನಡೆಸಿ ಜೈಲುಸೇರಿದರು. 1942ನೇ ಜನವರಿಯಲ್ಲಿ ಕಾಂಗ್ರೆಸ್ ಸಭೆಸೇರಿ ಸತ್ಯಾಗ್ರಹ ನಿಲ್ಲಿಸಲು ಕರೆಕೊಟ್ಟಿತು. ಸತ್ಯಾಗ್ರಹ ನಿಂತಿತು. ಗಾಂಧೀಜಿ ಬ್ರಿಟನ್ ಜರ್ಮನಿಗಳಿಗೆ ಯುದ್ಧ ನಿಲ್ಲಿಸಲು ವಿನಂತಿಸಿದರು. ಅದು ಫಲಿಸಲಿಲ್ಲ. ಇತ್ತ ಜಪಾನ್ ಸಹ ಬ್ರಿಟೀಷರ ವಿರುದ್ಧ ಯುದ್ಧಹೂಡಿತು. ಅದು ರಂಗೂನನ್ನು ಗೆದ್ದುಕೊಂಡಿತು. ಭಾರತದ ಮೇಲೆ ದಾಳಿಮಾಡುವ ಸೂಚನೆಕಂಡಿತು. ಆಗ ಭಾರತದ ಜನತೆಯ ಸಹಾಯ ಬ್ರಿಟೀಷರಿಗೆ ಅಗತ್ಯವಾಯಿತು. ಭಾರತದಲ್ಲಿ ಕಾಂಗ್ರೆಸ್ & ಇತರ ರಾಜಕೀಯ ಪಕ್ಷಗಳೊಂದಿಗೆ ಒಪ್ಪಂದಮಾಡಿಕೊಂಡು ಯುದ್ಧಕ್ಕೆ ಭಾರತದ ನೆರವುಪಡೆಯಲು ಬ್ರಿಟೀಷ್ ಸರ್ಕಾರ ಕ್ರಿಪ್ಸ್ ಎಂಬುವವರನ್ನು ಕಳಿಸಿತು. ಪ್ರಪಂಚಕ್ಕೆ ಬ್ರಿಟನ್ನಿನ ಉದ್ದೇಶ ನ್ಯಾಯವಾದುದು ಎಂದು ತೋರಿಸಿಕೊಡಲು ಮೊದಲು ಭಾರತಕ್ಕೆ ಸ್ವರಾಜ್ಯ ಕೊಡಬೇಕೆಂದು ಗಾಂಧೀಜಿ ಕ್ರಿಪ್ಸ್‌ರಿಗೆ ತಿಳಿಸಿದರು. ಬ್ರಿಟೀಷ್ ಸರ್ಕಾರ ಇದಕ್ಕೆ ಒಪ್ಪಲಿಲ್ಲ. ಕ್ರಿಪ್ಸ್ ಸಂಧಾನವೂ ಮುರಿದುಬಿತ್ತು.

1942 ರ ಆಗಸ್ಟ್ 8 ರಂದು ಮುಂಬಯಿಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಭೆಸೇರಿತು. ಯುದ್ಧದ ಪರಿಸ್ಥಿತಿ ಬಗೆಗೆ ವಿಚಾರನಡೆಯಿತು. 'ಬ್ರಿಟೀಷರೇ ಭಾರತಬಿಟ್ಟು ತೊಲಗಿ' ಎಂಬ ಘೋಷಣೆ ಅಂಗೀಕೃತವಾಯಿತು. ಗಾಂಧೀಜಿ ದೇಶದಜನತೆಗೆ 'ಮಾಡು ಇಲ್ಲವೇ ಮಡಿ' ಎಂಬ ಕರೆಕೊಟ್ಟರು. ಒಡನೆ ಅದೇ ದಿನ ಮಧ್ಯರಾತ್ರಿಗೆ ಸರ್ಕಾರ ಎಲ್ಲ ಧುರೀಣರನ್ನೂ ಬಂಧಿಸಿ ಜೈಲಿಗೆ ಹಾಕಿತು. ಜನತೆ ಗಾಂಧೀಜಿ ಅವರ ಕರೆಗೆ ಓಗೊಟ್ಟು ಜೀವದಾಸೆತೊರೆದು ಹೋರಾಟನಡೆಸಿತು. ಮುಖಂಡರೆಲ್ಲಾ ಸೆರೆಯಲ್ಲಿದ್ದರು. ಚಳುವಳಿಗೆ

ಮಾರ್ಗದರ್ಶಕರೇ ಇಲ್ಲದಾಯಿತು. ಜನತೆಯ ಕಿವಿಯಲ್ಲಿ 'ಮಾಡು ಇಲ್ಲವೇ ಮಡಿ' ಮತ್ತು 'ಬ್ರಿಟೀಷರೇ ಭಾರತ ಬಿಟ್ಟು ತೊಲಗಿ' ಸಂದೇಶಗಳು ಮಾತ್ರ ಗುಯಿಗುಟ್ಟುತ್ತಿದ್ದವು. ಚಳುವಳಿ ಅತ್ಯಂತ ಉಗ್ರರೂಪ ತಾಳಿತು

**ಆತ್ಮೀಯರ ಬಲಿದಾನ:**

ಗಾಂಧೀಜಿ ಅವರನ್ನೂ ಅವರ ಪತ್ನಿ ಕಸ್ತೂರಬಾ, ಅವರ ಕಾರ್ಯದರ್ಶಿ ಮಹದೇವ ದೇಸಾಯಿ ಮುಂತಾದ ಮುಂದಾಳುಗಳನ್ನೆಲ್ಲಾ ಪೂನಾದ ಆಘಾಖಾನ್ ಮಹಲ್‌ನಲ್ಲಿ ಸೆರೆಯಲ್ಲಿಟ್ಟಿದ್ದರು. ಕಸ್ತೂರಿಬಾ & ಮಹದೇವ ದೇಸಾಯಿಯವರ ಮರಣ ಅಲ್ಲಿಯೇ ಸೆರೆವಾಸದಲ್ಲೇ ಆಯಿತು. ಗಾಂಧೀಜಿ ತುಂಬಾ ದುಃಖಿತರಾದರು. ಇದರಿಂದ ಜನತೆ ಮತ್ತೂ ಸಿಟ್ಟುಗೊಂಡಿತು. ಸರಿಯಾದ ಮಾರ್ಗದರ್ಶನ ಮಾಡಲು ನಾಯಕರೂ ಇರಲಿಲ್ಲ. ಅವರೆಲ್ಲ ಜೈಲಿನಲ್ಲಿದ್ದರು. ಸರ್ಕಾರದ ಆಸ್ತಿಪಾಸ್ತಿಗಳಿಗೆ ಬೆಂಕಿ ಹಚ್ಚುವುದು, ಅಂಚೆ ಕಛೇರಿಗಳ ಲೂಟಿ, ರೈಲುಗಳ ಕಂಬಿಕೀಳುವುದು ಮುಂತಾದ ಹಿಂಸಾತ್ಮಕ ಕೆಲಸಗಳು ನಡೆದವು. ಸರ್ಕಾರವೂ ಸಾವಿರಾರು ಜನರನ್ನು ಬಂಧಿಸಿತು. ಅಲ್ಲಲ್ಲಿ ಗೋಲೀಬಾರ್ ನಡೆಯಿತು. ಅನೇಕ ದೇಶಭಕ್ತರೂ, ನಿರಪರಾಧಿಗಳು ಗುಂಡಿಗೆ ಬಲಿಯಾದರು. ಅನೇಕರು ಭೂಗತರಾಗಿ ಸರ್ಕಾರದ ಕೈಗೆಸಿಕ್ಕದೆ ಚಳುವಳಿಯನ್ನು ನಿಯಂತ್ರಿಸುತ್ತಿದ್ದರು. ಅಂತಹವರನ್ನು ಹಿಡಿದುಕೊಟ್ಟವರಿಗೆ ಸಹಸ್ರಾರು ರೂ. ಬಹುಮಾನ ಕೊಡುವುದಾಗಿ ಸರ್ಕಾರ ಘೋಷಿಸಿತು. ಅವರನ್ನು ಕಂಡಲ್ಲಿ ಗುಂಡಿಕ್ಕಿಕೊಲ್ಲಲು ಅಪ್ಪಣೆಮಾಡಿತು. ಕರ್ನಾಟಕವೂ ಈ ಆಂದೋಲನದಲ್ಲಿ ಮಹತ್ವದ ಪಾತ್ರ ವಹಿಸಿತು. ಮೈಸೂರಿನಲ್ಲಿ ರಾಮಸ್ವಾಮಿ ಎಂಬ ವಿದ್ಯಾರ್ಥಿ, ಧಾರವಾಡ ಜಿಲ್ಲೆಯ ಹೊಸರಿತ್ತಿಯಲ್ಲಿ ಮೈಲಾರ ಮಹದೇವಪ್ಪ, ತುಮಕೂರಿನಲ್ಲಿ ಗೊರೂರು ರಾಮಚಂದ್ರ ಮುಂತಾದ ಅನೇಕರು ಪೋಲೀಸರ ಗುಂಡಿಗೆ ಎದೆಗೊಟ್ಟರು.

ದೇಶದಲ್ಲಿನ ಈ ಹಿಂಸಾಚಾರ ಅತ್ಯಾಚಾರಕ್ಕೆಲ್ಲ ಕಾಂಗ್ರೆಸ್ & ಗಾಂಧೀಜಿಯೇ ಹೊಣೆ ಎಂದು ಬ್ರಿಟೀಷ್ ಸರ್ಕಾರ ಆಪಾದಿಸಿತು. 1942ನೇ ಡಿಸಂಬರ್ 30ರಂದು ಗಾಂಧೀಜಿ ಬ್ರಿಟೀಷ್ ವೈಸ್‌ರಾಯರಿಗೆ ಒಂದು ಪತ್ರ ಬರೆದರು. ದೇಶದ ಈ ಹಿಂಸಾಚಾರಕ್ಕೆ ತಾವು & ಕಾಂಗ್ರೆಸ್ ಹೇಗೆ ಹೊಣೆ ಎಂಬುದನ್ನು ಸರ್ಕಾರ ಮನವರಿಕೆ ಮಾಡಿಕೊಡಬೇಕು. ಇಲ್ಲದಿದ್ದರೆ ಅದನ್ನು ವಿರೋಧಿಸಿ ತಾವು ಉಪವಾಸ ಮಾಡುವುದಾಗಿ ತಿಳಿಸಿದರು. ಈ ಪತ್ರಕ್ಕೆ ಸರ್ಕಾರದಿಂದ ಬಂದ ಉತ್ತರ ಕೇವಲ ಅಸಮಂಜಸವಾಗಿತ್ತು. ಕಡೆಗೆ 1943 ನೇ ಫೆಬ್ರವರಿ 10 ರಂದು ಗಾಂಧೀಜಿ 21 ದಿನಗಳ ಉಪವಾಸ ಆರಂಭಿಸಿಯೇಬಿಟ್ಟರು. ಗಾಂಧೀಜಿ ಅವರ ದೇಹಸ್ಥಿತಿ ಕಳವಳಕಾರಿಯಾಯಿತು. ಅವರನ್ನು ಬಿಡುಗಡೆ ಮಾಡಬೇಕೆಂದು ದೇಶದ ಎಲ್ಲ ರಾಜಕೀಯ ಪಕ್ಷಗಳೂ ಒತ್ತಾಯಿಸಿದವು. ಆದರೂ ಸರ್ಕಾರ ಗಮನಿಸಲಿಲ್ಲ. ಕಡೆಗೆ ಮಾರ್ಚಿ 3 ರಂದು ಗಾಂಧೀಜಿಯವರ 21 ದಿನಗಳ

ಉಪವಾಸ ಸಾಂಗವಾಗಿ ಮುಗಿಯಿತು. ದೇಶದ ತುಂಬ ನಡೆಯುತ್ತಿದ್ದ ಆಂದೋಲನ & ಗಾಂಧೀಜಿಯ ಉಪವಾಸಗಳಿಂದ ಬ್ರಿಟೀಷ್ ಸರ್ಕಾರ ಹೆದರಿತು. 1944 ಮೇ 6ರಂದು ಗಾಂಧೀಜಿಯವರನ್ನು ಜೈಲಿನಿಂದ ಬಿಡುಗಡೆಮಾಡಿತು. ನಂತರ ಇತರ ಮುಖಂಡರ ಬಿಡುಗಡೆ ಸಹಾ ಆಯಿತು.

**ಜಾತೀಯ ಹಿಂಸಾಕಾಂಡ – ಅಹಿಂಸಾ ಶಕ್ತಿಯ ಒರೆಗಲ್ಲು:**

ಬ್ರಿಟೀಷ್ ಸರ್ಕಾರಕ್ಕೆ ಯುದ್ಧದಲ್ಲಿ ಭಾರತದ ಸಹಕಾರ ತುಂಬಾ ಅವಶ್ಯಕವಾಯಿತು. ಗಾಂಧೀಜಿ & ಕಾಂಗ್ರೆಸ್ ಸಂಸ್ಥೆ ಮಾತ್ರ ಇದನ್ನು ನೆರವೇರಿಸಬಲ್ಲುದು ಎಂದು ಮನಗಂಡು ಸರ್ಕಾರ ಎಲ್ಲ ಮುಖಂಡರ ಬಿಡುಗಡೆಯನ್ನೇನೋ ಮಾಡಿತು. ಆದರೆ ಯುದ್ಧದಲ್ಲಿ ಸಹಾಯಮಾಡಲು ಗುಲಾಮ ರಾಷ್ಟ್ರಕ್ಕೆ ಸಾಧ್ಯವಿಲ್ಲ. ಭಾರತಕ್ಕೆ ಸ್ವರಾಜ್ಯ ಕೊಟ್ಟರೆ ಮಾತ್ರ ಈ ವಿಚಾರಮಾಡಬಹುದು ಎಂದು ಗಾಂಧೀಜಿ ಸ್ಪಷ್ಟವಾಗಿ ಹೇಳಿದರು. ಕಾಂಗ್ರೆಸ್ ಹಾಗೂ ರಾಜಕೀಯ ಪಕ್ಷಗಳೊಂದಿಗೆ ಸಂಧಾನ ನಡೆಸಲು ಒಂದು ನಿಯೋಗ ಬಂತು. ಯುದ್ಧ ಮುಗಿದ ಒಡನೆ ಭಾರತಕ್ಕೆ ಸ್ವಾತಂತ್ರ್ಯ ಕೊಡುತ್ತೇವೆ. ಅಲ್ಲಿಯವರೆಗೆ ಮಧ್ಯಕಾಲಿಕ ಸರ್ಕಾರ ರಚಿಸಲ್ಪಡುತ್ತದೆ ಎಂದು ಆ ನಿಯೋಗ ತಿಳಿಸಿತು. ಕಾಂಗ್ರೆಸ್ ಇದಕ್ಕೆ ಒಪ್ಪಿತು. ಜಿನ್ನಾ ಹಾಗೂ ಮುಸ್ಲೀಂ ಲೀಗ್‌ನವರು ಮಾತ್ರ ಮುಸ್ಲೀಮರ ಪರವಾಗಿ ಮಧ್ಯಕಾಲೀನ ಸರ್ಕಾರದಲ್ಲಿ ಭಾಗವಹಿಸತಕ್ಕದ್ದು, ಹಿಂದೂಗಳಿಗೂ ಮುಸ್ಲೀಮರಿಗೂ ಸಮಾನ ಪ್ರಾತಿನಿಧ್ಯ ಇರಬೇಕೆಂದು ಬೇಡಿಕೆಯಿಟ್ಟರು. ಇದನ್ನು ಕಾಂಗ್ರೆಸ್ ಒಪ್ಪಲಿಲ್ಲ. ಎರಡೂ ಪಕ್ಷಗಳನ್ನೂ ಕೂಡಿಸಿ ಮಧ್ಯಕಾಲಿಕ ಸರ್ಕಾರ ರಚಿಸಬೇಕೆಂಬ ನಿಯೋಗದ ಉದ್ದೇಶ ಫಲಿಸಲಿಲ್ಲ.

ಕಡೆಗೆ ಲೀಗನ್ನು ಬಿಟ್ಟೇ ಕಾಂಗ್ರೆಸ್‌ಮಾತ್ರವೇ ಸರ್ಕಾರ ರಚಿಸಿತು. ಇದರಿಂದ ಲೀಗಿನವರಿಗೂ, ಜಿನ್ನಾಗೂ ಕೋಪಬಂತು. ಅವರು ಸರ್ಕಾರ & ಕಾಂಗ್ರೆಸ್ ವಿರುದ್ಧ ಹಿಂಸಾತ್ಮಕ ಚಳುವಳಿ ಪ್ರಾರಂಭಿಸಿದರು. ಪರಿಣಾಮವಾಗಿ ಬಂಗಾಲದಲ್ಲಿ 5 – 6 ಸಾವಿರ ನಿರಪರಾಧಿಗಳ ಕಗ್ಗೊಲೆ ನಡೆಯಿತು

ವೈಸ್‌ರಾಯ್ ವೇವಲ್ಲರು ಮಧ್ಯಸ್ಥಿಕೆ ಮಾಡುತ್ತಲೇ ಇದ್ದರು. ಕಡೆಗೆ 2 ತಿಂಗಳ ನಂತರ ಲೀಗ್ ಸರ್ಕಾರದಲ್ಲಿ ಸೇರಿಕೊಂಡಿತು. ಇದರಿಂದ ಮುಸ್ಲೀಮರು ಬಹುಸಂಖ್ಯೆಯಲ್ಲಿದ್ದ ನೌಖಾಲಿ ಪ್ರದೇಶದಲ್ಲಿ ಚಳುವಳಿ ಹರಡಿತು. ಗೂಂಡಾಗಳು ಶಸ್ತ್ರಧಾರಿಗಳಾಗಿ ಹಳ್ಳಿಗಳಿಗೆ ನುಗ್ಗಿದರು. ನಿರಪರಾಧಿಗಳ ಕೊಲೆ, ಸುಲಿಗೆ, ಅತ್ಯಾಚಾರ ಬೆಂಕಿಹಚ್ಚುವುದು ನಡೆಯಿತು. ಅನೇಕ ಊರುಗಳೇ ಭಸ್ಮವಾದವು. ಕಂಗೆಟ್ಟು ಜನ ತಲೆತಪ್ಪಿಸಿಕೊಂಡು ಪಶ್ಚಿಮ ಬಂಗಾಲಕ್ಕೆ ತಂಡತಂಡವಾಗಿ ವಲಸೆಬಂದರು.

ಆ ಸಮಯದಲ್ಲಿ ಗಾಂಧೀಜಿ ದೆಹಲಿಯ ಹರಿಜನ ಕಾಲೊನಿಯಲ್ಲಿದ್ದರು. ಈಗ ಸತ್ಯಾಗ್ರಹಿಯಾದ ತನ್ನ ಕರ್ತವ್ಯ ಏನೆಂದು ಚಿಂತಿಸಿದರು. ಮನೆಮಠ, ಆಸ್ತಿ ಪಾಸ್ತಿ,

ಹೆಂಡತಿ ಮಕ್ಕಳು, ಕಳೆದುಕೊಂಡ ದೀನ ನಿರ್ಗತಿಕರಿಗೆ ಧೈರ್ಯ ಸಮಾಧಾನ ಹೇಳಿ ನೆರವಾಗಲು ನಿರ್ಧರಿಸಿದರು. ಹಿಂಸೆ ತಾಂಡವವಾಡುತ್ತಿರುವಾಗ ಗಾಂಧೀಜಿ ಅಲ್ಲಿಗೆ ಹೋಗುವುದು ಗಂಡಾಂತರಕಾರಿ ಎಂದು ಅನೇಕ ಮಿತ್ರರು ವಿನಂತಿಸಿದರು. ಆದರೆ ಗಾಂಧೀಜಿ ಮಿತ್ರರ ಮಾತಿಗಿಂತ ತಮ್ಮ ಅಂತರ್ವಾಣಿಗೇ ಬೆಲೆಕೊಟ್ಟರು. ನೌಖಾಲಿಗೆ ಹೊರಟೇಬಿಟ್ಟರು. ಅವರು ನೌಖಾಲಿ ತಲುಪುವವೇಳೆಗೆ ಬಿಹಾರದಲ್ಲಿ ಹಿಂದೂಗಳಿಂದ ಹಿಂಸಾಕಾಂಡ ಆರಂಭವಾಯಿತು. ಅಲ್ಲಿಯ ಹಿಂಸೆ ಅಡಗದಿದ್ದರೆ ತಾವು ಮತ್ತೆ ಉಪವಾಸ ಆರಂಭಿಸುವುದಾಗಿ ತಿಳಿಸಿದರು. ಕೂಡಲೇ ಅಲ್ಲಿನ ಹಿಂಸೆ ಶಾಂತವಾಯಿತು.

ನೌಖಾಲಿಯಲ್ಲಿ ಒಬ್ಬರೇ ಪಾದಯಾತ್ರೆ ಮಾಡತೊಡಗಿದರು. ನೊಂದ ಹಿಂದೂಗಳನ್ನು ಕಂಡರು. ಧೈರ್ಯ ಸಮಾಧಾನ ಹೇಳಿದರು. ಮುಸ್ಲೀಮರನ್ನು ಕಂಡರು. ನಿಜಧರ್ಮ ಏನನ್ನುತ್ತದೆ ಎಂದು ತಿಳಿಸಿ ಹೇಳಿದರು. ದಿನವೂ ಸಂಜೆ ಪ್ರಾರ್ಥನೆಯ ನಂತರ ಪ್ರವಚನ ಕೊಡುತ್ತಿದ್ದರು. ಮೊದಮೊದಲು ಮುಸಲ್ಮಾನರು ಹತ್ತಿರ ಸುಳಿಯಲಿಲ್ಲ. ಕ್ರಮೇಣ ಪರಿಸ್ಥಿತಿ ಬದಲಾಯಿತು. ಸಹಸ್ರಾರು ಜನರು ಪ್ರಾರ್ಥನಾ ಸಭೆಗಳಿಗೆ ಬರತೊಡಗಿದರು. ಗಾಂಧೀಜಿಯನ್ನು ತಮ್ಮ ಮನೆಗಳಿಗೆ ಕರೆದೊಯ್ದರು. ಅವರ ವಸತಿಗೆ ತಮ್ಮ ಮನೆಗಳಲ್ಲಿಯೇ ಏರ್ಪಾಟುಮಾಡಲು ತೊಡಗಿದರು.

1947ನೇ ಆಗಸ್ಟ್ ಮೊದಲನೇ ವಾರದಲ್ಲಿ ಕಲ್ಕತ್ತೆಯಲ್ಲಿ ಜಾತೀಯ ದಂಗೆ ಪ್ರಾರಂಭವಾಯಿತು. ಅನೇಕ ಮುಸಲ್ಮಾನರ ಮನೆಗಳು ಸುಡಲ್ಪಟ್ಟವು. ಸಾವಿರಾರು ಜನರು ನಿರಾಶ್ರಿತರಾದರು. ಕೂಡಲೆ ಗಾಂಧೀಜಿ ಕಲ್ಕತ್ತೆಗೆ ಧಾವಿಸಿದರು. ಕಲ್ಕತ್ತಾದಲ್ಲಿ ಮುಸಲ್ಮಾನರ ಬೀದಿಯಲ್ಲೇ ವಸತಿಮಾಡಿದರು. ಇದರಿಂದ ಮುಸಲ್ಮಾನರಿಗೆ ಕೊಂಚ ಸಮಾಧಾನವಾಯಿತು. ಆದರೆ ಹಿಂದೂ ಮುಸ್ಲೀಮರಲ್ಲಿ ವೈಷಮ್ಯ ಹೋಗಲಿಲ್ಲ. ಕೊಲೆ, ಸುಲಿಗೆ, ಅತ್ಯಾಚಾರ ನಡೆಯುತ್ತಲೇ ಇದ್ದವು.

1947 ರ ಆಗಸ್ಟ್ 15 ರಂದು ಬ್ರಿಟೀಷರು ತಮ್ಮ ಎಲ್ಲ ಅಧಿಕಾರವನ್ನೂ ಬಿಟ್ಟುಕೊಟ್ಟು ಇಂಗ್ಲೆಂಡಿಗೆ ತೆರಳಿದರು. ಆದರೆ ಭರತಖಂಡವು ಭಾರತ & ಪಾಕಿಸ್ಥಾನ ಎಂದು ಎರಡು ತುಂಡಾಗಿತ್ತು. ಪೂರ್ವದ ಬಂಗಾಳ & ಪಶ್ಚಿಮದ ಪಂಜಾಬ್ಗಳ ವಿಭಜನೆ ಆದವು. ಆ ದಿನ ಭಾರತ ವಿಭಜನೆ ಆದ ನೋವು ಒತ್ತಟ್ಟಿಗೆ ಆದರೆ ದೇಶದ ತುಂಬಾ ತಾಂಡವವಾಡುತ್ತಿದ್ದ ಹಿಂದೂ ಮುಸ್ಲೀಂ ದ್ವೇಷದ ಕಾವು ಮತ್ತೊಟ್ಟಿಗೆ. ಹೀಗಾಗಿ ಸ್ವರಾಜ್ಯ ಬಂತೆಂಬ ಸಂತೋಷಕ್ಕಿಂತ ವಿಭಜನೆಯ, ಮತದ್ವೇಷದ, ಹಿಂಸಾಕಾಂಡದ ನೋವಿನಿಂದ ದುಃಖಿತರಾದರು ಗಾಂಧೀಜಿ. ಇಡೀದಿನ ಪ್ರಾರ್ಥನೆ ಉಪವಾಸಗಳಲ್ಲಿ ಕಳೆದರು. ನಾಡಿಗೊಂದು ಸಂದೇಶಕೊಡಲೂ ಸಹಾ ನಿರಾಕರಿಸಿದರು. ಕಡೆಗೆ ಧೀರ್ಘ ಆಲೋಚನೆಮಾಡಿ ಗಾಂಧೀಜಿಯವರು ಹಿಂದೂಗಳೂ ಮುಸಲ್ಮಾನರೂ ದ್ವೇಷ ವೈಷಮ್ಯ ತೊರೆದು ಹಿಂದಿನಂತೆ ಸಹೋದರರಂತೆ ಬಾಳಬೇಕು. ಇಲ್ಲದಿದ್ದರೆ ಆಮರಣಾಂತ ಉಪವಾಸ ಪ್ರಾರಂಭಿಸುವುದಾಗಿ ಘೋಷಿಸಿದರು. ಇಡೀ ರಾಷ್ಟ್ರ ಚಿಂತಿತವಾಯಿತು.

1947ನೇ ಸೆಪ್ಟೆಂಬರ್ 1 ರಂದು ಗಾಂಧೀಜಿ ಉಪವಾಸ ಆರಂಭಿಸಿಯೇಬಿಟ್ಟರು. 78 ವರ್ಷದ ಬಡಕಲುದೇಹದ ನೊಂದಜೀವ ಕೆಲವು ದಿನಗಳು ಸಹಾ ತಡೆಯುವಂತಿರಲಿಲ್ಲ. ಕಲ್ಕತ್ತಾದ ಹಿಂದೂ ಮುಸ್ಲೀಮರೆಲ್ಲ ಬಂದು ಗಾಂಧೀ ಅವರನ್ನು ಕಂಡರು. ತಾವು ದ್ವೇಷತೊರೆದು ಅನ್ಯೋನ್ಯರಾಗಿರುವುದಾಗಿ ವಾಗ್ದಾನಮಾಡಿದರು. ಕಡೆಗೆ ಅವರಿಂದ ಅದನ್ನು ಬರವಣಿಗೆಯಲ್ಲಿ ಬಯಸಿದರು ಗಾಂಧೀಜಿ. ಅವರೆಲ್ಲ ಪರಸ್ಪರ ಆಲೋಚಿಸಿ ಅದರಂತೆ ಬರೆದುಕೊಟ್ಟರು. ಸೆಪ್ಟೆಂಬರ್ 4ರಂದು 72 ಘಂಟೆಗಳ ಉಪವಾಸ ಮುಕ್ತಾಯವಾಯಿತು. ಕಲ್ಕತ್ತಾದಲ್ಲಿ ಶಾಂತಿಸ್ಥಾಪನೆಗಾಗಿ ಹಿಂದೂ ಮುಸಲ್ಮಾನ ಹಿರಿಯರೆಲ್ಲಾ ಕಂಕಣಬದ್ಧರಾದರು. ಗಾಂಧೀಜಿ ಹಿಂಸಾಕಾಂಡ ನಡೆಯುತ್ತಿದ್ದ ಪಂಜಾಬಿನತ್ತ ಪ್ರಯಾಣ ಮಾಡಿದರು. ಹಾದಿಯಲ್ಲಿ ದೆಹಲಿಯಲ್ಲಿ ಇವರನ್ನು ಕಾಣಲು ಬಂದ ಸರದಾರ ವಲ್ಲಭಭಾಯಿ ಪಟೇಲರೂ, ರಾಜಕುಮಾರಿ ಅಮೃತ ಕೌರರೂ, ದೆಹಲಿಯೇ ಗಲಭೆಯ ತಾಣವಾಗಿದೆ ಎಂದು ದುಃಖವಾರ್ತೆ ತಿಳಿಸಿದರು. ಗಾಂಧೀಜಿ ಅಲ್ಲಿಯೇ ಇಳಿದರು. ಅವರು ಉಳಿಯುತ್ತಿದ್ದ ಹರಿಜನ ಕಾಲೊನಿಯ ನಿವಾಸ ನಿರಾಶ್ರಿತರ ಕೇಂದ್ರವಾಗಿತ್ತು.ಆದುದರಿಂದ ಬಿರ್ಲಾಭವನದಲ್ಲಿ ತಂಗಿದರು. ದಿನವೂ ನಿರಾಶ್ರಿತರ ಶಿಬಿರಗಳಿಗೆ ಹೋಗಿ ಸಂತೈಸುತ್ತಿದ್ದರು. ಹಿಂದೂಗಳು ಈ ರೀತಿ ಮುಸಲ್ಮಾನ ಬಂಧುಗಳನ್ನು ಹಿಂಸಿಸಬಾರದೆಂದು ಹೇಳುತ್ತಿದ್ದರು. ಈ ಕಾರ್ಯಕ್ರಮ ಹಿಂದೂ ಮಹಸಭೆ, ರಾಷ್ಟ್ರೀಯ ಸ್ವಯಂಸೇವಕ ಸಂಘದವರಿಗೆ ಕೆಡುಕೆನಿಸಿತು. ಅವರು ಗಾಂಧೀಜಿ ಮುಸ್ಲೀಮರ ಪಕ್ಷ ಪಾತಿ ಎಂದು ದೂರಿದರು. ಕಡೆಗೆ ಅಲ್ಲಿಯ ದಂಗೆ ಶಾಂತವಾಗದಿದ್ದರೆ ಆಮರಣ ಉಪವಾಸ ಮಾಡುವ ಎಚ್ಚರಿಕೆಕೊಟ್ಟರು ಗಾಂಧೀಜಿ. ಪರಿಣಾಮವಾಗಿ ದೆಹಲಿ ಶಾಂತವಾಯಿತು.

**ಪೂರ್ಣಾಹುತಿ** : ಭಾರತ ಪಾಕಿಸ್ತಾನ ವಿಭಾಗ ಆಯಿತಷ್ಟೆ. ಭಾರತ ಪಾಕೀಸ್ತಾನಕ್ಕೆ 55 ಕೋಟಿ ರೂ. ಕೊಡಬೇಕಾಯಿತು. ಕಾಶ್ಮೀರ ಯಾರಿಗೆ ಸೇರಬೇಕೆಂಬ ಪ್ರಶ್ನೆ ಇನ್ನೂ ಉಳಿದಿತ್ತು. ಇತರ ಕೆಲವು ತೀರ್ಮಾನವಾಗದ ಅಂಶಗಳೂ ಇದ್ದವು. ಅದೆಲ್ಲ ನಿರ್ಧಾರ ಆದಮೇಲೆ 55 ಕೋಟಿ ರೂ. ಕೊಡುವುದಾಗಿ ಭಾರತ ಸರ್ಕಾರ ಹೇಳಿತು. ಪಾಕೀಸ್ತಾನಕ್ಕೆ ಕೊಡಬೇಕಾದುದನ್ನು ಮೊದಲು ಕೊಟ್ಟುಬಿಡಿ. ಅವರಿಂದ ಬರಬೇಕಾದುದನ್ನು ಹಿಂದಿನಿಂದ ಪಡೆಯಿರಿ ಎಂದು ಗಾಂಧೀಜಿ ಸಲಹೆಮಾಡಿದರು. ಇದರಿಂದ ಗಾಂಧಿ ವಿರೋಧಿಗಳಿಗೆ ಮತ್ತಷ್ಟು ಸಿಟ್ಟುಬಂತು. ಗಾಂಧೀಜಿಯವರ ಕೊಲೆಯ ಸಂಚು ನಡೆಯುತ್ತಿತ್ತು. ಇದರ ಸುಳಿವು ಗೃಹ ಮಂತ್ರಿ ಸರ್ದಾರ್ ಪಟೇಲರಿಗೆ ತಿಳಿಯಿತು. ಗಾಂಧೀಜಿಯವರ ಪ್ರಾರ್ಥನಾಸಭೆಗೆ ಗುಪ್ತ ಪೋಲೀಸರನ್ನು ನೇಮಿಸುವುದಾಗಿ ತಿಳಿಸಿದರು. ಗಾಂಧೀಜಿ ಅದಕ್ಕೆ ಒಪ್ಪಲಿಲ್ಲ. ಪರಮಾತ್ಮನ ರಕ್ಷಣೆ ಮಾತ್ರವನ್ನೇ ನಂಬುವುದಾಗಿ ತಿಳಿಸಿಬಿಟ್ಟರು.

1948ನೇ ಜನವರಿ 30ನೇ ದಿನಾಂಕ ಶುಕ್ರವಾರ ಗಾಂಧೀಜಿ ತಮ್ಮ ದಿನದ ಕೆಲಸಗಳನ್ನು ಎಂದಿನಂತೆ ನಡೆಸಿದರು. ಮಧ್ಯಾಹ್ನವೆಲ್ಲಾ ವಲ್ಲಭಬಾಯಿಜೊತೆ ತುಂಬಾ ಮಾತನಾಡಿದರು. ಪ್ರಾರ್ಥನೆಗೆ ಕೆಲವು ನಿಮಿಷ ತಡವೇ ಆಯಿತು. ಪ್ರಾರ್ಥನೆಗೆ ಹೊರಟರು. ಗಾಂಧೀಜಿ ನೆರೆದ ಸಭೆಗೆ ವಂದಿಸುತ್ತಾ ನಡೆದರು. ಎರಡು ಬದಿಯಲ್ಲೂ ಮನೂಗಾಂಧಿ ಅಭಾಗಾಂಧಿ ಇದ್ದರು. ಗಾಂಧೀಜಿ ವೇದಿಕೆ ಏರಬೇಕು. ಅಷ್ಟರಲ್ಲಿ ನಾಥೂರಾಂ ವಿನಾಯಕ ಗೋಡ್ಸೆ ಎಂಬ ಯುವಕ ಎದುರು ಬಂದು ಅವರ ಎದೆಗೆ ಗುರಿಯಿಟ್ಟು ಗುಂಡು ಹೊಡೆದೇಬಿಟ್ಟ. 'ಹೇ ರಾಮ್' ಎನ್ನುತ್ತಾ ಗಾಂಧೀಜಿ ಕುಸಿದು ಬಿದ್ದರು. ಕ್ಷಣಾರ್ಧದಲ್ಲಿ ಸುದ್ದಿ ಊರಿಗೆಲ್ಲಾ, ನಾಡಿಗೆಲ್ಲಾ, ವಿಶ್ವಕ್ಕೆಲ್ಲಾ ಹರಡಿತು. ಪ್ರಧಾನಿ ನೆಹರೂ, ಮಾಜಿ ವೈಸ್‌ರಾಯ್ ಮೌಂಟ್ ಬ್ಯಾಟನ್ ಮುಂತಾಗಿ ಎಲ್ಲರೂ ಬಿರ್ಲಾ ಭವನ ಸೇರಿದರು. ಆದರೆ ಗಾಂಧೀಜಿ ಇಹಲೋಕ ತ್ಯಜಿಸಿದ್ದರು. ಮರುದಿನ ರಾಜವೈಭವದಿಂದ ಸ್ಮಶಾನಯಾತ್ರೆ, ಸಂಜೆ 5 ಘಂಟೆಗೆ ಯಮುನಾ ತೀರದಲ್ಲಿ ದಹನಕ್ರಿಯೆ ನೆರವೇರಿತು. ಪ್ರಪಂಚದ ಎಲ್ಲ ರಾಷ್ಟ್ರಗಳೂ ತಮ್ಮ ತಮ್ಮ ರಾಷ್ಟ್ರಧ್ವಜಗಳನ್ನು ಅರ್ಧಮಟ್ಟಕ್ಕಿಳಿಸಿ ಮಹಾತ್ಮನಿಗೆ ಗೌರವಸೂಚಿಸಿದವು. ಯಾವ ಸರ್ಕಾರೀ ಸ್ಥಾನಮಾನದಲ್ಲೂ ಇಲ್ಲದ ಒಬ್ಬ ಸ್ವತಂತ್ರ ವ್ಯಕ್ತಿಗೆ ಇಡೀ ವಿಶ್ವದಲ್ಲಿ ಇಂತಹ ಗೌರವ ಸಂದಿರುವುದು ಮಹಾತ್ಮಗಾಂಧೀ ಅವರಿಗೆ ಮಾತ್ರ. ಜೀವಮಾನವಿಡೀ ದೇಶಕ್ಕಾಗಿ ದುಡಿದ, ರಾಷ್ಟ್ರ ನಿರ್ಮಾಣದ ಮಹಾಶಿಲ್ಪಿ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ದೇಶ ಸ್ವತಂತ್ರವಾದ 6 ತಿಂಗಳಿಗೂ ಮೊದಲೇ ಅಮರರಾದರು.

* * *

ರಾಮನಿಗೇಕೆ ಗುಡಿ, ವಾಲ್ಮೀಕಿಗೇ ಕಟ್ಟಲಿ! ಹೀಗೆ ಆರಂಭಗೊಂಡ ವಾದಕ್ಕೆ ಮುಂದೆ ಯಾವುದಾದರೂ ಕಿಡಿಗೇಡಿ ಪಕ್ಷ ಬೆಂಬಲಕೊಟ್ಟು ಅದನ್ನೇ ಒಂದು ಆಂದೋಲನವನ್ನಾಗಿ ರೂಪಿಸಿದರೂ ಆಶ್ಚರ್ಯವಿಲ್ಲ. ಈ ದೇಶ ಬರೀ 'ರಥಯಾತ್ರೆ ಬಂದ್' 'ಕರಸೇವೆ ಬಂದ್' ಇಂಥಹವುಗಳಿಂದಲೇ ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತಿದೆ. ಶಾಂತಿ ಸೌಹಾರ್ದತೆಗೆ ಹೆಸರಾದ ಭಾರತ ಅಶಾಂತಿಯ ತಾಣವಾಗುತ್ತಿದೆ. ಮುಂಬಯಿ ಮುಂತಾದ ನಗರಗಳಲ್ಲಿನ ಮಾನವರ ಗೋಳುನೋಡಿದರೆ ಎಂತಹ ಪರಿಸ್ಥಿತಿ ಬಂದಿದೆ ಎಂದು ದುಃಖ ಪಡುವಂತಾಗಿದೆ. ರಾಮ ಎಂಬುದು ಕೇವಲ ವಾಲ್ಮೀಕಿ ಚಿತ್ರಿಸಿದ ಒಂದು ಪಾತ್ರ. ಆ ಪಾತ್ರಕ್ಕೆ ಕಲ್ಪಿತ ರಾಮನಲ್ಲಿದ್ದ ಒಳ್ಳೆಯ ಗುಣಗಳಿಗೆ ಮಹತ್ವಕೊಟ್ಟು, ಅವನ್ನು ಚಿತ್ರಿಸಿದ ಮೂಲಪುರುಷನನ್ನು ಮರೆತುಬಿಡಬಹುದೇ? ಅಯೋಧ್ಯೆಯಲ್ಲಿ ಶ್ರೀರಾಮನ ಗುಡಿಯೂ ಬೇಡ, ಬಾಬರ್ ಕಟ್ಟಿಡ ಮಸೀದಿಯೂ ಬೇಡ! ಅಲ್ಲಿ ಮಹಾಕವಿ ವಾಲ್ಮೀಕಿಯ ಗುಡಿ ನಿರ್ಮಾಣವಾಗಲೀ (ಬಹುಶಃ 1988 ರಲ್ಲಿ ಬರೆದಿರಬಹುದಾದ ಒಂದು ಬರಹ)

# ಸರ್ವೋದಯ ಗೀತೆಗಳು

## ನಮೋ ಗಾಂಧಿತಾತ

(ನಮೋ ಭೂತನಾಥ ರಾಗದಲ್ಲಿ)

ನಮೋ ಗಾಂಧಿತಾತ, ನಮೋ ಶಾಂತಿದೂತ ।
ನಮೋ ಭಾರತಪುತ್ರ, ನಮೋ ಜಗನ್ಮಿತ್ರ ॥
ಶಾಂತಿಸತ್ಯವೇ ನಿನ್ನ ಪ್ರೇಮದ ದೈವ ।
ಭಗವದ್ಗೀತೆಯೆ ನಿನ್ನಯ ಪ್ರಾಣ ।
ನಮೋ ಭಾರತ ಯೋಗಿ, ತ್ಯಾಗಿ ಗಾಂಧಿ ॥
ಮಹಾ ಶಕ್ತಿ ಖಾದಿ, ಕ್ರಾಂತಿಯ ಹಾದಿ, ಎಂಬುದ ನೀನು ಹರಡಿದೆ ಜಗದಿ ।
ನಮೋ ಭಾರತ ಯೋಗಿ, ತ್ಯಾಗಿ ಗಾಂಧಿ ॥
ಹರಿಜನಸೇವೆ ಹರಿಸೇವೆ ಎಂದೆ, ಅಹಿಂಸಾಮಾರ್ಗದಿ ಸ್ವರಾಜ್ಯವ ತಂದೆ ।
ನಮೋ ಭಾರತ ಯೋಗಿ, ತ್ಯಾಗಿ ಗಾಂಧಿ ॥

* * * *

## ಭ್ರಾತೃ ಪ್ರೇಮವು ಬಾಳಲಿ

(ಸ್ವಾಮಿದೇವನೆ, ಲೋಕಪಾಲನೆ ಹಾಡಿನ ರಾಗದಲ್ಲಿ)

ಭ್ರಾತೃ ಪ್ರೇಮದಿ, ಬಂಧು ಭಾವದಿ, ದೇಶವೆಲ್ಲವು ಮೊಳಗಲಿ.
ನಿತ್ಯನಿತ್ಯವು ವ್ಯಕ್ತಿವ್ಯಕ್ತಿಲಿ, ಪ್ರೇಮಭಾವವು ಬೆಳಗಲಿ ॥
ಕೂಡಿಹಾಕುವ ವ್ಯಕ್ತಿ ಸ್ವಾರ್ಥವು, ಚಿಕ್ಕ ಮನಸ್ಸಿನ ರಾಜ್ಯವು ।
ಅಳಿಸಿಹೋಗಲಿ, ಮೂಡಿಬರಲಿ, ತ್ಯಾಗಧರ್ಮದ ದೃಷ್ಟಿಯು ॥
ಸುಖದ ಆಸೆಯು, ಶ್ರಮದ ತ್ಯಾಗವು, ಹಣದ ಸಂಗ್ರಹ ಬುದ್ಧಿಯು ।
ಪೂರ್ಣವಾಗಿ ಸಮಾಧಿಹೊಂದಲಿ, ಪ್ರೇಮ ಭಾವದಿ ಎಲ್ಲವೂ ॥
ತುಳಿದು ತಳ್ಳಿರಿ ಸ್ವಾರ್ಥದಾಸೆಯ, ಬಿಟ್ಟುಬಿಡಿರೈ ಮೋಸವಾ ।
ಒಮ್ಮೆ ಕಳಿಸಿರಿ ಬೇಧಭಾವವ, ನೆಟ್ಟು ಬೆಳೆಸಿರಿ ಪ್ರೇಮವಾ ॥

ಶಾಂತಭಾವದಿ ಪ್ರೇಮವಿಶ್ವವ, ಕಟ್ಟಿನೆಲೆಸುವ ಯೋಜನೆ ।
ಪ್ರೇಮದಿಂದಲಿ ಬಾಳಿಬದುಕುವ, ಶಾಂತಿಯಿಂದಲೆ ಸಾಯುವ ॥

* * * *

ದೀನರ ಬಂಧು ದೀನರ ಬಂಧು.
ನೋಡಿರಿ ಇಂದು, ಭಾರತಮಾತೆಯ ಪುತ್ರ ವಿನೋಬಾ ।
ದೇಶವ ತಿರುಗುತ, ದೇಹವ ಸವೆಸುತ,
ಭೂಮಿಯ ಬೇಡುತ ಬಡವರಿಗೀಯುತ ॥
ಭಾರತಯೋಗಿ, ಧರೆಯೊಳು ತ್ಯಾಗಿ,
ಕರಗಳ ಜೋಡಿಸಿ ಕೇಳ್ವನು ಬಾಗಿ॥
ತ್ಯಜಿಸಿರಿ ಮೋಹವ
ನಡೆಯಿರಿ ಧರೆಯೊಳು ಸತ್ಯದಿಂದ ॥

* * * *

ಸರ್ವೋದಯ ಪಾತ್ರೆ (ಒಂದು ಲಾವಣಿ ಗೀತೆ)
ಕೇಳಿರಿ ಕೇಳಿರಿ ಬಂಧುಗಳೇ, ಸರ್ವೋದಯ ಪಾತ್ರೆಯ ಮಹಿಮೆಯನು ।
ಸಂತ ವಿನೋಬಾ ಪ್ರೇರಿತಪಾತ್ರೆ, ಸರ್ವರ ಪ್ರೇಮವಗಳಿಸುವ ಪಾತ್ರೆ
ಮಕ್ಕಳ ದಾನವ ಪಡೆಯುವ ಪಾತ್ರೆ, ಚೊಕ್ಕದಿ ತ್ಯಾಗವ ಕಲಿಸುವ ಪಾತ್ರೆ ।
ಕಾಸಿನ ಮಾನ್ಯತೆ ಕಳೆಯುವ ಪಾತ್ರೆ, ಸಮತೆಯ ರಾಜ್ಯದ ದ್ಯೋತಕ ಪಾತ್ರೆ
ಇಂತು ದೇಶದಿ ಸಮತೆಯ ರಾಜ್ಯವ, ನೆಲೆಸಲು ನಿಂತ ಸರ್ವೋದಯ ಪಾತ್ರೆ ॥
ಮನೆಮನೆ ಮಕ್ಕಳ ನಿತ್ಯವು ತಪ್ಪದೆ, ಒಂದ್ಹಿಡಿ ಧಾನ್ಯವ ಬೇಡುವ ಪಾತ್ರೆ ।
ದೇಶಸೇವೆಯ ಮಾಡುವ ಅಣ್ಣಗೆ, ಪ್ರೇಮದಿ ಅಶನವ ನೀಡುವ ಪಾತ್ರೆ ।
ಮನದೊಳು ತ್ಯಾಗವ ಮೂಡಿಪ ಪಾತ್ರೆ, ನೀಡಿ ಉಣ್ಣಲು ಕಲಿಸುವ ಪಾತ್ರೆ ।
ಯಾರಿಗೂ ನೀಡದೆ ಉಣ್ಣಲುಬಾರದು, ಎಂದುಸಾರುವ ಸರ್ವೋದಯ ಪಾತ್ರೆ ।
ಸತ್ಯ ಸಮಾನತೆಗೆ ಸಮ್ಮತಿ ನೀಡಲು, ಸರ್ವರು ಇರಿಸಿರಿ, ಸರ್ವೋದಯ ಪಾತ್ರೆ ॥

(ಒಂದಾಗಿ ಬಾಳುವಾ, ಒಲವಿಂದ ಹಾಡಿನ ರಾಗದಲ್ಲಿ)
ಒಟ್ಟಾಗಿ ದುಡಿಯುವಾ. ಒಂದಾಗಿ ಬಾಳುವಾ,
ಸುಖಿಜೀವನ ಸವಿಬಾಳಿನ ಜೀವನ ಗ್ರಾಮದಾನವೆಂಬ ಮಂತ್ರ ॥
ರಾಮರಾಜ್ಯಕಿದುವೆ ತಂತ್ರ, ಇದರಿಂದಲೇ ಗ್ರಾಮನಂದನಾ,
ಬಾಳೆಲ್ಲ ಚಂದನ, ಬದುಕೆಲ್ಲ ಪಾವನಾ ॥ ಒಟ್ಟಾಗಿ..

ಒಬ್ಬೊಬ್ಬರಾಗಿ ಇಂದು, ಸ್ವಾರ್ಥಬಿಟ್ಟು ನಡೆಯೆಮುಂದು,
ನಾಡೆಲ್ಲವೂ ಸಂತೋಷದಿ ಭರದಿಂದ ಮಾಡ್ವುದು ಗ್ರಾಮದಾನ ಘೋಷಣೆ ॥
ಒಟ್ಟಾಗಿ. ಸಿರಿವಂತ, ನೀತಿವಂತ, ಮತಿವಂತರೆಲ್ಲ ಸೇರಿ,
ಜನಸೇವೆಯ, ನಾಡಸೇವೆಯಮಾಡಲು ॥ ಒಟ್ಟಾಗಿ ..

* * * *

ಸಂತ ವಿನೋಬ (ಉಡುಗೊರೆಯೊಂದ ತಂದಾ ಹಾಡಿನ ರಾಗದಲ್ಲಿ)
ನಡೆಯುತ ನಡೆಯುತ ಬಂದಾ, ಪ್ರೇಮ ಸಂದೇಶವ ತಂದಾ ।
ಭೂಮಿಯ ಬೇಡುತ ಬಂದಾ, ಬಡವರಿಗೀಯುತ ಬಂದಾ ।
ಅವನೇ ಸಂತವಿನೋಬಾ, ಭಾರತಪುತ್ರ ವಿನೋಬ ॥
ಬಿಡು ಎಂದಾ ವೈರವನು, ಪ್ರೇಮದಿ ಬಾಳಿರಿ ಎಂದಾ ।
ಪ್ರೀತಿಯ ಕಾಣಿಕೆಯೊಂದಾ ನೀಡಿರಿ ಜನರಿಗೆ ಎಂದ ।
ಸ್ವಾರ್ಥವ ಬಿಡಿ ಎಂದಾ, ಸನ್ಮಾರ್ಗದಿ ನಡೆಯಿರಿ ಎಂದ ॥

***

# ವಿನೋಬಾ ಕುರಿತು ಗೀತೆ:

ರಾಗೀಯ ಬೀಸುವೆನು ಅಳಬೇಡ ಎನಕಂದಾ.
ಹೇಳುವೆ ನಿನಗೆ ಕಥೆಯೊಂದ,
ವಿನೋಬಾ ಭಾವೆಯ ಕಥೆಯೊಂದ.
ಹುಟ್ಟೂರು ಗಾಗೋವೆ, ನರಹರಿಪಂತರು ಅವರ ತಂದೆ.
ತಾಯಿ ರುಕ್ಮಿಣಿಬಾಯಿ, ಧರ್ಮನಿಷ್ಠೆ
ದಯವಂತೆ, ದೀನರಕಂಡರೆ ಪ್ರೇಮವಂತೆ ॥
ವಿದ್ಯೆಯ ಕಲಿಯಲು ಶಾಲೆಗೆ ಕಳುಹಿದರು,
ಶಾಲೆಗೆ ಹೋದರು ಮನಸೆಲ್ಲಾ ಕನಸೊಂದ ನೇಯುತ್ತಿತ್ತು.
ಸ್ವರಾಜ್ಯ ಚಳುವಳಿಯು ಆ ಸಮಯದಲ್ಲಿ ಶುರುವಾಯ್ತು
ದಾದಾಬಾಯಿ ನವರೋಜಿ, ತಿಲಕರು ದೇಶದಲ್ಲಿ
ಸ್ವಾತಂತ್ರ್ಯದ ಕಹಳೆ ಊದಿದರು ಕಹಳೆಯಕೂಗ ಕೇಳಿ.
ವಿನೋಬಾರ ಮನದಲ್ಲಿ ಎದ್ದಿತು ತೆರೆಯೊಂದು ಭರದಲ್ಲಿ,
ತಾಯ್ನಾಡಿನ ಸೇವೆಯ ಮಾಡುವ ತೆರದಲ್ಲಿ
ಮನವನು ಖಂಡಿಸಿ. ತನುವನು ದಂಡಿಸಿ. ಮಾಡಿದರೊಂದು ಶಪಥಾವಾ.
ಬ್ರಹ್ಮಚರ್ಯದ ಶಪಥಾವಾ ಬೆಳೆಯುವ ಪೈರಿನ ಲಕ್ಷಣವು ಮೊಳಕೆಯಲ್ಲಿ
ಹಿರಿಯರ ಮಾತು ದಿಟವಾಯ್ತು. ವಿನೋಬಾರಿಗೆ ಸಂತಶರಣರ
ಗ್ರಂಥವು ಪ್ರಿಯವಾಯ್ತು ಜ್ಞಾನವನ್ನು ಗಳಿಸಲು, ಗುರುವನ್ನು ಪಡೆಯಲು ಹೋದರು
ಕಾಶಿಗೆ ಬಂಧುಗಳೆಲ್ಲರ ತೊರೆಯುತ್ತ,
ಭಾರತದ ಕಣ್ಮಣಿ ಮಹಾತ್ಮಗಾಂಧಿಯ ಗುರುವಿನ ಸಾನಿಧ್ಯಹೊಂದಿದರು
ಕಾಯಕವೆ ಕೈಲಾಸ, ಬಾಲಕರೆ ಪರಮೇಶ ಎನ್ನುತ ನುಡಿದುತೋರಿದರು
ಗುರುವಿನ ಪ್ರೇಮವ ಗಳಿಸಿದರು

* * * *

# ಇತರ ಕವನಗಳು

## ಬಣ್ಣದ ಹಕ್ಕಿ

ಬಣ್ಣದ ಹಕ್ಕಿ, ಎಲ್ಲಿಗೆ ಹಾರುವೆ,
ನಿನ್ನಯ ಜೊತೆಗೆ ನಾನೂ ಬರುವೆ
ರೆಕ್ಕೆಯ ಹರಡುತ ಹಾರುವೆ ಎಲ್ಲಿಗೆ,
ಕೈಗಳ ಹರಡುತ ಹಾರುವೆ ಅಲ್ಲಿಗೆ ॥

ದೂರದ ಕಾಡಿಗೆ ಹೋಗೋಣ,
ಹಣ್ಣುಹಂಪಲು ತಿನ್ನೋಣ,
ಮೇಲಕೆ ಮೇಲಕೆ ಹೋಗೋಣ,
ಆಗಸದಲ್ಲಿ ತೇಲೋಣ ॥
ಹಾರಲು ಆಗದು ಮಾಡಲಿ ಏನೂ
ನನಗೂ ಕಲಿಸು ಹಾರಲು ನೀನು
ಲಾಡುಚಿರೋಟಿ ಉಣಿಸುವೆ ನಾನು,
ನೇರಳೆ ಪೇರಳೆ ಕೊಡುವೆಯ ನೀನು ॥

ಕಾಡನು ನೋಡಲು ನನಗೂ ಇಷ್ಟ,
ನನ್ನನು ಒಯ್ಯಲು ನಿನಗೂ ಕಷ್ಟ
ಆದರು ಬಿಡೆನು ನಿನ್ನಯ ಸ್ನೇಹ,
ಬೇಗನೆ ತೀರಿಸು ಎನ್ನಯ ದಾಹ ॥

ಕಂಗಳಿದ್ಯಾತಕೋ (ಕಂಗಳಿದ್ಯಾತಕೋ ಕಾವೇರಿರಂಗನ ನೋಡದಾ ರಾಗ)

ಕಂಗಳಿದ್ಯಾತಕೋ ಶ್ವೇತಾದ್ರಿರಂಗನ ನೋಡದಾ ।
ಪರಿಪರಿಯ ಪರಿಮಳದ ಪುಷ್ಪಹಾರಗಳನು ಧರಿಸಿ,
ತೇರನೇರಿ ಬೀದೀಲಿಬರುವ
ಶ್ವೇತಾದ್ರಿರಂಗನ ನೋಡದಾ ॥ ಕಂಗಳಿದ್ಯಾತಕೋ ..

ವರುಷಕೊಮ್ಮೆ ಭಕ್ತಜನರು
ಬಂದು ಬೆಟ್ಟದಲ್ಲಿ ನಿಂದು,
ವರಕಲ್ಯಾಣಿಲಿ ಸ್ನಾನವಮಾಡಿ
ಶ್ವೇತಾದ್ರಿರಂಗನ ನೋಡದಾ ॥ ಕಂಗಳಿದ್ಯಾತಕೋ ..

ವಿವಿಧ ವೃಕ್ಷಗಳಮಧ್ಯೆ ಮೆರೆವ,
ಗಿರಿಯ ಸುತರ ಪ್ರೇಮದಿಪೊರೆವ,
ಪರಮಪಾವನ ಭವ್ಯರಂಗನಾ
ಶ್ವೇತಾದ್ರಿರಂಗನ ನೋಡದಾ ॥ ಕಂಗಳಿದ್ಯಾತಕೋ ..